1. ಕರ್ನಾಟಕ ದೇವದಾಸಿಯರ (ಸಮರ್ಪಣಾ ನಿಷೇಧ) (ತಿದ್ದುಪಡಿ) ವಿಧೇಯಕ, 2009
2. ಕರ್ನಾಟಕ ಅಬಕಾರಿ (ತಿದ್ದುಪಡಿ) ವಿಧೇಯಕ, 2009
3. ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕ, 2010
4. ಕರ್ನಾಟಕ ಧನವಿನಿಯೋಗ ವಿಧೇಯಕ, 2010
5. ಕರ್ನಾಟಕ ಧನವಿನಿಯೋಗ (ಲೇಖಾನುದಾನ) ವಿಧೇಯಕ, 2010
6. ಕರ್ನಾಟಕ ಸ್ಟಾಂಪು (ತಿದ್ದುಪಡಿ) ವಿಧೇಯಕ, 2010
7. ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದುಪಡಿ) ವಿಧೇಯಕ, 2010
8. ಕರ್ನಾಟಕ ಮಹಾನಗರ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ, 2009
9. ಕರ್ನಾಟಕ ಸಂಸ್ಕೃತ–ವೇದ ವಿಶ್ವವಿದ್ಯಾಲಯ ವಿಧೇಯಕ, 2009
10. ಅಜೀಂ ಪ್ರೇಂಜಿ ವಿಶ್ವವಿದ್ಯಾಲಯ ವಿಧೇಯಕ, 2010
11. ಕರ್ನಾಟಕ ಸ್ಥಳೀಯ ಪ್ರಾಧಿಕಾರಗಳ (ಪಕ್ಷಾಂತರ ನಿಷೇಧ) (ತಿದ್ದುಪಡಿ) ವಿಧೇಯಕ, 2010
12. ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) (ತಿದ್ದುಪಡಿ) ವಿಧೇಯಕ, 2010
13. ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ವಿಧೇಯಕ, 2010
14. ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ವಿಧೇಯಕ, 2010
15. ಬೆಂಗಳೂರು ನೀರು ಸರಬರಾಜು ಮತ್ತು ಗ್ರಾಮಸಾರ ಚರಂಡಿ ವ್ಯವಸ್ಥೆ ಹಾಗೂ ಇತರೆ ಕೆಲವು ಕಾನೂನುಗಳು (ತಿದ್ದುಪಡಿ) ವಿಧೇಯಕ, 2009

ಅಧ್ಯಕ್ಷರು : – ಮಂಡಿಸಲಾಯಿತು. ಈಗ ವಿರೋಧ ಪಕ್ಷದ ನಾಯಕರು ಬೆಳಿಗ್ಗೆ ಪ್ರಸ್ತಾಪ ಮಾಡಿದ ವಿಷಯವನ್ನು ಈಗ ಪ್ರಸ್ತಾಪ ಮಾಡುವುದು.

4. ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿಕೆ:

ವಿಷಯ : ಸನ್ಮಾನ್ಯ ಲೋಕಾಯುಕ್ತರ ರಾಜೀನಾಮೆಯಿಂದ ಉಂಟಾಗಿರುವ ಪರಿಸ್ಥಿತಿ ಬಗ್ಗೆ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಈಗಾಗಲೇ ನಾನು ಬೆಳಿಗ್ಗೆ ಪ್ರಸ್ತಾಪ ಮಾಡಿದಂತೆ Rule 60 ರ ಅಡಿಯಲ್ಲಿ ಮಹತ್ವಪೂರಕವಾದಂಥ, ಅತ್ಯಂತ ಗಂಭೀರವಾದಂಥ ಮತ್ತು ಬಹಳ ಪ್ರಾಮುಖ್ಯವಾದಂಥ ಒಂದು ವಿಚಾರವನ್ನು ಪ್ರಸ್ತಾಪ ಮಾಡಿದ್ದೇನೆ. ನಾನು ಈ ವಿಚಾರವನ್ನು ಬೆಳಿಗ್ಗೆ ಪ್ರಸ್ತಾಪ ಮಾಡಲು ನನಗೆ ಹೇಳಿ ಆಗ ನನಗೆ ಪ್ರಸ್ತಾಪ ಮಾಡಿದಾಗ ತಾವು ಮಾತನಾಡಿ ಪ್ರಶ್ನೋತ್ತರವಾದ ಮೇಲೆ ಈ ವಿಚಾರವನ್ನು ಪ್ರಸ್ತಾಪ ಮಾಡಲು ನನಗೆ ಹೇಳಿ ಆಗ ನನಗೆ ಪ್ರಸ್ತಾಪ ಮಾಡಲು ಅವಕಾಶ ನಿರಾಕರಣೆ ಮಾಡಿದಿರಿ. ನಾನು ನಿಮ್ಮ ತೀರ್ಮಾನವನ್ನು ಪ್ರಶ್ನಿಸುತ್ತಿದ್ದೇನೆಂದಲ್ಲ; ಬಹಳ ಗಂಭೀರವಾದಂಥ ಮತ್ತು ಮಹತ್ವವಾದಂಥ ವಿಚಾರಗಳು ಬಂದಾಗ ಎಲ್ಲಾ ವಿಷಯಗಳಿಗೂ ಕೂಡ ತಾವು ಈ ಸದನದಲ್ಲಿ ಒಂದೇ ರೀತಿಯಲ್ಲಿ ನಾನು ತೀರ್ಮಾನ ಮಾಡುವ ಅಗತ್ಯವಿಲ್ಲವೆನ್ನತಕ್ಕಂಥದ್ದು ನನ್ನ ಬಿನ್ನಹ. ನನ್ನ ಪ್ರಶ್ನೆ ಏನು ಎಂದರೆ, ನಾನೂ ಕೂಡ Question Hour ಇರಬೇಕು ಎಂದು ಹೇಳುವವನೇ ಆಗಿದ್ದೇನೆ. ಏಕೆಂದರೆ ನಾವೂ ಕೂಡ ಪ್ರಶ್ನೆ ಹಾಕಿರುತ್ತೇವೆ. ಆ ಕಡೆಯ ಮತ್ತು ಈ ಕಡೆಯ ಮಾನ್ಯ ಸದಸ್ಯರುಗಳು ಕೂಡ ಪ್ರಶ್ನೆಯನ್ನು ಅವರವರ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಹಾಕಿ ಸರ್ಕಾರದಿಂದ ಉತ್ತರವನ್ನು ಬಯಸಿರುತ್ತಾರೆ. ಆದುದರಿಂದ ಪ್ರಶ್ನೋತ್ತರ ಕೂಡ ಬಹಳ ಮುಖ್ಯವೇ ಆಗಿರುತ್ತದೆ. ನಾನು ಅದನ್ನು ಅಮುಖ್ಯ ಎಂದು ಹೇಳಿಯೇ ಇಲ್ಲ. ಅದು ಮುಖ್ಯವಾದರೂ ಕೂಡ ಇವತ್ತು ರಾಜ್ಯದಲ್ಲಿ ನ್ಯಾಯಮೂರ್ತಿ ಮತ್ತು ಈ ರಾಜ್ಯದ ಲೋಕಾಯುಕ್ತರಾಗಿರುವ ಸಂತೋಷ್ ಹೆಗ್ಡೆಯವರು ರಾಜೀನಾಮೆಯನ್ನು ಕೊಟ್ಟಿರುವುದರಿಂದ ರಾಜ್ಯದಲ್ಲಿ ಒಂದು ರೀತಿಯಲ್ಲಿ ಅಲ್ಲೋಲ ಕಲ್ಲೋಲವಾಗಿದೆ. ನೀವೆಲ್ಲರೂ ಟಿ.ವಿ.ಯಲ್ಲಿ ನೋಡಿದ್ದೀರಿ ಮತ್ತು ಕೇಳಿದ್ದೀರಿ. ಜನರು ಸ್ವಯಂಪ್ರೇರಣೆಯಿಂದ ಎಲ್ಲ ಕಡೆ ಪ್ರತಿಭಟನೆಯನ್ನು ಮಾಡುತ್ತಿದ್ದಾರೆ. ಅನೇಕ ಜನ ಬುದ್ದಿಜೀವಿಗಳು ಏನು ಹೇಳುತ್ತಿದ್ದಾರೆಂದರೆ, ಹೆಗ್ಡೆಯವರು ಲೋಕಾಯುಕ್ತರಾಗಿ ಬಂದಮೇಲೆ ಭ್ರಷ್ಟಾಚಾರದ ವಿರುದ್ಧ

ಯುದ್ಧವನ್ನು ಸಾರಿದ್ದರು ಮತ್ತು ಭ್ರಷ್ಟ ಅಧಿಕಾರಿಗಳಿಗೆ ಸಿಂಹಸ್ವಪ್ನರಾಗಿದ್ದರು, ಗಣಿ ಮಾಫಿಯಾದ ವಿರುದ್ಧ ಹೋರಾಟವನ್ನು ಪ್ರಾರಂಭ ಮಾಡಿದ್ದರು ಎಂದು ಹೇಳಿ ಇಂಥ ವ್ಯಕ್ತಿಗಳು ರಾಜೀನಾಮೆ ಕೊಡತಕ್ಕಂಥದ್ದು ಯಾರೋ ಕೆಲವರಿಗಲ್ಲ, ಇಡೀ ರಾಜ್ಯದ ಜನರಿಗೆ ನೋವಾಗಿದೆ ಮತ್ತು ಭ್ರಷ್ಟಾಚಾರದ ವಿರುದ್ಧದ ಹೋರಾಟಕ್ಕೆ ಹಿನ್ನಡೆಯಾಗಿದೆ ಎನ್ನತಕ್ಕಂಥ ಅಭಿಪ್ರಾಯವನ್ನು ಹೇಳಿದ್ದಾರಲ್ಲದೇ, ಇದೇ ಅಭಿಪ್ರಾಯ ಕರ್ನಾಟಕ ರಾಜ್ಯದ 6 ಕೋಟಿ ಕನ್ನಡಿಗರಲ್ಲಿ ಬಹುತೇಕ ಜನರ ಅಭಿಪ್ರಾಯವೂ ಇದೇ ಆಗಿದೆಯೆಂದು ಹೇಳಿದ್ದಾರೆ. ಬಹುಶಃ ಈ ಅಭಿಪ್ರಾಯ ರೂಲಿಂಗ್ ಪಾರ್ಟಿಯವರು ಕೂಡ ಒಪ್ಪಿಕೊಳ್ಳುತ್ತಾರೆಂದು ನನ್ನ ಭಾವನೆ. ಏಕೆಂದರೆ ಸಂತೋಷ್ ಹೆಗ್ಡೆಯವರು ರಾಜೀನಾಮೆ ಕೊಟ್ಟಮೇಲೆ ಮಾನ್ಯ ಮುಖ್ಯಮಂತ್ರಿಗಳು ಅದಕ್ಕೆ react ಮಾಡುವಾಗ ಏನು ಹೇಳಿದ್ದಾರೆಂದರೆ, 'ಇದು ದುರದೃಷ್ಟಕರ, most unexpected and unfortunate ಎಂದು ಹೇಳಿದ್ದಾರಲ್ಲದೆ, ಹೆಗ್ಡೆಯವರು ಬಹಳ ಪ್ರಾಮಾಣಿಕರು, ನನಗೆ ಅವರ ಬಗ್ಗೆ ಬಹಳ ಗೌರವವಿದೆ, ಅವರು ರಾಜೀನಾಮೆಯನ್ನು ಕೊಡಬಾರದಾಗಿತ್ತು, ಅವರು ಭ್ರಷ್ಟಾಚಾರದ ವಿರುದ್ಧ ಹೋರಾಟವನ್ನು ಮಾಡುತ್ತಿದ್ದರು.' ಎನ್ನತಕ್ಕಂಥ ಮಾತುಗಳನ್ನು ಹೇಳಿದ್ದಾರೆ. ಈ ರೀತಿಯ ಮಾತುಗಳನ್ನು ಹೇಳುತ್ತಿರುವಾಗ ಮಾಧ್ಯಮದವರು ಪ್ರಶ್ನೆ ಹಾಕಿ ಸಂತೋಷ್ ಹೆಗ್ಡೆಯವರಿಗೆ ರಾಜೀನಾಮೆಯನ್ನು ವಾಪಸ್ ತೆಗೆದುಕೊಳ್ಳಿ ಎಂದು ನೀವು ಕೇಳುತ್ತೀರಾ ಎಂದಾಗ 'ಇಲ್ಲ, ಇಲ್ಲ, ಅವರಿಗೆ ಆ ರೀತಿ ಕೇಳಿದರೆ ಅವರಿಗೆ ಮುಜುಗರವಾಗಿ ಬಿಡುತ್ತದೆ. ಆದ್ದರಿಂದ ಆ ರೀತಿ ಅವರಿಗೆ ನಾನು ಹೇಳುವುದಿಲ್ಲ.' ಎಂದಿದ್ದಾರೆ. ಅಂದರೆ ಒಂದು ರೀತಿ ವ್ಯಂಗವಾಗಿ ಹೇಳಿದಂತಿದೆ. 'ಲೋಕಾಯುಕ್ತರಿಗೆ ರಾಜೀನಾಮೆ ವಾಪಸ್ ತೆಗೆದುಕೊಳ್ಳಿ ಎಂದರೆ ಅವರಿಗೆ ಮುಜುಗರವಾಗುತ್ತದೆಯಾದ್ದರಿಂದ ನಾನು ಅವರಿಗೆ ರಾಜೀನಾಮೆಯನ್ನು ವಾಪಸ್ಸು ಎಂದು ಹೇಳುವುದಿಲ್ಲ ಎಂದಿದ್ದಾರೆ. ಮುಖ್ಯಮಂತ್ರಿಗಳೆ, ತಾವು 25ನೇ ತಾರೀಖು meet the press programme ನಲ್ಲಿ ಈ ರೀತಿ ಹೇಳಿದ್ದೀರಿ. ಲೋಕಾಯುಕ್ತರವರು ರಾಜೀನಾಮೆಯನ್ನು ಕೊಟ್ಟಿರುವುದು 23ನೇ ತಾರೀಖು. ಮಂತ್ರಿಗಳು ಕೂಡ ಕೆಲವರು ಹೇಳಿದ್ದಾರೆ. ಮಂತ್ರಿಗಳಾದ ಅಶೋಕ್‌ರವರು

ಕೂಡ ಹೇಳಿದ್ದಾರೆ, 'ನಾವು ಅವರನ್ನು ರಾಜೀನಾಮೆ ವಾಪಸ್ ತೆಗೆದುಕೊಳ್ಳಿ ಎಂದು ರಿಕ್ವೆಸ್ಟ್ ಮಾಡುತ್ತೇವೆ.' ಎಂದು ಹೇಳಿದ್ದಾರೆ.

ಶ್ರೀ ಆರ್. ಅಶೋಕ್: ನೀವು ಹೇಳಿದ ರೀತಿಯಲ್ಲಿ ನಾನು ಹೇಳಿಲ್ಲ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು): ಏಕೆ ಈ ರೀತಿ ನೀವು ಹೇಳಿದ್ದನ್ನು ಬದಲಾಯಿಸಿಕೊಳ್ಳುತ್ತೀರಿ? ವಾಪಸ್ ತೆಗೆದುಕೊಳ್ಳಿ ಎಂದು ನೀವು ಹೇಳಿದ್ದೀರಿ.

ಶ್ರೀ ಆರ್. ಅಶೋಕ್: ಪೇಪರ್ ನೋಡಿ ಹೇಳಿ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು): ಎಲೆಕ್ಟ್ರಾನಿಕ್ ಮೀಡಿಯಾದಲ್ಲಿ ಬಂದಿದೆ. ನೀವು ಆ ರೀತಿ ಹೇಳಿದ ಪದಗಳನ್ನೇ ನಾವು ಮಾಧ್ಯಮದಲ್ಲಿ ಕೇಳಿದ್ದೇವೆ. ನೀವು ಹೇಳಿಯೇ ಇಲ್ಲವೆಂದರೆ ಹಾಗೆಯೇ ತಿಳಿದುಕೊಳ್ಳೋಣ ಬಿಡಿ. ಮಾನ್ಯ ಬಚ್ಚೇಗೌಡರು ಏನು ಹೇಳಿದ್ದಾರೆಂದರೆ, 'ರಾಜೀನಾಮೆಯನ್ನು ವಾಪಸ್ ತೆಗೆದುಕೊಳ್ಳಿ ಎಂದು ಕೇಳುತ್ತೇವೆ, ಆದರೆ ಲೋಕಾಯುಕ್ತರಿಗೆ ಪರಿಮಾಧಿಕಾರ ಕೊಡುವುದಕ್ಕೆ ಆಗುವುದಿಲ್ಲ.' ಎಂದು ಹೇಳಿದ್ದಾರೆ. ಆಮೇಲೆ ನಮ್ಮ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಕೂಡ ಮಾತನಾಡಿ' ರಾಜೀನಾಮೆಯನ್ನು ವಾಪಸ್ ತೆಗೆದುಕೊಳ್ಳಿ ಎಂದು ಲೋಕಾಯುಕ್ತರ ಮನ ಒಲಿಸುತ್ತೇವೆ.' ಎಂದು ಹೇಳಿದ್ದಾರೆ. ಆದರೆ Chief Minister ಮಾತ್ರ 'ಇಲ್ಲ, ನಾನು ರಾಜೀನಾಮೆ ವಾಪಸ್ ತೆಗೆದುಕೊಳ್ಳಿ ಎಂದು ಲೋಕಾಯುಕ್ತರಿಗೆ ಹೇಳುವುದಿಲ್ಲ' ಎಂದಿದ್ದಾರೆ. ಲೋಕಾಯುಕ್ತರಿಗೆ ಮುಜುಗರವಾಗಿಬಿಡುತ್ತದೆ ಎಂದು ವ್ಯಂಗ್ಯವಾಗಿ ಹೇಳಿದ್ದಾರೆ. ಇದನ್ನೇನು ಅವರು ಪ್ರಾಮಾಣಿಕವಾಗಿ ಹೇಳಿದ ಮಾತಲ್ಲ. ಬಹಳ ವ್ಯಂಗ್ಯವಾಗಿ ಹೇಳಿರುವುದು.

ಅಧ್ಯಕ್ಷರು: ಸಂಕ್ಷಿಪ್ತವಾಗಿ ಹೇಳಿ.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ಇದು ಇನ್ನೂ Preliminary submission. ಇದರ ಬಗ್ಗೆ details ಆಮೇಲೆ ಹೇಳುತ್ತೇನೆ. ನೀವು ಚರ್ಚೆ ಮಾಡಲು ನನಗೆ ಅವಕಾಶ ಕೊಟ್ಟಮೇಲೆ ನಾನು ವಿವರಗಳನ್ನೆಲ್ಲಾ ಸವಿಸ್ತಾರವಾಗಿ ಹೇಳುತ್ತೇನೆ. No conversion, ನಿಯಮ 60ರ ಅಡಿಯಲ್ಲಿ ಈ ವಿಷಯವನ್ನು ತೆಗೆದುಕೊಳ್ಳಬೇಕು, ಆ ನಿಯಮದಡಿಯಲ್ಲಿ ಚರ್ಚೆಯನ್ನು ಮಾಡೋಣ. ಏಕೆ

conversion ಮಾಡುವುದು? I belive in conversion, but not in forceful conversion. ಇವತ್ತು ಬಹಳ ಗಂಭೀರವಾದ ವಿಷಯ ಚರ್ಚೆಯಾಗುತ್ತಿರುವುದರಿಂದ ಅದನ್ನು dilute ಮಾಡಬಾರದು. ನೀವು dilute ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಿ, ಅದು ನಮಗೆ ಗೊತ್ತಿದೆ. ನೀವು ಹೇಳಿದರೂ ಕೂಡ ನಾನು ಇವತ್ತು ಕೋಪಿಸಿಕೊಳ್ಳುವುದಕ್ಕೆ ಹೋಗುವುದಿಲ್ಲ. ಏಕೆಂದರೆ ನೀವು ದಾರಿ ತಪ್ಪಿಸುವ ಪ್ರಯತ್ನ ಮಾಡುತ್ತೀರಿ, ನನಗೆ ಗೊತ್ತಿದೆ. ಮಾನ್ಯ ಯಡಿಯೂರಪ್ಪನವರು ಈ ಕಡೆ ಈ ಕಡೆ ಸನ್ನೆ ಮಾಡುತ್ತಾರೆ. ನೀವು ಏನು ಮಾಡಿದರೂ ನಾನೂ ಈ ಕಡೆ ತಿರುಗಿಯೇ ನೊಡುವುದಿಲ್ಲ. ನಿಮ್ಮ ಬಗ್ಗೆ ನನಗೆ ಗೌರವ ಇದೆ. ಆದರೆ ನಿಮ್ಮ ಕಡೆ ತಿರುಗಿ ನೋಡುವುದಿಲ್ಲ. ನೆಹರು ಓಲೆಕಾರ್ ಅವರೇ, ನೀವು ನಮ್ಮ ಜೊತೆಯಲ್ಲಿ ಇದ್ದಿರಿ, ಈಗ ನೀವು ಏಕೆ ಈ ರೀತಿ ಆಡುತ್ತಿದ್ದೀರಾ? ಬಹಳ ದಿವಸ ನಮ್ಮ ಜೊತೆ ಇದ್ದಾಗ ನೀವು ಈ ರೀತಿ ಇರಲಿಲ್ಲ.

ಶ್ರೀ ಎಸ್. ಸುರೇಶ್ ಕುಮಾರ್ : ಯಾರ್‍ಯಾರು ಯಾರ್‍ಯಾರ ಜೊತೆ ಯಾವ್ಯಾವಾಗ ಇದ್ದರು ಎನ್ನುವುದೇ ಗೊತ್ತಾಗಲ್ಲವಲ್ಲ.

ಶ್ರೀ ಸಿದ್ದರಾಮಯ್ಯ : ಯ್ಯಾವ್ಯಾವಾಗ ಇದ್ದರೆಂದು ನಿಮಗೂ ಗೊತ್ತಿದೆ, ನನಗೂ ಗೊತ್ತಿದೆ, ಸುಮ್ಮನೆ ಏಕೆ ಹೇಳುತ್ತೀರಿ?

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ರೇವಣ್ಣನವರೆ, ನಿಮಗೆ ಅಕಸ್ಮಾತಾಗಿ ಮಾನ್ಯ ಸಿದ್ದರಾಮಯ್ಯನವರೆ, ನೀವು ನಮ್ಮ ಜೊತೆ ಇದ್ದಾಗ ಹೇಗಿದ್ದಿರಿ? ನಮ್ಮ ಜೊತೆ ಇದ್ದಾಗ ಹೀಗಿರಲಿಲ್ಲ, ಈಗ ಏಕೆ ಹೀಗಾಗಿದೆ ಎಂದು ಹೇಳಿದರೆ ಏನು ಹೇಳುತ್ತೀರಿ?

ಶ್ರೀ ಸಿದ್ದರಾಮಯ್ಯ : ನಾವು, ನೀವೂ ಸ್ವಲ್ಪ ದಿನ ಜೊತೆಯಲ್ಲಿ ಇರಲಿಲ್ಲವೇ? ನೀವು ಅವರಿಂದ ಹೇಳಿಸಿ ನೋಡೋಣ.

ಶ್ರೀ ಸುರೇಶ್ ಕುಮಾರ್ : ಅವರು ಹೇಳುತ್ತಾರೆ.

ಶ್ರೀ ಸಿದ್ದರಾಮಯ್ಯ : ನೀವು ಅವರಿಂದ ಹೇಳಿಸಿ ನೋಡೋಣ. ಅವರು ನಿಮ್ಮ ಮಾತು ಕೇಳಿ ಬಿಡುತ್ತಾರಾ? ನೀವು ಏನೇ ಮಾಡಿದರೂ, ಏನೇ ಜಗಳ ತಂದರೂ ಕೂಡ ನಾನು ಮತ್ತು ರೇವಣ್ಣನವರು ಒಂದೇ. ಏನು ರೇವಣ್ಣ?

ಹೌಸ್‌ನಲ್ಲಿ ನಾವಿಬ್ಬರೂ ಒಂದೇ ಎಂದು ಹೇಳಪ್ಪ. ನಿಮ್ಮ ವಿರುದ್ಧ ಹೋರಾಟ ಮಾಡುವುದಕ್ಕೆ ನಾವಿಬ್ಬರೂ ಒಂದೇ ಇರುತ್ತೇವೆ.

ಶ್ರೀ ಹೆಚ್. ಡಿ. ರೇವಣ್ಣ : ಮಾನ್ಯ ಸಭಾಧ್ಯಕ್ಷರೆ, ನಾನು ಸುರೇಶ್ ಕುಮಾರ್ ಅವರ ಪರ ವಕಾಲತ್ತು ಹಾಕುವುದಿಲ್ಲ. ಮಾನ್ಯ ಸಿದ್ದರಾಮಯ್ಯನವರ ಪರ ವಕಾಲತ್ತು ಹಾಕುತ್ತೇನೆ. ಅದಕ್ಕಿಂತ ಇನ್ನೇನು ಹೇಳಬೇಕು?

ಶ್ರೀ ಸಿದ್ದರಾಮಯ್ಯ : ನೀವು ಬರೀ 20 ತಿಂಗಳು ಇದ್ದೀರಿ. ನಾವು 25 ವರ್ಷಗಳು ಜೊತೆಯಿದ್ದೇವೆ. ಅವರು ನಮ್ಮನ್ನು ಬಿಟ್ಟು ಬಿಟ್ಟು ನಿಮ್ಮ ಪರವಾಗಿ ಮಾತನಾಡುವುದಕ್ಕೆ ಆಗುತ್ತದೆಯೇ?

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : ಹಾಗಾದರೆ ಅಲ್ಲಿಗೆ ಸಿದ್ದರಾಮಯ್ಯನವರನ್ನು ಕರೆದುಕೊಡು ಬಿಡಿ.

ಶ್ರೀ ಹೆಚ್. ಡಿ. ರೇವಣ್ಣ : ನಮಗೆ ಬೇಕಾದಾಗ ಕರೆದುಕೊಳ್ಳುತ್ತೇವೆ.

ಶ್ರೀ ಸಿದ್ದರಾಮಯ್ಯ : ಯಾರನ್ನು ಎಲ್ಲಿಗೆ ಕರೆದುಕೊಳ್ಳಬೇಕು?

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : ತಮ್ಮನ್ನು ಅಲ್ಲಿಗೆ ಕರೆದುಕೊಂದು ಬಿಡಲಿ.

ಶ್ರೀ ಸಿದ್ದರಾಮಯ್ಯ : ನಾನು ಇಲ್ಲಿದ್ದರೆ ನಿಮಗೆ ಏನು ಕಷ್ಟ ಹೇಳಿ ನೋಡೋಣ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : ನಮಗೆ ಕಷ್ಟ ಇಲ್ಲ, ಪ್ರೀತಿ ಜಾಸ್ತಿಯಾಗಿ ಅವರು ತಮ್ಮ ಪರವಾಗಿ ವಕಾಲತ್ತು ಹಾಕುತ್ತಾರೆ ಎಂದು ಹೇಳಿದಿರಲ್ಲ, ಅದಕ್ಕೆ ಅವರನ್ನು ಅಲ್ಲಿಗೆ ಕರೆದುಕೊಂಡು ಬಿಡಿ ಎಂದು ಹೇಳಿದೆ. ತಮ್ಮನ್ನು ಮುಖ್ಯಮಂತ್ರಿ ಮಾಡುವ ಸಂಧರ್ಭದಲ್ಲಿ ಈ ಮಾತು ಹೇಳಿದ್ದರೆ ನಾವು ಏನೂ ಮಾತನಾಡುತ್ತಿರಲಿಲ್ಲ. ಆಗ ತಮ್ಮನ್ನು ಮುಖ್ಯಮಂತ್ರಿಯನ್ನು ಮಾಡಲಿಲ್ಲವೇ? ಮಾನ್ಯ ಧರ್ಮಸಿಂಗ್‌ರವರನ್ನು ಮಾಡಿದರು.

ಶ್ರೀ ಸಿದ್ದರಾಮಯ್ಯ : ನಾನು ಆ ಕಡೆ ನೋಡಿಕೊಂಡು ಮಾತನಾಡುವುದಿಲ್ಲ. ಈಗ ಏನಿದ್ದರೂ ಮಾನ್ಯ ಯಡಿಯೂರಪ್ಪನವರನ್ನು ನೋಡಿಕೊಂಡು ಮಾತನಾಡುತ್ತೇನೆ. ಮಾನ್ಯ ಸಂತೋಷ್ ಹೆಗ್ಡೆಯವರು ರಾಜೀನಾಮೆ ಕೊಟ್ಟಮೇಲೆ ಮಾಜಿ ಮುಖ್ಯ ನ್ಯಾಯಾಧೀಶರಾದ ಮತ್ತು ಬಿ.ಜೆ.ಪಿ. ಪಕ್ಷದ ಈಗಿನ ಗೌರವಾನ್ವಿತ ರಾಜ್ಯಸಭಾ ಸದಸ್ಯರಾದ ಮಾನ್ಯ ರಾಮಾ

ಜೋಯಿಸರು, ಅವರ ರಾಜೀನಾಮೆ ವಾಪಸ್ಸು ತೆಗೆದುಕೊಳ್ಳಿ ಎಂದು phone ಮಾಡಿ ಕೂಡ ಹೇಳಿದ್ದಾರೆ. ಮಾನ್ಯ ಪಿ.ಚಿದಂಬರಂರವರು ಕೂಡ 'ಈ ಸಮಯದಲ್ಲಿ ರಾಜೀನಾಮೆ ಕೊಡಬಾರದು, ಲೋಕಾಯುಕ್ತವೆನ್ನುವ ಒಂದು ಸಂಸ್ಥೆಯಲ್ಲಿ ನಿಮ್ಮಂಥವರು ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿದ್ದೀರಿ, ಭ್ರಷ್ಟಾಚಾರದ ವಿರುದ್ಧ ಹೋರಾಟ ಮಾಡುತ್ತಿದ್ದೀರಿ, ಇಂತಹ ಸನ್ನಿವೇಶದಲ್ಲಿ ನೀವು ರಾಜೀನಾಮೆ ಕೊಡುವುದು ಸರಿಯಿಲ್ಲ, ನೀವು ಮುಂದುವರೆಯಬೇಕು ಎಂದು ಹೇಳಿದ್ದಾರೆ. ಎಲ್ಲಾ ರಾಜಕೀಯ ಪಕ್ಷದ ಮುಖಂಡರುಗಳೆಲ್ಲಾ ಹೇಳಿದ್ದಾರೆ. Editorial columns of all the newspapers of both state and national and electronic media ಎಲ್ಲದರಲ್ಲಿಯೂ ಕೂಡ ರಾಜೀನಾಮೆ ಕೊಟ್ಟಿರುವ ವಿಷಯದ ಬಗ್ಗೆ ಒಕ್ಕೊರಲಿನಿಂದ ಮಾನ್ಯ ಯಡಿಯೂರಪ್ಪನವರು ರಾಜೀನಾಮೆ ಕೊಡುವ ಮಟ್ಟಕ್ಕೆ ಅವರಿಗೆ ನೋವು ಕೊಡಬಾರದಾಗಿತ್ತು ಎಂದು ಹೇಳಿದ್ದಾರೆ. ಬಿ.ಜೆ.ಪಿ ಸರ್ಕಾರ ಈ ರೀತಿ ನಡೆದುಕೊಳ್ಳಬಾರದಾಗಿತ್ತು ಎಂದು ಹೇಳಿದ್ದಾರೆ. ಆದರೆ ಮಾನ್ಯ ಯಡಿಯೂರಪ್ಪನವರು ಮಾತ್ರ 'ಅವರಿಗೆ ಮುಜುಗರ ಆಗುತ್ತದೆ, ನಾನು ಏನೂ ಕೇಳುವುದಿಲ್ಲ' ಎಂದು ಹೇಳಿದ್ದಾರೆ. ಅವರು ರಾಜೀನಾಮೆ ಕೊಟ್ಟಿರುವುದಕ್ಕೆ ನಾಲ್ಕೈದು ಕಾರಣಗಳನ್ನು ಅವರು ನೋವಿನಿಂದ ಹೇಳಿ ಕೊಂಡಿರತಕ್ಕಂಥದ್ದು ಇದೆ. ಈ ವಿಚಾರಗಳನ್ನು ಎಲ್ಲರೂ ಓದಿದ್ದಾರೆ. ಅವರು ಏನು ಹೇಳಿದ್ದಾರೆಂದರೆ.' ನಾನು ಭ್ರಷ್ಟ ಅಧಿಕಾರಿಗಳ ವಿರುದ್ಧ ದಾಳಿ ಮಾಡಿ, ಅವರ ಅಕ್ರಮ ಆಸ್ತಿ ಪತ್ತೆ ಹಚ್ಚಿ, ಅಧಿಕಾರಿಗಳನ್ನು suspend ಮಾಡುವುದಕ್ಕೆ ಶಿಫಾರಸ್ಸು ಮಾಡಿದೆ. ಆದರೆ suspend ಮಾಡಿದ ಕೆಲವೇ ದಿನಗಳಲ್ಲಿ ಒಬ್ಬರಲ್ಲ, ಇಬ್ಬರಲ್ಲ, ನೂರಾರು ಜನ ಅಧಿಕಾರಿಗಳನ್ನು ಮತ್ತೆ ಅದೇ ಜಾಗಕ್ಕೆ post ಮಾಡಿದರು. ನನಗೆ ಒಂದು ಮಾತೂ ಹೇಳಲಿಲ್ಲ. ಆದ್ದರಿಂದ ಯಾವ ಪುರುಷಾರ್ಥಕ್ಕಾಗಿ ಹೋರಾಟ ಮಾಡಬೇಕು?' ಎಂದು ಹೇಳಿದ್ದಾರೆ. ಎರಡನೆಯದಾಗಿ, ಬೆಲೇಕೇರಿ ಬಂದರಿನಲ್ಲಿ ಐದು ಲಕ್ಷ ಮೆಟ್ರಿಕ್ ಟನ್‌ಗಿಂತಲೂ ಹೆಚ್ಚಿಗೆ ಕಬ್ಬಿಣದ ಅದಿರನ್ನು ಶ್ರೀ ಯು.ವಿ.ಸಿಂಗ್ ನೇತೃತ್ವದಲ್ಲಿ ರೈಡ್ ಮಾಡಿ seize ಮಾಡಿ, ಬಂದರಿನ

ಅಧಿಕಾರಿಗಳ ವಶಕ್ಕೆ ಕೊಟ್ಟರು. ಪೊಲೀಸ್ ಸ್ಟೇಷನ್‌ನಲ್ಲಿ ಒಂದು complaint ಕೊಟ್ಟಿದ್ದಾರೆ. ಶ್ರೀ ಗೋಕುಲರವರು ಡಿ.ಸಿ.ಎಫ್. ಆಗಿದ್ದು, ಎ.ಸಿ.ಎಫ್. ಶ್ರೀ ನರೇಂದ್ರ ಹಿತ್ತಲಮಕ್ಕಿ ಇವರು ಎಂಡು ಲಕ್ಷ ಮೆಟ್ರಿಕ್ ಟನ್‌ಗಿಂತಲೂ ಹೆಚ್ಚು ಕಬ್ಬಿಣದ ಅದಿರನ್ನು ಬಂದರಿನಲ್ಲಿ , eize ಮಾಡುತ್ತಾರೆ. ಅದರಲ್ಲಿ ಸುಮಾರು ಮೂರು ಲಕ್ಷ metric tones iron ore ಗೆ exporters claim ಮಾಡುತ್ತಾರೆ. For the remaining five lakh metric tones of iron ore, there were no claimants as there was no valid transport permit from the forest and Mining Department. ಇವುಗಳಲ್ಲಿ ಬಳ್ಳಾರಿ, ಹೊಸಪೇಟೆ ಮತ್ತು ಸಂಡೂರು ಭಾಗದಿಂದ ಹೆಚ್ಚಾಗಿ ಹೋಗಿರುವುದು. From Bellary district to karwar there are 7 check posts belonging to forest, Police and Transport Departments.

ಬಳ್ಳಾರಿಯಿಂದ ಕಾರವಾರದವರೆಗೆ ಬಳ್ಳಾರಿ, ಕೊಪ್ಪಳ, ಗದಗ್, ಧಾರವಾಡ, ಕಾರವಾರ ಇಷ್ಟೆಲ್ಲಾ ಜಿಲ್ಲೆಗಳು ಬರುತ್ತವೆ. ಇಲ್ಲಿ 5 ಲಕ್ಷ ಮೆಟ್ರಿಕ್ ಟನ್ ಕಬ್ಬಿಣದ ಅದಿರು seize ಆಗಿರುವುದು ಲೋಕಾಯುಕ್ತರವರ documents ಪ್ರಕಾರ 35 ಲಕ್ಷ ಮೆಟ್ರಿಕ್ ಟನ್ ಕಬ್ಬಿಣದ ಅದಿರು ಇದೆಯೆಂದು ಇದೆ. It may run into 50 lakh metric tones of Iron Ore ಎಂದು ಹೇಳುತ್ತಾರೆ. ಅವರು ಇವತ್ತಿನ ಬೆಲೆ ಪ್ರಕಾರ ನಿಗದಿಮಾಡಿದರೂ ಕೂಡ ಒಂದು ಮೆಟ್ರಿಕ್ ಟನ್‌ಗೆ 120 ಡಾಲರ್ಸ್ ಇದೆ. ಸುಮ್ಮನೆ ಕೆಳಗಡೆ ಇರುವ ಬೆಲೆಯನ್ನು ತೆಗೆದುಕೊಂಡರೂ ಕೂಡ 120 ಡಾಲರ್‌ಗಳಾಗುತ್ತದೆ. ಇಲ್ಲಿ 120 x 5 ಲಕ್ಷ ಟನ್ಸ್ ಎಂದರೆ ಸುಮಾರು 300 ಕೋಟಿ ರೂಪಾಯಿಗಳಾಗುತ್ತದೆ. ಅಂದ ಮೇಲೆ 50 ಲಕ್ಷಮೆಟ್ರಿಕ್ ಟನ್ಸ್ ಕಬ್ಬಿಣದ ಅದಿರು ಎಂದರೆ ಸುಮಾರು 3,000 ಕೋಟಿ ರೂಪಾಯಿಗಳಾಗುತ್ತದೆ, ಇಷ್ಟು Iron Ore, without valid permit, without paying royalty, without paying the Forest Development Tax, without paying VAT (commercial tax), ಇವು ಏನೂ ಇಲ್ಲದೇ in addition to Rs. 3,000 crore ಸರ್ಕಾರಕ್ಕೆ

ಬರಬೇಕಾದಂಥ royalty, value added tax, road development tax and forest development tax ಇವುಗಳು ಕೂಡ some crores ನಷ್ಟವಾಗುತ್ತದೆ. ಬಹುಶಃ ಇದು ಈ ಶತಮಾನದ ಬಹಳ ದೊಡ್ಡ ಭೀಕರವಾದಂಥ scam, ಈ ರಾಜ್ಯ ಕಂಡಂಥ ಅತ್ಯಂತ ಭಾರಿ ಹಗರಣ, ಹಗಲು ದರೋಡೆಯಾಗಿದೆ. ಸರ್ಕಾರಕ್ಕೆ ನಷ್ಟವಾಗುವಂಥ ಹಣ, ಕಳ್ಳಕಾಕರಿಗೆ ಹೋಗುತ್ತದೆ, ಗಣಿ ಮಾಫಿಯಾಗಳಿಗೆ ಹೋಗುತ್ತದೆ. ರಾಜ್ಯದ ಸಂಪತ್ತು ಲೂಟಿಯಾಗುತ್ತಿದೆಯೆಂದು ಲೋಕಾಯುಕ್ತರು ಈ 5 ಲಕ್ಷ ಮೆಟ್ರಿಕ್ ಟನ್ ಸೀಜ್ ಮಾಡಿದರೆ, ಇದು ನಾಪತ್ತೆಯಾಗಿದೆ. ಈ ಸೀಜ್ ಮಾಡಿದಂಥ ಕಬ್ಬಿಣದ ಅದಿರಿನ ಮೇಲೆ ಕೋರ್ಟ್‌ನಲ್ಲಿ case criminal complaint lodge ಆಗಿದೆ, ಹೀಗಿದ್ದಾಗ್ಯೂ ಇದು ಅಕ್ರಮವಾಗಿ ರಫ್ತು ಆಗಿದೆ. Forest and Mines & Geology ಇವು ಸನ್ಮಾನ್ಯ ಮುಖ್ಯಮಂತ್ರಿಯವರ ಅಧಿನದಲ್ಲಿ ಬರುವಂಥ ಇಲಾಖೆಗಳು. ಇಲ್ಲಿ ಸೀಜ್ ಮಾಡಿರುವಂಥ 5ಲಕ್ಷ ಮೆಟ್ರಿಕ್ ಟನ್ ಕಬ್ಬಿಣದ ಅದಿರು ಕಣ್ಣಿಗೆ ಕಾಣದ ರೀತಿಯಲ್ಲಿ ಮಾಯವಾಗಿ ಬಿಟ್ಟಿದೆ. ಇದು ಸುಮ್ಮನೆ allegation ಅಲ್ಲ. Seized, Mahajar was drawn, complaint was lodged, and some of the exporters went to the court. 4 ಜನರು ಕೋರ್ಟ್‌ಗೆ ಹೋಗಿ ಅದನ್ನು ನಮಗೆ ಕೊಡಿಯೆಂದು ಹೋಗಿದ್ದಾರೆ, but they could not able to succeed in the court. No order was passed by the Hon'ble High Court. Sri Gokul, DCF, who investigated the scam, has field the affidavit also. ಇದರಿಂದ ಸ್ವಾಭಾವಿಕವಾಗಿ ಮಾನ್ಯ ಮುಖ್ಯಮಂತ್ರಿಯವರಿಗೆ ಮತ್ತು ಇಡೀ ಸರ್ಕಾರಕ್ಕೆ ಮುಜುಗರವಾಗುತ್ತದೆ. ಇವರು ಸರ್ಕಾರದ ಇಂಥ ದೊಡ್ಡ ಹಗರಣವನ್ನು ಹಿಡಿದು ಹಾಕಿಬಿಟ್ಟಿರಲ್ಲಾ ಎಂದು ಮುಜುಗರವಾಗುವಂಥದ್ದು ಸ್ವಾಭಾವಿಕ, ಹಾಗಾಗಿ ಮಾನ್ಯ ಮುಖ್ಯಮಂತ್ರಿಯವರು ಅವರು ಹೋದರೂ ಹೋಗಲಿಯೆಂಬ ಧಾಟಿಯಲ್ಲಿ ಮಾತನಾಡಿದ್ದಾರೆ. ಅವರು ಕಾಯುತ್ತಿದ್ದರೆಂದು ಕಾಣುತ್ತದೆ. ಅವರು ಬಹಳ casual ಆಗಿ ತೆಗೆದುಕೊಂಡಿದ್ದಾರೆ. ಅದಕ್ಕೆ ಲೋಕಾಯುಕ್ತರು Callous

attitude of the Government' ಎಂದು ಹೇಳಿದ್ದಾರೆ. 'I am treated very badly by this government'. ಎಂದು ಹೇಳಿದ್ದಾರೆ. I am very much pained ಎಂದು ಹೇಳಿದ್ದಾರೆ throughout these 3–4 ವರ್ಷಗಳ ಕಾಲದಲ್ಲಿ This government has not co-operated with the Lokayukta. ಎಂದು ಹೇಳಿದ್ದಾರೆ. Not at all co-operated with the Lokayukta. " Suo motu inspection ಮಾಡುವುದು, enquiry ಮಾಡುವ ಅಧಿಕಾರ ಕೊಡಿ' ಎಂದು ಕೇಳಿದೆ, ಆದರೆ ಕೊಡಲಿಲ್ಲ" ಎಂದು ಹೇಳಿದ್ದಾರೆ. 2008ರ manifestoದಲ್ಲಿ 'ಲೋಕಾಯುಕ್ತರಿಗೆ ಪರಮಾಧಿಕಾರ ಎಂದು ಅವರೇ ಹೇಳಿದ್ದಾರೆ ಮಾನ್ಯ ರಾಮಚಂದ್ರಗೌಡರು ಅವರು ಈಗ ಇಲ್ಲಿಲ್ಲ ಅವರು ಬಹಳ ಹಿರಿಯರಾಗಿದ್ದು, I have got very high regards for him. ಅವರು ಏನು ಹೇಳುತ್ತಾರೆಂದರೆ; 'ಚುನಾವಣೆ ಸಮಯದಲ್ಲಿ ಮಕ್ಕಳಿಗೆ ಪೆಪ್ಪರ್‌ಮೆಂಟ್ ಕೊಡುತ್ತೇವೆಂದು ಹೇಳಿ ಬಿಟ್ಟಿರುತ್ತೇವೆ, ಆ ರೀತಿ ಪೆಪ್ಪರ್‌ಮೆಂಟ್ ಕೊಡುವುದಕ್ಕೆ ಆಗುತ್ತದೆಯೇ?' ಇವರು ಮಕ್ಕಳಂತೆ, ಪೆಪ್ಪರ್‌ಮೆಂಟ್ ಕೊಡುವುದಕ್ಕೆ ಹೇಳಿಬಿಟ್ಟಿದ್ದರಂತೆ. ಇದಕ್ಕಿಂತ irresponsible, showing disrespect to the people of the state.ಯಾವುದು ಇದೆಯೆಂದು ಹೇಳಿ ನೋಡೋಣ. I think, this is the stand of the government, because he is a senior Minister and very very close to Mr. Yeddyurappa like Sri. Basavarj Bommai. ಸತ್ಯ ಹೇಳುತ್ತಿದ್ದೇನೆ, ನಾನೇನು ಸುಳ್ಳು ಹೇಳಿದೆನೆ? ಈಗ ನೀವು ನನ್ನ ಜೊತೆಯಲ್ಲಿ ಇಲ್ಲವೇ, ಹಾಗೇ ನಾನೂ ಇರುತ್ತೇನೆ. ನೀವು ನನಗೂ close, ಅಲ್ಲೂ close ಆಗಿದ್ದೀರಿ. He is the person who is very close to Hon'ble Chief Minister. He made a statement that, ನಾವು ಮಕ್ಕಳಿಗೆ ಆಕಾಶದಲ್ಲಿನ ಚಂದ್ರನನ್ನು ತೋರಿಸುತ್ತೇವೆ, ಹಾಗೆ ತೋರಿಸಿದ ಮಾತ್ರಕ್ಕೆ ಚಂದ್ರನನ್ನು ಹಿಡಿದುಕೊಂಡು ಬಂದು ಕೊಡುವುದಕ್ಕೆ ಆಗುತ್ತದೆಯೇ? ಅದು ಆಗುವುದಿಲ್ಲ, ಅದನ್ನು

ಮಾಡುವುದಿಲ್ಲ, ಅದಕ್ಕೆ ನಾವು ಹಾಗೆ ಹೇಳಿದ್ದೇವೆ ಎಂದರೆ, you see the intention of the Government when Manifesto was written.

Sri.B.N.BACHE GOWDA: To strengthen the hands of Lokayuktha ಎಂದು ನಾವು manifestoದಲ್ಲಿ ಹೇಳಿದ್ದೇವೆಯೇ ಹೊರತು, ತಾವು ಹೇಳಿದ ಹಾಗೆ supreme powers ಕೊಡುತ್ತೇವೆ ಎಂದು ಹೇಳಿಲ್ಲ.

SRI. SIDDARAMAIAH: YOU ARE 100% correct. I do not dispute your statement. What more do you require? Are you not happy with my statement?

ಶ್ರೀ ಬಿ. ಎನ್. ಬಚ್ಚೇಗೌಡ : ಪರಮಾಧಿಕಾರ ಎಂದು ತಾವು ಹೇಳಿದಿರಲ್ಲ, ಅದಕ್ಕಾಗಿ ಹೇಳಿದೆ.

ಶ್ರೀ ಸಿದ್ದರಾಮಯ್ಯ : ಭ್ರಷ್ಟಾಚಾರ ತೊಲಗಿಸಲಿಕ್ಕೆ ಲೋಕಾಯುಕ್ತರಿಗೆ ನಾವು ಅಗತ್ಯ ಅಧಿಕಾರವನ್ನು ಕೊಡುತ್ತೇವೆ ಎಂದರೆ what does it mean? ಈ ಪದವನ್ನೇ ಬಳಸಬೇಕೆ?

ಶ್ರೀ ಎಸ್. ಸುರೇಶ್ ಕುಮಾರ್ : ಸಿದ್ದರಾಮಯ್ಯನವರೆ, ಒಂದು ನಿಮಿಷ. To put the records straight ಹೇಳುತ್ತೇನೆ. ನನ್ನ ಹತ್ತಿರ Manifesto ಇದೆ. ಅದರಲ್ಲಿ ಇರುವುದನ್ನು ಹೇಳುತ್ತೇನೆ. ನಮ್ಮ Manifesto ಓದಿದರೆ ಖುಷಿಯಾಗುತ್ತದೆ. ನಮ್ಮ ಡಾ:ವಿ.ಎಸ್.ಆಚಾರ್ಯರವರು Manifesto Committeeಯ Chairman ಆಗಿದ್ದರು.

ಶ್ರೀ ಸಿದ್ದರಾಮಯ್ಯ : ಅದನ್ನು ನಾನು ಓದಿಯೇ ಹೇಳುತ್ತಿದ್ದೇನೆ.

ಶ್ರೀ ಎಸ್. ಸುರೇಶ್ ಕುಮಾರ್ : ನಾನು ಅದನ್ನು ಓದಿಕೊಂಡು ಹೇಳುತ್ತೇನೆ. Manifesto ದ ಪುಟ 62ರಲ್ಲಿ ಇದೆ. ಆಡಳಿತ ಸುಧಾರಣೆ--ಇದರಲ್ಲಿ ಉತ್ತಮ ಆಡಳಿತ ಎಲ್ಲವೂ ಆದಮೇಲೆ ಭ್ರಷ್ಟಾಚಾರವನ್ನು ತಡೆಗಟ್ಟಲು ಲೋಕಾಯುಕ್ತವನ್ನು ಹೆಚ್ಚು ಬಲಪಡಿಸುವುದು ಎಂದು ಇದೆ. To put the records straight, ಇದನ್ನು ಹೇಳುತ್ತಿದ್ದೇನಷ್ಟೆ.

ಶ್ರೀ ಟಿ. ಬಿ. ಜಯಚಂದ್ರ : ಅದನ್ನೇ ನಾವು ಹೇಳಿದ್ದು. ಅವರು ನಿಮ್ಮನ್ನು ಕೇಳಿದ್ದೇನು?

ಶ್ರೀ ಎಸ್. ಸುರೇಶ್ ಕುಮಾರ್ : ಪರಮಾಧಿಕಾರ ಎನ್ನುವ ಪದವನ್ನು ಬಳಸಿದಕ್ಕಷ್ಟೇ ಹೇಳಿದೆ. ಪರಮಾಧಿಕಾರ ಎನ್ನುವುದು ಇದರಲ್ಲಿ ಬಂದಿಲ್ಲ. ಪರಮಾಧಿಕಾರವನ್ನು ಯಾರು ಕೊಟ್ಟಿದ್ದರು? ಯಾರು ವಾಪಸ್ಸು ತೆಗೆದುಕೊಡರು? ಏಕೆ ವಾಪಸ್ಸು ತೆಗೆದುಕೊಂಡರು? ಎನ್ನುವುದನ್ನೆಲ್ಲ ಆಮೇಲೆ ಮಾತನಾಡೋಣ.

ಶ್ರೀ ಟಿ. ಬಿ. ಜಯಚಂದ್ರ : ನೀವು ಊಹೆ ಮಾಡಿಕೊಳ್ಳುವುದಕ್ಕೆ ಹೋಗಬೇಡಿ.

ಶ್ರೀ ಎಸ್. ಸುರೇಶ್ ಕುಮಾರ್ : ಲೋಕಾಯುಕ್ತವನ್ನು ಬಲಗೊಳಿಸುವುದನ್ನು ಮಾತ್ರ ನಾವು ಹೇಳಿದ್ದೇವು. ಅದನ್ನು ನಾನು ಸಿದ್ದರಾಮಯ್ಯನವರ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಟಿ.ಬಿ. ಜಯಚಂದ್ರ : ರಾಜೀನಾಮೆ ಕೊಡುವಂಥ ಸಂದರ್ಭದಲ್ಲಿ ಲೊಕಾಯುಕ್ತರು, ತಾವು ಮೂರು ಅಂಶಗಳನ್ನು ಮಾತ್ರ ಕೇಳಿದ್ದಾಗಿ ಹೇಳಿದ್ದರು.

ಅಧ್ಯಕ್ಷರು : ಇದು ನಿಯಮ 60ರಲ್ಲಿ ಹೇಗೆ ಬರುತ್ತದೆ ಎನ್ನುವುದಕ್ಕಷ್ಟೇ ಸೀಮಿತವಾಗಿ ಮಾತನಾಡಿ, ವಿಷಯಾಂತರ ಬೇಡ.

ಶ್ರೀ ಟಿ. ಬಿ. ಜಯಚಂದ್ರ : ಲೋಕಾಯುಕ್ತದಲ್ಲಿ ಯಾರು indict ಆಗಿರುತ್ತಾರೋ ಅವರನ್ನು ವರ್ಗಾವಣೆ ಮಾಡಿ, ಮತ್ತೆ ಅಲ್ಲಿಗೆ ಅವರನ್ನು ಹಾಕಬೇಡಿ ಎನ್ನುವುದನ್ನು ಬಿಟ್ಟರೆ ಇನ್ನೇನನ್ನೂ ಅವರು ಕೇಳಿಲ್ಲ.

ಅಧ್ಯಕ್ಷರು : Submission ಬಿಟ್ಟು ಬೇರೆ ಕಡೆಗೆ ಹೋಗುತ್ತಿದ್ದೀರಿ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ : ನಿರ್ದಿಷ್ಟವಾಗಿರತಕ್ಕಂಥ ಮೂರು ವಿಚಾರಗಳಿಗೆ ಸಂಬಂಧಿಸಿದಂತೆ ಲೋಕಾಯುಕ್ತರು ರಾಜೀನಾಮೆ ಕೊಟ್ಟಿದ್ದಾರೆ. ಯಾವ ಕಾರಣಕ್ಕೋಸ್ಕರ ಲೋಕಾಯುಕ್ತರು ರಾಜೀನಾಮೆ ಕೊಟ್ಟರು ಎನ್ನುವುದಕ್ಕೆ ನೀವು ಮೊದಲು ಬನ್ನಿ. ಅವರಿಗೆ ಪರಮಾಧಿಕಾರ ಕೊಡಬೇಕೋ, ಬೇಡವೋ ಆ ಪ್ರಶ್ನೆ ಬೇರೆ.

ಶ್ರೀ ಎಸ್. ಸುರೇಶ್ ಕುಮಾರ್ : ನೀವು wrong number ಗೆ ಫೋನ್ ಮಾಡುತ್ತಿದ್ದೀರಿ. ಅದನ್ನು ನೀವು ಸಿದ್ದರಾಮಯ್ಯನವರಿಗೆ ಹೇಳಿ, ನನಗೇಕೆ ಹೇಳುತ್ತೀರಿ? ಅವರು ಹೇಳಿದ್ದಕ್ಕೆ, I tried to put the records straight. ನಾನು ಆ ವಿಚಾರಕ್ಕೆ ಬಂದೇ ಇಲ್ಲ. ಅವರು ಏನು ಹೇಳಿದರೋ ಅದನ್ನು ಏನಿದೆ ಎಂದು ತಿದ್ದಿ ಹೇಳಿದ್ದೇನೆ. ನೀವು ನನಗೇ ಪಾಠ ಹೇಳಿದರೆ ಹೇಗೆ? ನೀವು ಅವರಿಗೆ ಹೇಳಬೇಕು.

ಶ್ರೀ ಟಿ. ಬಿ. ಜಯಚಂದ್ರ : ಭ್ರಷ್ಟಾಚಾರವನ್ನು ನಿರ್ಮೂಲನೆ ಮಾಡುವುದಕ್ಕೋಸ್ಕರ ಲೋಕಾಯುಕ್ತರ ಕೈಯನ್ನು ಬಲಪಡಿಸುತ್ತೇವೆ ಎಂದು ಹೇಳಿದ್ದೀರಿ. ಅವರು ಕೇಳಿರುವುದು ಅಷ್ಟೇ.

(ಗೊಂದಲ)

ಅಧ್ಯಕ್ಷರು : ತಾವು ಕುಳಿತುಕೊಳ್ಳಿ, ಏನೋ ಮಾತನಾಡಿದರೆ ಹೇಗೆ? ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಬಿ. ರಮಾನಾಥ ರೈ : ಅವರ ಒಬ್ಬ ಮಂತ್ರಿಗಳೇ ಉತ್ತರ ಕೊಟ್ಟಿರುವುದು. ಮಂತ್ರಿಗಳ ಕಡೆಯಿಂದ ಆ ರೀತಿ ಉತ್ತರ ಬಂದರೆ ಹೇಗೆ?

(ಗೊಂದಲ)

ಅಧ್ಯಕ್ಷರು : ಜಯಚಂದ್ರರವರೆ, ತಾವು ಹಿರಿಯ ಸದಸ್ಯರಿದ್ದೀರಿ, ಹೀಗೆ ಮಾತನಾಡಿದರೆ ಹೇಗೆ?

(ಗೊಂದಲ)

ಶ್ರೀ ಟಿ. ಯೊಯೊ66654ಬಿ. ಜಯಚಂದ್ರ : ರಾಜೀನಾಮೆ ಕೊಡುವಂಥ ಮಟ್ಟಕ್ಕೆ ಅವರನ್ನು ತಳ್ಳಿದಿರಲ್ಲ?

ಶ್ರೀ ಬಿ. ಎನ್. ಬಚ್ಚೇಗೌಡ : You are diverting the issue.

ಶ್ರೀ ಟಿ. ಬಿ. ಜಯಚಂದ್ರ : ನಾನು divert ಆಗುತ್ತಿಲ್ಲ. ಪರಮಾಧಿಕಾರ ಎನ್ನುವ ಮಾತನ್ನು ಪದೇಪದೇ ನೀವು ಹೇಳುತ್ತಿದ್ದೀರಿ. ಮಂತ್ರಿಗಳಾದ ನೀವು ಹೇಳುತ್ತಿದ್ದೀರಿ, ರಾಮಚಂದ್ರಗೌಡರು ಹೇಳುತ್ತಿದ್ದಾರೆ, ಬಚ್ಚೇಗೌಡರು ಹೇಳುತ್ತಿದ್ದಾರೆ. ಏಕೆ ಹೇಳುತ್ತಿದ್ದಾರೆಂದು ನನಗೆ ಅರ್ಥವಾಗುತ್ತಿಲ್ಲ.

ಲೋಕಾಯುಕ್ತರು ರಾಜೀನಾಮೆ ಕೊಡುವಂಥ ಸಂಧರ್ಭದಲ್ಲಿ ಯಾವ ಮೂರು ವಿಚಾರಗಳನ್ನು ಪ್ರಸ್ತಾಪ ಮಾಡಿದರು. . .

ಅಧ್ಯಕ್ಷರು : ಇನ್ನೂ ಚರ್ಚೆಯೇ ಪ್ರಾರಂಭವಾಗಿಲ್ಲ. ಪ್ರಾರಂಭಿಕ ಹಂತದಲ್ಲಿಯೇ ಈ ರೀತಿ ವಿಷಯಾಂತರ ಮಾಡಿದರೆ ಹೇಗೆ? I don't think it is proper.

(ಗೊಂದಲ)

ಶ್ರೀ ಟಿ. ಬಿ. ಜಯಚಂದ್ರ : ದಯಮಾಡಿ ಅವರು mistake ಮಾಡಿಕೊಳ್ಳುವುದು [illegible]. ಪರಮಾಧಿಕಾರದ ವಿಚಾರಕ್ಕೆ ನಾನು ಬಂದಿಲ್ಲ. ಕೇವಲ, ನಾವು ಆಡಳಿತ ಮಾಡಬೇಕಾದರೆ ನಾವು ಯಾವ ರೀತಿ ಕಾರ್ಯ ನಿರ್ವಹಣೆ ಮಾಡಬೇಕು ಎನ್ನುವ ವಿಚಾರ ಬಂದಿದೆ.

(ಗೊಂದಲ)

ಅಧ್ಯಕ್ಷರು : ದಯವಿಟ್ಟು ವಿಷಯಾಂತರ ಬೇಡ. ನಿಯಮ 60ರೊಳಗೆ ಹೇಗೆ ಬರುತ್ತದೆ ಎನ್ನುವುದಷ್ಟಕ್ಕೆ ಮಾತ್ರ ಸೀಮಿತವಾಗಿ ಹೇಳಿ.

ಶ್ರೀ ಸಿದ್ದರಾಮಯ್ಯ : ಅವರು ಹೇಳಿದ ಮೇಲೆ ನಾವು ಹೇಳಬೇಕೋ, ಬೇಡವೋ? ಅವರು ಸುಮ್ಮನೆ ಕುಳಿತಿದ್ದರೆ ನಾನ್ಯಕೆ ಹೇಳುತ್ತಿದ್ದೆ. ನೀವು ಹೇಳುವುದೂ correct, ನಾನು ಹೇಳುವುದೂ correct, ಸುರೇಶ್ ಕುಮಾರ್‌ರವರು ಹೇಳುವುದೂ correct.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : ಹಾಗಿದ್ದರೆ ಸಮಸ್ಯೆಯೇ ಇಲ್ಲ.

ಶ್ರೀ ಸಿದ್ದರಾಮಯ್ಯ : ನಿಮಗೆ ಸಮಸ್ಯೆಯಿಲ್ಲ, ರಾಜ್ಯಕ್ಕೆ ಸಮಸ್ಯೆಯಾಗಿಬಿಟ್ಟಿದೆ. ಕಷ್ಟ ತಪ್ಪಿ ಹೋಯಿತು ಎನ್ನುವುದು ನಿಮಗೆ; ರಾಜ್ಯಕ್ಕೆ ಸಮಸ್ಯೆ ಬಂದೊದಗಿದೆ ಎನ್ನುವುದು ನಮಗೆ ಆಗಿದೆ. ನಾನು ಹೇಳಿದ್ದಕ್ಕೂ, ಇವರು ಹೇಳುತ್ತಿರುವುದಕ್ಕೂ ಏನು ವ್ಯತ್ಯಾಸವಿಲ್ಲ. ಭ್ರಷ್ಟಾಚಾರವನ್ನು ತಡೆಗಟ್ಟುವುದು, ಇದಕ್ಕೋಸ್ಕರ ಲೋಕಾಯುಕ್ತವನ್ನು ಹೆಚ್ಚು ಬಲಪಡಿಸುವುದು. ಭ್ರಷ್ಟಾಚಾರವನ್ನು ತೊಲಗಿಸಬೇಕಾದರೆ, ಅಧಿಕಾರಗಳ ಮೇಲೆ suo motu enquiry ಮಾಡುವುದಕ್ಕೆ ನಮಗೆ ಅಧಿಕಾರ ಕೊಡಿ ಎಂದು ಅವರು ಕೇಳುತ್ತಿದ್ದಾರೆ. ಅದು ಪರಮಾಧಿಕಾರವೇ? ಎಂದು ಹೇಳಿ. ಇದನ್ನೇ ಕೊಡಿ

ಎಂದು ಅವರು ಕೇಳಿರುವುದು. ಅವರು ಕೇಳಿದಂಥ ಇದನ್ನು, ನಾನು ಹೇಳಿದಂಥ ಇದನ್ನು ಕೊಡುವುದಕ್ಕೆ are you ready to give ?

ಒಬ್ಬ ಮಾನ್ಯ ಸದಸ್ಯರು: ಅವರು ಪರಮಾಧಿಕಾರ ಕೇಳಿದ್ದಾರೆ.

ಶ್ರೀ ಸಿದ್ದರಾಮಯ್ಯ : ಪರಮಾಧಿಕಾರ ಕೊಡಿ ಎಂದು ಅವರು ಎಲ್ಲಿಯೂ ಕೇಳಿಲ್ಲ. ಆ ಪದವನ್ನು ನಾನು ಉಪಯೋಗಿಸಿದೆ ಅಷ್ಟೇ. ಆದರೆ, it leads to that ಎಂದು ಹೇಳಿದೆ. ಪರಮಾಧಿಕಾರ ಎಂದರೆ ಏನು ಎಂದು define ಮಾಡಿ ಹೇಳಿ ನೋಡೋಣ. ಅವರು Chief Minister ಗಿರಿ ಕೇಳಿದರೇ? ಸರ್ವಾಧಿಕಾರವನ್ನು ಕೇಳಿದರೇ? ಪ್ರಜಾಪ್ರಭುತ್ವದಲ್ಲಿ ಅದನ್ನು ಕೊಡುವುದಕ್ಕೆ ಆಗುತ್ತದೆಯೇ? ಅದನ್ನು ಕೊಡುವುದಕ್ಕೆ ಬರುವುದಿಲ್ಲ. ಯಾರನ್ನಾದರೂ ಅಥವಾ ಯಾವ ಸಂಸ್ಥೆಯನ್ನು dictator ಮಾಡುವುದಕ್ಕಾಗುವುದಿಲ್ಲ. ಅದನ್ನು ಕೊಡುವುದಕ್ಕೆ ಆಗುವುದಿಲ್ಲ ಎಂದೇ ನಾನೂ ಸಹ ಹೇಳುವುದು. ಈಗ ನಾನು ಹೇಳಿದ್ದಕ್ಕೆ ಏಕೆ ನೀವು ಮೇಜು ಕುಟ್ಟಿದಿರಿ? I can understand your mentality. ನೀವು ಏನು ಎನ್ನುವುದು ಈಗ ಗೊತ್ತಾಗಿ ಬಿಟ್ಟಿತು. suo motu enquiry ಮಾಡಲಿಕ್ಕೆ ನಮಗೆ ಅಧಿಕಾರ ಕೊಡಿ, ನಾನು ಮಾರ್ಚ್ ತಿಂಗಳಲ್ಲಿ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ. . .

(ಈ ಹಂತದಲ್ಲಿ ಸದಸ್ಯರಾದ ಶ್ರೀ.ವಿ.ಶ್ರೀನಿವಾಸ ಪ್ರಸಾದ್‌ರವರು ಎದ್ದು ನಿಂತರು.)

ಅಧ್ಯಕ್ಷರು : Rule 60ಗೆ ಒಂದಿಷ್ಟು submission ಆಗಲಿ.

ಶ್ರೀ ವಿ. ಶ್ರೀನಿವಾಸ್ ಪ್ರಸಾದ್ : ಇದನ್ನು Adjournment Motion ನಲ್ಲಿ ತೆಗೆದು ಕೊಳ್ಳಬೇಕೋ, ಬಿಡಬೇಕೋ ಎನ್ನುವ ಹಂತದ submissionನಲ್ಲಿದೆ. ಈ ಬಗ್ಗೆ ಈಗಾಗಲೇ ಚರ್ಚೆಯನ್ನು ಶುರು ಮಾಡಿದ್ದೀರಿ. ತಮ್ಮ ಚುನಾವಣೇ Manifestoದಲ್ಲಿ ಲೋಕಾಯುಕ್ತರಿಗೆ ಹೆಚ್ಚಿನ ಅಧಿಕಾರ ಕೊಡುತ್ತೇವೆ ಎಂದು ಹೇಳಿ, ಈಗ ಅದಕ್ಕೆ ರಾಮಚಂದ್ರಗೌಡರ ಹೇಳಿಕೆ ಏನಿದೆ ಎಂದರೆ, ಅವತ್ತಿನ ಪರಿಸ್ಥಿತಿ ಬೇರೆ, ಇವತ್ತಿನ ಪರಿಸ್ಥಿತಿ ಬೇರೆ ಎಂದು ಹೇಳಿದ್ದಾರೆ. ಅಂದರೆ, ಅವತ್ತು ಓಟು ತೆಗೆದುಕೊಳ್ಳಬೇಕಾಗಿತ್ತು, ಹಾಗಾಗಿ

ಲೋಕಾಯುಕ್ತರಿಗೆ ಹೆಚ್ಚಿನ ಅಧಿಕಾರ ಕೊಡುತ್ತೇವೆ ಎಂದು ಹೇಳಿದ್ದೇವು. ಹಾಗೆಂದ ತಕ್ಷಣ, ಅಧಿಕಾರಕ್ಕೆ ಬಂದ ಮೇಲೆ ಅದನ್ನು ಮಾಡಬೇಕು ಎಂದೇನು ಇಲ್ಲವಲ್ಲ ಎನ್ನುವುದನ್ನು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಇದು ಸರಿಯೇ? ಅವರು submission ಮಾಡುವಾಗ ರಾಮಚಂದ್ರಗೌಡರ ಹೇಳಿಕೆಯನ್ನು passing remrksನಲ್ಲಿ ಇದು ಚರ್ಚೆಗೆ submission ಆಗಿಬಿಡಲಿ. ಸುರೇಶ್ ಕುಮಾರ್‌ರವರೆ, ಮತ್ತು ಮಾನ್ಯ ಮುಖ್ಯಮಂತ್ರಿಗಳೆ ಅವರಿಗೆ submissions ಮಾಡಲು ಬಿಡಿ.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ : ಚರ್ಚೆ ಆಗುವಾಗ ಆಗಲಿ. ಯಾವಯಾವ Manifestoದಲ್ಲಿ, ಯಾರ್ಯಾರು ಏನೇನು ಹೇಳಿದ್ದರು, ಯಾರು ಏನು ಮಾಡಿದರು ಎನ್ನುವುದೆಲ್ಲವೂ ಚರ್ಚೆಗೆ ಬರಲಿ.

ಶ್ರೀ ವಿ. ಶ್ರೀನಿವಾಸ ಪ್ರಸಾದ್ : ರಾಮಚಂದ್ರಗೌಡರು ಹೇಳಿರುವುದು ಇದನ್ನೇ ಅಲ್ಲವೇ? ಅವತ್ತು ಚುನಾವಣಾ ಸಮಯದಲ್ಲಿ ನಾವು ನಮ್ಮ Manifestoದಲ್ಲಿ ಇದನ್ನು ಪ್ರಸ್ತಾಪ ಮಾಡಿದಾಗ ಇದ್ದ situation ಬೇರೆ ಎಂದರೆ ಅರ್ಥಾತ್ ನಮಗೆ ಓಟು ಬೇಕಾಗಿತ್ತು, ನಾವು ಅಧಿಕಾರಕ್ಕೆ ಬರಬೇಕಾಗಿತ್ತು ಅದಕ್ಕಾಗಿ ಹೇಳಿದ್ದೇವೆ. ಆದರೆ ಆಧಿಕಾರಕ್ಕೆ ಬಂದ ಮೇಲೆ ಅದೇ ರೀತಿ ನಡೆದುಕೊಳ್ಳಬೇಕು ಎಂದು ಏನಿದೆ ಎನ್ನುವ ಉದ್ಧಟತನದ ಮಾತನ್ನಾಡಿದ್ದಾರೆ. ಚರ್ಚೆಗೆ ಬಂದಾಗ ಎಲ್ಲವನ್ನು ಮಾತನಾಡೋಣ ಬಿಡಿ. ಈಗ submissionಆಗಲಿ, ನಮ್ಮ ನಾಯಕರು submission ಮಾಡುತ್ತಿದ್ದಾರೆ.

ಶ್ರೀ ಬಸವರಾಜ ಬೊಮ್ಮಾಯಿ : ಅವರು ತಮ್ಮ statement ಬಗ್ಗೆ clarificationಮಾಡಬಹುದು, ಅವರು ಸ್ಪಷ್ಟೀಕರಣ ಕೊಡುತ್ತಾರೆ. ಆದರೆ, ಯಾವಯಾವ Manifesto ದಲ್ಲಿ, ಯಾವಯಾವ ಸಂದರ್ಭದಲ್ಲಿ, ಯಾರ್ಯಾರು ಯಾವ ರೀತಿ ನಡೆದುಕೊಂಡಿದ್ದಾರೆ ಎನ್ನುವ ಬಗ್ಗೆಯೂ ಚರ್ಚೆಯಾಗಬೇಕಲ್ಲವೇ? Manifesto ಬಗ್ಗೆ ಮಾತನಾಡುವಾಗ ಎಲ್ಲಾ Manifesto ಬಗ್ಗೆ ಮಾತನಾಡೋಣ.

ಶ್ರೀ ಕೆ. ಈ. ಕುಮಾರಸ್ವಾಮಿ : ಹಿಂದೆ ಇವರ ಸರ್ಕಾರ ಇದ್ದಾಗ ಇವರು ಬಹಳಷ್ಟು Manifesto ಕೊಟ್ಟಿದ್ದರು. ಅದರ ಪ್ರಕಾರ ಅವರು ನಡೆದುಕೊಂಡಿದ್ದಾರೆಯೆ ?

ಶ್ರೀ ಸಿದ್ದರಾಮಯ್ಯ : ನಮ್ಮ ಹಿರಿಯ ಸದಸ್ಯರಾದ ಶ್ರೀನಿವಾಸ ಪ್ರಸಾದ್‌ರವರು ಏನು ಹೇಳಿದರು, ಅದು ಬಹಳ ಸರಿಯಾಗಿದೆ. ನಾನೂ ಸಹ ಅದನ್ನೇ ಹೇಳಿದ್ದು. ನೀವು ಈ ರೀತಿ ಹೇಳಿದ್ದೀರಿ, ನಿಮ್ಮ ಮಂತ್ರಿಗಳು ಹಾಗೆ ಹೇಳುತ್ತಾರೆ, ಎಲಿಪಟ್ಟು ಕೊಡಬೇಕಾಗಿತ್ತೇ ಎಂದು ಹೇಳುತ್ತಾರೆ. ನೀವು ಅದನ್ನು ಯಾರಿಗೆ ಹೇಳುವುದು? ನೀವು Manifestoನಲ್ಲಿ ಹೇಳಿರುವುದು ಯಾರಿಗೆ? ನನಗಲ್ಲ, ಅಥವಾ ನಿಮಗೇ ಹೇಳಿಕೊಂಡಿರುವುದಲ್ಲ, for the people of Karnataka, to the Voters of Karnataka, to the citizens of Karnataka. Not to yourself and not to me and not to anybody else. ಆದರೆ, ಈ ರಾಜ್ಯ ಸರ್ಕಾರದ Statement, ನಿಲುವೇನು? ಏನೋ ಅಳುವಾಗ ಪೆಪ್ಪರ್‌ಮೆಂಟ್ ಕೊಡುತ್ತೇವಪ್ಪ. ಚುನಾವಣೆಗೋಸ್ಕರ ನಾವೇನಾದರೂ ಹೇಳುತ್ತೇವೆ. ಅದನ್ನೆಲ್ಲ ಜಾರಿ ಮಾಡಬೇಕೆಂದು ಎಲ್ಲಿದೆ ಎಂದು ಹೇಳುವುದಾದರೆ ಜನರನ್ನು ನೀವು ಏನೆಂದು ತಿಳಿದುಕೊಂಡಿದ್ದೀರಿ? ಆಮೇಲೆ detailed ಚರ್ಚೆಗೆ ಬರುತ್ತೇನೆ.

ಅಧ್ಯಕ್ಷರು : ನಿಯಮ 60ಕ್ಕೆ ಸೀಮಿತವಾಗಿ ಮಾತನಾಡಿ.

ಶ್ರೀ ಸಿದ್ದರಾಮಯ್ಯ : ನಾನು ಅಷ್ಟಕ್ಕೇ ಸೀಮಿತವಾಗಿದ್ದೇನೆ. Rule 60 ಬಿಟ್ಟು ಆಚೆಗೆ ಹೋಗಿಲ್ಲ. ನಾನು ಅವರ maniefesto ಓದಿದೆ. ಅವರೇ ಹೇಳಿರುವುದನ್ನು ಅವರೇ ಒಪ್ಪಿಕೊಳ್ಳುವುದಕ್ಕೆ ತಯಾರಿಲ್ಲ. ನಿಮ್ಮ Cabinet colleague ಹೇಳಿರುವುದನ್ನು ಒಪ್ಪಿಕೊಳ್ಳುವುದಕ್ಕೆ ತಯಾರಿಲ್ಲ. ನೀವು ಉತ್ತರ ಕೊಡುವಾಗ dispute ಮಾಡಿ, ಅವರು ಹೇಳಿಲ್ಲ, manifesto ದಲ್ಲಿ ಹೇಳಿರುವುದು ಸರಿಯಿಲ್ಲ ಎಂದು ಹೇಳಿ, ಆಮೇಲೆ ನೋಡೋಣ. Detailed ಚರ್ಚೆಗೆ ಬಂದಾಗ ಹೇಳುತ್ತೇನೆ.

ಶ್ರೀ ಆರ್. ಅಶೋಕ್: ನಾವು ಒಪ್ಪಿಕೊಂಡಿದ್ದೇವಲ್ಲ? ಮುಖ್ಯಮಂತ್ರಿಯವರು ಚರ್ಚೆಗೆ ತಯಾರಿದ್ದೇವೆಂದು ಹೇಳಿದ್ದಾರಲ್ಲ? ನಾವು ತಯಾರಿದ್ದೇವೆಂದು Law Minister ಹೇಳಿದ್ದಾರೆ. ನೇರವಾಗಿ ನಿಯಮ 69ರಲ್ಲಿ ಚರ್ಚಿಸಲು ಅವಕಾಶ ಕೊಡಿ. ನಾವು ವಿರೋಧ ಮಾಡಿದರೆ ತಾವು ಹೇಳಬೇಕು. ನಾವು ವಿರೋಧವನ್ನೇ ಮಾಡುತ್ತಿಲ್ಲ. ಮಾನ್ಯ ಅಧ್ಯಕ್ಷರೆ, ತಾವು ರೂಲ್ ಪರಿವರ್ತನೆ ಮಾಡಿ ಅವಕಾಶ ಕೊಡಬಹುದು.

ಶ್ರೀ ಸಿದ್ದರಾಮಯ್ಯ : ಈ ರೀತಿ ಮಧ್ಯೆ ಎದ್ದು ನಿಲ್ಲುವುದು ಸರಿಯಲ್ಲ. Preliminary submission ಗೆ ಹೀಗೆ ಅಡ್ಡ ಬಂದರೆ ನಾವೇನು ಮಾಡಬೇಕು? I wanted to convince the Hon'ble speaker on such a serious matter. ಅವರನ್ನು convince ಮಾಡಿ ನಮಗೆ ನಿಯಮ 60ರ ಅಡಿಯಲ್ಲಿ ಚರ್ಚೆಗೆ ಅವಕಾಶ ಮಾಡಿಕೊಡಿ ಎಂದು ಕೇಳಬೇಡವೆ? ಈ ಸಮಸ್ಯೆಯ ಉದ್ದ, ಅಗಲ, ಆಳ ಬಹಳ ದೊಡ್ಡದಾಗಿದೆ. ಇದು ರಾಜ್ಯದ ಮೇಲೆ ಪರಿಣಾಮ ಬೀರುತ್ತದೆ, ಸಂವಿಧಾನದ ಮೇಲೆ ಪರಿಣಾಮ ಬೀರುತ್ತದೆ, ಕಾನೂನಿನ ಮೇಲೆ ಪರಿಣಾಮ ಬೀರುತ್ತದೆ, Law of the land ಮೇಲೆ ಪರಿಣಾಮ ಬೀರುತ್ತದೆ ಹಾಗೂ Rule of law ಮೇಲೆ ಪರಿಣಾಮ ಬೀರುತ್ತದೆ. ಈ ರಾಜ್ಯದಲ್ಲಿ ಭ್ರಷ್ಟಾಚಾರ ಎಂಬ ಪಿಡುಗೇನಿದೆ ಅದಕ್ಕೆ ಸಹಕಾರಿಯಾಗುವ ರೀತಿಯಲ್ಲಿ ವ್ಯವಸ್ಥೆ ನಿರ್ಮಾಣವಾಗುವುದಕ್ಕೆ ಹೊರಟುಬಿಟ್ಟಿದೆ. ಆದ್ದರಿಂದ, ಈ ವಿಷಯ ಬಹಳ serious ಆಗಿರುವುದರಿಂದ ನಾನೇನು ಹೇಳುತ್ತೇನೆಂದರೆ; ಅವರೇ ನೊಂದು ಹೇಳಿರುವ ಹಾಗೆ 'Total non-cooperation by the government in fighting corruption. Seized iron ore dis-appears in Karwar. Honest officer is suspended. Plea for appointment of Upa Lokayukta is ignored. Officials trapped in corruption cases are reinstated. Lokayukta officials involved in various probes are punished.' ಈ ಕಾರಣಗಳಿಗೋಸ್ಕರ ' I have suffered mentally' ಎಂದು ಅವರೇ

ಹೇಳಿದ್ದಾರೆ. 'There are several instances to show, how the Government has ignored, deliberately overruled or shown indifference to the institution. This is a slap on my face, and the institution. Why should I continue?' ಇದನ್ನು ಲೋಕಾಯುಕ್ತರು ಹೇಳಿರುವಂಥದ್ದು, ನಾನು ಹೇಳಿದ ಪದಗಳಲ್ಲ. ಅವರು ಹೇಳಿರುವ ಪದಗಳನ್ನೇ ಇಲ್ಲಿ repeat ಮಾಡಿದ್ದೇನೆ. ಇಷ್ಟು ಮನನೊಂದು 'This Government has humiliated Hon'ble Lokayukta ಎಂದು ಅವರು ಹೇಳುತ್ತಾರೆ, ಬಂದರು ಮಂತ್ರಿಗಳಾದ ಶ್ರೀ ಕೃಷ್ಣ ಪಾಲೇಮಾರ್‌ರವರು ಕಾರವಾರಕ್ಕೆ ಹೋಗಿ ಮೀಟಿಂಗ್ ಕರೆಯುತ್ತಾರೆ, ಶ್ರೀ ಗೋಕುಲ್, DCF ರವರು ಆ ಮೀಟಿಂಗ್‌ಗೆ ಹೋಗಿಲ್ಲವೆಂದು Chief Secretary ಯವರಿಗೆ ಮಂತ್ರಿಯವರು ಪತ್ರ ಬರೆಯುತ್ತಾರೆ. ಅವರು ಮಂಗಳೂರು ಜಿಲ್ಲೆಯ incharge Minister. ಉತ್ತರ ಕನ್ನಡ ಜಿಲ್ಲೆಗೆ Primary Education Minister ರವರು in charge ಆಗಿದ್ದಾರೆ. As a ports Minister he has gone there. According to Lokayukta he went there in order to punish the officers who have investigated 300 crore rupess scam. 5 lakh metric tones of Iron Ore disappeared.

ಅಧ್ಯಕ್ಷರು : ಇದೆಲ್ಲ Rule 60ಗೆ whether it amounts to preliminary submission? It amounts to detailed discussion. Detail ಗೆ ಹೋಗುವುದು ಬೇಡ.

ಶ್ರೀ ಸಿದ್ದರಾಮಯ್ಯ : I hope that you are convinced. ನಾನು detail ಗೆ ಹೋದರೆ ಅದರ introduction ಬೇರೆಯಾಗಿರುತ್ತದೆ.

ಅಧ್ಯಕ್ಷರು : Introduction means? How under rule 60 it will come? ಅಷ್ಟಕ್ಕೇ ಸೀಮಿತ ಮಾಡಿ.

ಶ್ರೀ ಸಿದ್ದರಾಮಯ್ಯ : Rule 60ರಲ್ಲಿಯೇ ಮಾತನಾಡುತ್ತಿದ್ದೇನೆ. ಆ ಅಧಿಕಾರಿಗೆ ಶಿಕ್ಷೆ ಮಾಡುವುದಕ್ಕೆ ಹೋದರು. ಮತ್ತೊಬ್ಬ ಅಧಿಕಾರಿಯಾದ ಶ್ರೀ ನರೇಂದ್ರ ಹಿತ್ತಲಮಕ್ಕಿಯವರು a man who lodged the complaint and who is responsible for the seizure of this Iron ore, is transferred ಈ ತಿಂಗಳ 26ನೇ ತಾರೀಖು ಅವರಿಗೆ transfer ಆಗಿದೆ transferred to Bidar. Where was the necessity to transfer? ಮೊನ್ನೆ Forest Department ನವರು transfer ಮಾಡಿದ್ದಾರೆ, ಏಕೆ ಮಾಡಿದರು? ಗೋಕುಲ್‌ರವರನ್ನು suspend ಮಾಡಿ ಎಂದು ಮಂತ್ರಿಯವರೇಕೆ ಪತ್ರ ಬರೆದರು? ಲೋಕಾಯುಕ್ತರಿಗೆ ನೋವಾಗಿರುವುದೇನೆಂದರೆ, 'ನಾನು ಈ ಭ್ರಷ್ಟಾಚಾರ ತಡೆಯುವುದಕ್ಕೆ ಇಷ್ಟೊಂದು ಕಷ್ಟಪಟ್ಟು ಕೆಲಸ ಮಾಡುತ್ತಿದ್ದೇನೆ, ಜೀವ ಭಯವಿದ್ದರೂ ಕೂಡ, ಅಧಿಕಾರಿಗಳು ಜೀವ ಭಯವನ್ನು ಲೆಕ್ಕಕ್ಕೆ ಇಟ್ಟುಕೊಳ್ಳದೆ investigate ಮಾಡಿ ಇಷ್ಟು ದೊಡ್ಡ scam ಅನ್ನು unearth ಮಾಡಿದ್ದಾರೆ, ಇಂಥ ಪರಿಸ್ಥಿತಿಯಲ್ಲಿರುವ ಅಧಿಕಾರಿಯನ್ನು ಯಾವುದೋ ಒಂದು ನೆಪ ಹೇಳಿ suspend ಮಾಡಿ ಎಂದು ಮಂತ್ರಿಯವರು Chief Secretary ಯವರಿಗೆ ಪತ್ರ ಬರೆಯುತ್ತಾರೆ, ನಾನು ಲೋಕಾಯುಕ್ತನಾಗಿ ನನ್ನ ಜೊತೆ ಕೆಲಸ ಮಾಡುವ ಅಧಿಕಾರಿಗಳನ್ನು ರಕ್ಷಣೆ ಮಾಡಿಕೊಳ್ಳುವುದಕ್ಕಾಗದೇ ಹೋದರೆ ನಾನೇಕೆ ಇರಬೇಕು? ಎಂದು ಮನನೊಂದು ರಾಜೀನಾಮೆ ಕೊಟ್ಟಿದ್ದಾರೆ. That is the statement he made. ರಾಜೀನಾಮೆ ಕೊಟ್ಟಿದ್ದರಿಂದ ಏನಾಗಿದೆ ಎಂದರೆ, ಸಂವಿಧಾನಬದ್ದವಾಗಿ ರಚಿತವಾದಂತಹ autonomous body ಯನ್ನು ಮಾಡಿರುವುದೇಕೆಂದರೆ ಈ ರಾಜ್ಯದಲ್ಲಿನ ಆಡಳಿತದಲ್ಲಿರುವ ಭ್ರಷ್ಟಾಚಾರ, ದುರಾಡಳಿತ, ಜನರಿಗಾಗತಕ್ಕಂಥ ಅನ್ಯಾಯಗಳು ಇದರ ವಿರುದ್ಧ ಹೋರಾಟ ಮಾಡಲು ಅಂತಹ ಸಂಸ್ಥೆಗೆ ಸರ್ಕಾರ ಅಗೌರವ ಮಾಡಿದೆ. ಅವರು ರಾಜೀನಾಮೆ ಕೊಡುವ ಪರಿಸ್ಥಿತಿಯನ್ನು ನಿರ್ಮಾಣ ಮಾಡಿದ್ದಾರೆ. ಅವರಿಗೆ ನೋವುಂಟಾಗುವಂತೆ ಮಾಡಿದ್ದಾರೆ. ಅನೇಕ ಸಂದರ್ಭಗಳಲ್ಲಿ ಅವರು ಭ್ರಷ್ಟಾಚಾರವನ್ನು ಬಯಲಿಗೆಳೆದಾಗ ಇವರಿಗೆ ಮುಜುಗರವಾದ್ದರಿಂದ ಅದನ್ನು

defend ಮಾಡಿಕೊಳ್ಳಲಿಕ್ಕೆ ಇವರಿಗೆ ಆಗದೇ ಇರುವುದರಿಂದ ಈ ಸರ್ಕಾರವೂ ಕೂಡ ಭ್ರಷ್ಟಾಚಾರದ ಜೊತೆ ಕುಮ್ಮಕ್ಕು ಕೊಡುತ್ತಿರುವುದರಿಂದ ಇವರು ರಾಜೀನಾಮೆ ಕೊಡಬೇಕೆನ್ನುವ ಮನಸ್ಸಿಟ್ಟುಕೊಂಡು ಅವರಿಗೆ ನೋವು ಮಾಡಿದ್ದಾರೆ. ಹಾಗಾಗಿ ಅವರು ರಾಜೀನಾಮೆ ಕೊಟ್ಟಿದ್ದಾರೆ. ಸಂವಿಧಾನಬದ್ಧವಾಗಿ ರಚನೆಯಾದ ಸಂಸ್ಥೆಗೆ ಇವತ್ತು ದೊಡ್ಡ ಅವಮಾನವಾಗಿದೆ. 'It is a slap on the institution.'ಎಂದು ಅವರು ಹೇಳುತ್ತಾರೆ. 'It is not only a slap on my face, it is a slap on the institution'. ಎಂದು ಅವರು ಹೇಳುತ್ತಾರೆ. Human Rights Commission ಮೇಲೆ ಒಂದು ಕಡೆ ದಾಳಿ ಮಾಡುತ್ತೀರಿ, Backward Classes Commission ಮೇಲೆ ಒಂದು ಕಡೆ ದಾಳಿ ಮಾಡುತ್ತಿದ್ದೀರಿ, ಇದನ್ನು ನಾನು ಹೇಳಿದ್ದಲ್ಲ, Governor ರವರು ಹೇಳಿದ್ದಾರೆ.

ಅಧ್ಯಕ್ಷರು : Rule 60 ರಲ್ಲಿ ಇದೆಲ್ಲ ಬರುತ್ತದೆಯೇ?

ಶ್ರೀ ಸಿದ್ದರಾಮಯ್ಯ : ಅವರು ಹೇಳಿದ್ದನ್ನು ಹೇಳುವುದು ಬೇಡ ಎಂದರೆ ಬರಿ Rule 60 ಎಂದು ಹೇಳಿ ಕುಳಿತುಕೊಳ್ಳಲೇ?

ಅಧ್ಯಕ್ಷರು : Preliminary submission ನಲ್ಲಿ ಒಂದು ವಿಚಾರದ ಮೇಲೆ ಹೇಳಬೇಕು. ಅದು ಬಿಟ್ಟು ಇಲ್ಲಿ ವಿಚಾರವನ್ನು ಪ್ರಸ್ತಾಪಿಸಿದ್ದೀರಿ. It is the fifth issue.

ಶ್ರೀ ಸಿದ್ದರಾಮಯ್ಯ : ಲೋಕಾಯುಕ್ತರ ರಾಜೀನಾಮೆ ವಿಷಯ ಬಿಟ್ಟು ಇಲ್ಲಿ ಇನ್ನೇನಾದರೂ ಹೇಳಿದ್ದೇನೆಯೇ?

MR. SPEAKER : It is the fifth issue.

ಶ್ರೀ ಸಿದ್ದರಾಮಯ್ಯ : ನೀವು ಹೀಗೆ ಹೇಳಿದರೆ ನಮ್ಮ ಹುಮ್ಮಸ್ಸು ಹೋಗಿಬಿಡುತ್ತದೆ. ಏನೇನು ಮಾತನಾಡಬೇಕೆಂದು ನಾವು ತಯಾರಿ ಮಾಡಿಕೊಂಡು ಬಂದಿರುತ್ತೇವೆ. ಅವೆಲ್ಲ ಹಿಂದಕ್ಕೆ ಹೋಗಿಬಿಡುತ್ತವೆ.

ಅಧ್ಯಕ್ಷರು : ನಿಯಮಾವಳಿ ಪ್ರಕಾರ ಸದನ ನಡೆಸಬೇಕಾಗುತ್ತದೆ. ಚರ್ಚೆಯಲ್ಲಿ ತಾವು ಎಲ್ಲವನ್ನೂ ಹೇಳುವುದಕ್ಕೆ ಅವಕಾಶವಿದೆ.

ಶ್ರೀ ಸಿದ್ದರಾಮಯ್ಯ : ಈ Institutions ನಾಶವಾಗಬಾರದು. ಈ Institution ನಾಶವಾದರೆ ಪ್ರಜಾಪ್ರಭುತ್ವ ನಾಶವಾಗುತ್ತದೆ. ದೇಶದಲ್ಲಿ anarchy ಬರುತ್ತದೆ. ಹೇಳುವವರು, ಕೇಳುವವರು ಇಲ್ಲದ ಹಾಗಾಗುತ್ತಾರೆ. ಇಂಥ ಪರಿಸ್ಥಿತಿ ಬರಬಾರದು. There is no governance ಎಂದು ಹೇಳಬೇಕಾಗುತ್ತದಲ್ಲ? ಈ ತರಹ Governor ರವರು ಹೇಳಿದ್ದಾರೆ. ಆದ್ದರಿಂದ, ಈ ಸಂಸ್ಥೆ ಇದೆಯಲ್ಲಾ ಇದನ್ನು ಸರ್ಕಾರವಾಗಲಿ, ನಾವಾಗಲಿ, ಯಾರೇ ಆಗಲಿ ಗೌರವಿಸಬೇಕು. ಈ ಸಂವಿಧಾನದಡಿಯಲ್ಲಿ ಈ ಸಂಸ್ಥೆಯನ್ನು ನಾವೇ create ಮಾಡಿರುವುದು. ನಾವೇ ಗೌರವ ಕೊಡದಿದ್ದರೆ ಇನ್ಯಾರು ಗೌರವ ಕೊಡುತ್ತಾರೆ? ಅವರು ಒಳ್ಳೆಯ ಹೋರಾಟ ಮಾಡುತ್ತಾರೆಂದು ನೀವೇ ಒಪ್ಪಿಕೊಳ್ಳುತ್ತೀರಿ. ಅವರು ಪ್ರಾಮಾಣಿಕರು ಹೋರಾಟ ಮಾಡುತ್ತಾರೆ, ಅವರ ಹಿನ್ನೆಲೆ ಚೆನ್ನಾಗಿದೆ ಎಂದು ನೀವೆ ಒಪ್ಪಿಕೊಳ್ಳುತ್ತೀರಿ. ಇದೆಲ್ಲ ಇದ್ದರೂ ಕೂಡ ಆಮೇಲಿನ ಇವರ ಹೇಳಿಕೆಗಳು ಏನೆಂದರೆ, ಕೇಂದ್ರ ಸರ್ಕಾರದವರು ಇವರಿಗೆ ಏನೋ ಆಸೆ ತೋರಿಸಿರಬೇಕು, ನಾವು ಸಾಧನಾ ಸಮಾವೇಶ ಮಾಡುವಾಗ ಇಂಥ ಸನ್ನಿವೇಶದಲ್ಲಿ ರಾಜೀನಾಮೆ ಕೊಟ್ಟಿದ್ದಾರೆ. ಮನಸ್ಸಿಗೆ ನೋವಾದರೂ ಕಾಯುತ್ತಾ ಕುಳಿತುಕೊಳ್ಳಬೇಕೆ? ನೀವು ದಿನಾ ಒಂದೊಂದು ಸಮಾವೇಶ ಮಾಡುತ್ತೀರಿ, ಅದನ್ನು ನೋಡುತ್ತಾ ಕುಳಿತುಕೊಳ್ಳಬೇಕೆ. ನಿಮ್ಮ ಪಕ್ಷದ ವೈಭವೀಕರಣ ಮಾಡುವುದಕ್ಕೆ ದಿನಾ ಒಂದೊಂದು ಸಮಾವೇಶ ಮಾಡುತ್ತೀರಿ, ಅದನ್ನೆಲ್ಲಾ ಅವರು ನೋಡುತ್ತಾ ಕುಳಿತುಕೊಳ್ಳುವುದಕ್ಕಾಗುತ್ತದೆಯೇ? ಅವರಿಗೆ ಯಾವಾಗ ಮನಸ್ಸಿಗೆ ನೋವು ಆಯಿತೋ ಆಗ ಅವರು ರಾಜೀನಾಮೆ ಕೊಟ್ಟಿದ್ದಾರೆ. ಇದಕ್ಕೆಲ್ಲ ಅವರೇ ಉತ್ತರ ಕೊಟ್ಟಿದ್ದಾರೆ. Detailed ಚರ್ಚೆಗೆ ಬಂದಾಗ I will mention all those things, how he has reacted, how the ministers have reacted, ಇವೆಲ್ಲದರ ಬಗ್ಗೆ ನಾನು ಆಮೇಲೆ ಹೇಳುತ್ತೇನೆ. ಇದರಿಂದ ಈ ರಾಜ್ಯದಲ್ಲಿ ಭ್ರಷ್ಟಾಚಾರದ ವಿರುದ್ಧ ಹೋರಾಟ ಮಾಡತಕ್ಕಂಥ ಸಂಸ್ಥೆಗೆ ನಾವೇ ಕಾಲು ಹಿಡಿದು ಎಳೆದ ಹಾಗೆ ಆಗುತ್ತದೆ. ನಾವೇ ಅದಕ್ಕೆ ಅಗೌರವ ಮಾಡಿದ ಹಾಗೆ ಆಗುತ್ತದೆ. ಆದ್ದರಿಂದ ನಾನು, ಲೋಕಾಯುಕ್ತರ

ರಾಜೀನಾಮೆ ವಿಚಾರದಲ್ಲಿ ನಿಯಮ 60ರಡಿಯಲ್ಲಿ ನಿಲುವಳಿ ಸೂಚನೆ ಮಂಡಿಸಿರುವ ವಿಚಾರದಲ್ಲಿ, sentiments of the people of the state is that he should continue ಎಂದು. ಮಾನ್ಯ ಮುಖ್ಯಮಂತ್ರಿಯವರು ಬಾಯಿಮಾತಿಗಾದರೂ ಹೇಳಿಲಿಲ್ಲ ಎಂದು ಈ ರಾಜ್ಯದ ಜನರು ನಿಮಗೆ ಶಾಪ ಹಾಕುತ್ತಿದ್ದಾರೆ. ನೀವು ಆಡಿದ ಮಾತುಗಳನ್ನು ನೀವೇ ನುಂಗುತ್ತಿದ್ದೀರಿ ಎಂದು ಹೇಳುತ್ತಿದ್ದಾರೆ. ನೀವು ಕೊಟ್ಟಂಥ ವಚನಗಳಿಗೆ ನೀವೇ ಬೆಲೆ ಕೊಡುತ್ತಿಲ್ಲ ಎಂದು ಜನ ಹೇಳುತ್ತಿದ್ದಾರೆ.

ಅಧ್ಯಕ್ಷರು : Preliminary submission ಎಂದು one hour ಆಯಿತು.

ಶ್ರೀ ಸಿದ್ದರಾಮಯ್ಯ : ಇದು ಗಹನವಾದ ವಿಚಾರವಾಗಿದೆ.

ಅಧ್ಯಕ್ಷರು : Preliminary submission ಗೆ ಅಷ್ಟು ಸಮಯ ಬೇಡ. ತಾವು ಚರ್ಚೆಯನ್ನೇ ಮಾಡಿದ್ದೀರಿ.

ಶ್ರೀ ಸಿದ್ದರಾಮಯ್ಯ : ಮುಗಿಸುತ್ತೇನೆ. ರಾಜ್ಯದಲ್ಲಿ ಇಂಥ ಒಂದು ಪರಿಸ್ಥಿತಿ ನಿರ್ಮಾಣವಾಗಿದೆ. ನನ್ನ ಪ್ರಕಾರ ಪ್ರಜಾಪ್ರಭುತ್ವದ ಕೊಲೆಯಾಗಿದೆ, ಕಗ್ಗೊಲೆಯಾಗಿದೆ. ಸಂವಿಧಾನದ breakdown ಆಗಿದೆ. ಆಚಾರ್ಯರೆ, ನೀವು ಡಾಕ್ಟರ್, ನಾನು ಲಾಯರ್, Anyway , I am better than Mr. Acharya. So far as medicines are concerned, you are better than I. As far as Law is concerned, I am better than you. ಸಭಾಧ್ಯಕ್ಷರೆ, ತಾವೂ ಲಾಯರ್ ಆಗಿದ್ದೀರಿ. ನಿಮಗೆ ನಾನೂ ಏನೂ ಹೇಳುವುದಿಲ್ಲ. ಇವತ್ತು ಇಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಇದರ ಬಗ್ಗೆ ಸದನ ಒಂದು ನಿರ್ಣಯ ಮಾಡಬೇಕು. ನೀವು ಅವರನ್ನು ಈಗಲಾದರೂ ಮುಂದುವರೆಯಿರಿ ಎಂದು ಹೇಳುತ್ತೀರಿ ಎಂದು ಅಂದುಕೊಂಡಿದ್ದೆ. ಆದರೆ, ನೀವು ಏನೂ ಮಾತನಾಡುವುದೇ ಇಲ್ಲ. ಆದ್ದರಿಂದ ಸರ್ಕಾರ ಉತ್ತರ ಹೇಳಬೇಕು. It is our responsibility. ಅವರು ಮುಂದುವರೆಯಬೇಕು, ಈ ರಾಜ್ಯದಲ್ಲಿ ಅವರು ರಾಜೀನಾಮೆ ಕೊಡುವುದರಿಂದ ದೊಡ್ಡ Vacuum

create ಆಗುತ್ತದೆ, ಸಂವಿಧಾನ breakdown ಆಗುತ್ತದೆ, ಪ್ರಜಾಪ್ರಭುತ್ವ ಕಗ್ಗೊಲೆಯಾಗುತ್ತದೆ, ಇಂಥ ಒಬ್ಬ honest ವ್ಯಕ್ತಿಗೆ ನಾವು ಅಗೌರವ ಮಾಡುವುದು ಯಾರಿಗೂ ಶೋಭೆ ತರುವುದಲ್ಲ ಎನ್ನುವ ಮಾತನ್ನು ನಾನು ಇಲ್ಲಿ ಹೇಳುತ್ತಿದ್ದೇನೆ. ಇದರ ಬಗ್ಗೆ ಇನ್ನೂ ಕೂಲಂಕುಷವಾಗಿ ಚರ್ಚೆಮಾಡಿ. ಈ ಸದನ ಒಂದು ತೀರ್ಮಾನ ಮಾಡಬೇಕು. ನಿಯಮ 60ರ ಪ್ರಕಾರ, I hope that you are satisfied. I hope that you are convinced, I would be able to convince you. ನಿಯಮ 60ರಡಿಯಲ್ಲಿಯೇ ಇದೊಂದು ವಿಶೇಷ ಪ್ರಕರಣ ಎಂದು ಹೇಳಿ, ಇದೊಂದು ವಿಶೇಷ ಘಟನೆಯಾಗಿರುವುರಿಂದ, ಸಂವಿಧಾನಕ್ಕೆ ಸಂಬಂಧಪಟ್ಟಿರುವುದರಿಂದ, ಪ್ರಜಾಪ್ರಭುತ್ವಕ್ಕೆ ಸಂಬಂಧಪಟ್ಟಿರುವುದರಿಂದ, ಇಡೀ ರಾಜ್ಯಕ್ಕೆ ಸಂಬಂಧಪಟ್ಟಿರುವುದರಿಂದ, ಇಡೀ ಆಡಳಿತ ವ್ಯವಸ್ಥೆಗೆ ಸಂಬಂಧಪಟ್ಟಿರುವುದದರಿಂದ ಇದರ ಮೇಲೆ ನಿಯಮ 60ರಡಿಯಲ್ಲಿ ಸಂಪೂರ್ಣವಾಗಿ ಚರ್ಚೆ ಮಾಡಲಿಕ್ಕೆ ಅವಕಾಶ ಮಾಡಿಕೊಡಬೇಕೆಂದು ನಿಮ್ಮಲ್ಲಿ ಅತ್ಯಂತ ವಿನಯದಿಂದ ಮನವಿ ಮಾಡುತ್ತಿದ್ದೇವೆ.

ಶ್ರೀ ಹೆಚ್. ಡಿ. ರೇವಣ್ಣ : ನಾನೂ ಸಹ ನೋಟಿಸ್ ಕೊಟ್ಟಿದ್ದೇನೆ.

ಅಧ್ಯಕ್ಷರು : ಒಂದು ನೋಟಿಸ್ ಅನ್ನು ಚರ್ಚೆಗೆ ತೆಗೆದುಕೊಳ್ಳಲಿಕ್ಕೆ ಅವಕಾಶವಿದೆ.

ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಇದು Preliminary submission, ನೀವು notice ಕೊಟ್ಟಿರುವುದು ಬಂದಿದೆ. ನೀವು ಕೊಟ್ಟಿದ್ದನ್ನು ತೆಗೆದುಕೊಂಡಿದ್ದಾರೆ. Rule 60 ಯಲ್ಲಿ ಏಕೆ ಬರುತ್ತದೆ ಎಂದು ಹೇಳುವುದಕ್ಕೆ ಪ್ರಯತ್ನ ಪಟ್ಟಿದ್ದೀರಿ. ಅವರು ನೋಟಿಸ್ ಕೊಟ್ಟಿದ್ದ ವಿಚಾರ ಬಂದಾಗ ಅವರ motion ತೆಗೆದುಕೊಳ್ಳಲಿ. ಯಾವುದಾದರೂ ಒಂದು motion ತೆಗೆದುಕೊಳ್ಳಬೇಕು.

ಅಧ್ಯಕ್ಷರು: ಎರಡು motion ಅನ್ನು ಒಟ್ಟಿಗೇ ತೆಗೆದುಕೊಳ್ಳಲಿಕ್ಕೆ ಹೇಗೆ ಸಾಧ್ಯ?

ಶ್ರೀ ಹೆಚ್.ಡಿ.ರೇವಣ್ಣ : ಎರಡೂ same issues ಇವೆ.

(ಗೊಂದಲ)

ಅಧ್ಯಕ್ಷರು: ಎರಡನ್ನೂ ಒಟ್ಟಿಗೆ ತೆಗೆದುಕೊಳ್ಳಲಿಕ್ಕೆ ಎಲ್ಲಿ ಅವಕಾಶವಿದೆ?

(ಗೊಂದಲ)

ಶ್ರೀ ಹೆಚ್ ಸಿ ಬಾಲಕೃಷ್ಣ : ಎರಡೂ ಒಂದೇ ವಿಚಾರವಾಗಿದೆ. ಆದ್ದರಿಂದ, ಇವರು ಎರಡು ನಿಮಿಷ ಮಾತನಾಡುತ್ತಾರೆ.

(ಗೊಂದಲ)

ಶ್ರೀ ಎಸ್. ಸುರೇಶ್ ಕುಮಾರ್ : ಒಂದು motion ಅನ್ನು, ತಮ್ಮದು ತೆಗೆದುಕೊಂಡಿದ್ದಾರೆ. ಎರಡನ್ನೂ ಸೇರಿಸಿ ಮಾಡುವುದಕ್ಕಾಗುವುದಿಲ್ಲ. ತಾವು Preliminary submission ಮಾಡಿದ್ದೀರಿ.

ಅಧ್ಯಕ್ಷರು: ಆಯಿತು, ಅವರು 2 ಅಥವಾ 5 ನಿಮಿಷ ಮಾತನಾಡಲಿ. ರೇವಣ್ಣನವರೆ ನೀವು ಕೇವಲ ನಿಯಮ 60ಕ್ಕೆ ಸೀಮಿತವಾಗಿ ಮಾತ್ರ ಮಾತನಾಡಬೇಕು. ಇಲ್ಲದಿದ್ದರೆ ನಾನು ಕಟ್ ಮಾಡುತ್ತೇನೆ. ನಿಯಮ 60ರೊಳಗೆ ಈ ವಿಚಾರ ಹೇಗೆ ಬರುತ್ತದೆ ಎಂದು ಮಾತ್ರ ಮಾತನಾಡಿ.

(ಗೊಂದಲ)

ಅಧ್ಯಕ್ಷರು: ನಾನು ರೇವಣ್ಣನವರನ್ನು ಕರೆದಿದ್ದೇನೆ. ಇದು preliminary submission.

SRI T B JAYANCHANDRA: I am on a point of order. ನಾವು ಕೊಟ್ಟ ನಿಲುವಳಿ ಸೂಚನೆಗೆ ನಾನೂ ಸಹ ಒಬ್ಬ signatory ಇದ್ದೇನೆ. ಇದು ಸದನದಲ್ಲಿ ಪದೇ ಪದೇ ಬರುತ್ತಿರುತ್ತದೆ. I want a clear direction from the chair. ನಾವು ನಿಲುವಳಿ ಸೂಚನೆ move ಮಾಡಿದ್ದೇವೆ. ಒಂದೇ ವಿಚಾರದಲ್ಲಿ ಎರಡು ನಿಲುವಳಿ ಸೂಚನೆಗಳನ್ನು ತೆಗೆದುಕೊಳ್ಳುವುದಕ್ಕೆ ಬರುತ್ತದೆಯೇ? ತಾವು ಹೇಳಬೇಕು.

ಅಧ್ಯಕ್ಷರು: ಎರಡೂ ಒಂದೇ ಸಮಯಕ್ಕೆ ಅಂದರೆ 9 ಗಂಟೆಗೆ ಬಂದಿದೆ.

ಶ್ರೀ ಟಿ ಬಿ ಜಯಚಂದ್ರ: ನಾವು ನಿನ್ನೆಯೇ ಕೊಟ್ಟಿದ್ದೇವೆ. ತಮ್ಮ ಕಛೇರಿಗೆ ಕೊಟ್ಟಿದ್ದೇವೆ.

ಅಧ್ಯಕ್ಷರು: ನಿನ್ನೆ ಕೊಟ್ಟಿದ್ದೀರಿ. It cannot be considered. ನಾನು ಮಾನ್ಯ ವಿರೋಧ ಪಕ್ಷದ ನಾಯಕರು ಕೊಟ್ಟಿದ್ದು ಎಂದು ಅದಕ್ಕೇ ಮಾನ್ಯತೆ ಕೊಟ್ಟಿದ್ದೇನೆ. ಹಾಗಾಗಿ ಎರಡೂ ಒಂದೇ ವಿಚಾರ ಇರುವುದರಿಂದ ಅವರು 5 ನಿಮಿಷ submission ಮಾಡಲಿ.

ಶ್ರೀ ಎಸ್. ಸುರೇಶ್ ಕುಮಾರ್ : ಅವರಿಗೆ submission ಮಾಡಲು ಅವಕಾಶ ಕೊಡಿ. ಅದು ultimately, ತಮಗೆ ಬಿಟ್ಟಿದ್ದು. ಆದರೆ, ಜಯಚಂದ್ರರವರು ಪ್ರಸ್ತಾಪ ಮಾಡಿದ ಪ್ರಕಾರ ಸಭೆಯಲ್ಲಿ ಇದು ಯಾವ precedent ಆಗುತ್ತದೆ? ಒಂದು subject ಮೇಲೆ ಒಂದೇ ಒಂದು motion ಮೇಲೆ ಎರಡು preliminary submission ಮಾಡುವುದಕ್ಕಾಗುತ್ತದೆಯೇ? First ಕೊಡುವುದು, running race ನಲ್ಲಿ ಒಂದು second ಮುಂಚೆ ಹೋಗುವುದು ಅದು ನನಗೆ ಬೇಕಾಗಿಲ್ಲ. ಈಗ ಒಂದು motion ಮೇಲೆ ಪ್ರತಿಪಕ್ಷದ ನಾಯಕರಿಗೆ ನೀವು preliminary submission ಗೆ ಅವಕಾಶ ಕೊಟ್ಟಿದ್ದೀರಿ. ಅವರು ಮಾತನಾಡಿದ್ದಾರೆ. ಅವರು 'I have convinced the Speaker.' ಎಂದು ಹೇಳಿದ್ದಾರೆ.

ಶ್ರೀ ಹೆಚ್. ಸಿ. ಬಾಲಕೃಷ್ಣ: ಅವರು ಎರಡು ನಿಮಿಷ ಮಾತನಾಡುತ್ತಾರೆ.

ಶ್ರೀ ಎಸ್. ಸುರೇಶ್ ಕುಮಾರ್ : ಈಗ ಉತ್ತರ ಕೊಡಬೇಕು. ಎರಡು preliminary submission ಮಾಡುವುದಕ್ಕೆ ಹೇಗೆ ಸಾಧ್ಯವಾಗುತ್ತದೆ? Notice ಕೊಡುವುದರಲ್ಲಿ ಒಂದು ನಿಮಿಷ ಮುಂಚೆ ಇರಬಹುದು, ಅಥವಾ ಒಂದು ನಿಮಿಷ ಆದಮೇಲೇ ಇರಬಹುದು. ಅಕಸ್ಮಾತ್ allow ಮಾಡಿದರೆ main ನಲ್ಲಿಯೇ ಮಾತನಾಡಬಹುದಲ್ಲವೇ?

ಶ್ರೀ ಹೆಚ್ ಸಿ ಬಾಲಕೃಷ್ಣ: ನಮ್ಮ ನಾಯಕರು 2 ನಿಮಿಷ ಮಾತನಾಡುತ್ತಾರೆ. Chair allow ಮಾಡಿದೆ.

SRI. S. SURESH KUMAR: Preliminary submission ಒಂದೇ.

ಅಧ್ಯಕ್ಷರು: ಬಹುಶಃ ಈ ರೀತಿ point of order ಎತ್ತಿರುವುದರಿಂದ ಕೇವಲ ಒಂದನ್ನು ಮಾತ್ರ allow ಮಾಡುವುದಕ್ಕೆ ನಿಯಮದಲ್ಲಿ ಸ್ಪಷ್ಟವಾಗಿ ಅವಕಾಶವಿದೆ. ಮಾನ್ಯ ವಿರೋಧ ಪಕ್ಷದ ನಾಯಕರು ಏನು ಈಗಾಗಲೇ ಕೊಟ್ಟಿದ್ದಾರೆ ಅದನ್ನು ನಾನು allow ಮಾಡಿದ್ದೇನೆ. ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು ಹೇಳಬೇಕು.

ಶ್ರೀ ಹೆಚ್ ಸಿ ಬಾಲಕೃಷ್ಣ: ಮಾನ್ಯ ಅಧ್ಯಕ್ಷರೆ, ನಾವು preliminary submission ಮಾಡಲು ಮೊದಲು ನೀವು ನಮಗೆ 2 ನಿಮಿಷ ಮಾತನಾಡಿ ಎಂದು allow ಮಾಡಿದ್ದೀರಿ.

ಅಧ್ಯಕ್ಷರು: ಜಯಚಂದ್ರರವರು point of order ಎತ್ತಿದ್ದಾರೆ. ಅದರ ಮೇಲೆ ನಾನು ruling ಕೊಟ್ಟಿದ್ದೇನೆ.

(ಗೊಂದಲ)

MR. SPEAKER: How can you question? ನೀವು ಹೇಳಿದ ಹಾಗೆ ಎಲ್ಲವೂ ಆಗುವುದಿಲ್ಲ. He has raised a point of order, I have given ruling. ಅವರು point of order ಎತ್ತಿದ್ದಾರೆ, ಆ point of order ಮೇಲೆ I have given ruling. You cannot question.

(ಗೊಂದಲ)

ಅಧ್ಯಕ್ಷರು: ಬೇರೆಯವರಿಗೆ ಅವಕಾಶ ಇಲ್ಲ. ತಾವು ಹೇಳಿ.

(ಗೊಂದಲ)

1–30 ಪಿ.ಎಂ.

ಶ್ರೀ ಹೆಚ್ ಸಿ ಬಾಲಕೃಷ್ಣ: ನಾವು ಕೂಡ ಸೂಚನೆ ಕೊಟ್ಟಿದ್ದೇವೆ.

ಶ್ರೀ ಹೆಚ್ ಡಿ ರೇವಣ್ಣ: ನಾವು ಕೂಡ ನಿಲುವಳಿ ಸೂಚನೆಯನ್ನು ಬೆಳಗ್ಗೆಯೇ ಕೊಟ್ಟಿದ್ದೇವೆ.

ಅಧ್ಯಕ್ಷರು: ನಾನು ರೂಲಿಂಗ್ ಕೊಟ್ಟಮೇಲೂ ನೀವು ಕೇಳಿದರೆ ನಾನು ಏನೂ ಮಾಡುವ ಹಾಗಿಲ್ಲ.

ಶ್ರೀ ಎಸ್. ಸುರೇಶ್ ಕುಮಾರ್ : ತಾವು ಎಲ್ಲಾ ಹಿರಿಯ ಸದಸ್ಯರು. ಒಂದು ಸಲ ರೂಲಿಂಗ್ ಕೊಟ್ಟಮೇಲೂ ನೀವು ಹೀಗೆ ಮಾಡಿದರೆ ಹೇಗೆ?

ಶ್ರೀ ಹೆಚ್ ಸಿ ಬಾಲಕೃಷ್ಣ: ನಮಗೂ ಒಂದೆರಡು ನಿಮಿಷ ಅವಕಾಶ ಕೊಡಿ.

ಶ್ರೀ ಎಸ್. ಸುರೇಶ್ ಕುಮಾರ್ : ಪ್ರತಿಪಕ್ಷದ ನಾಯಕರಾದ ಶ್ರೀ ಸಿದ್ದರಾಮಯ್ಯನವರು ಬಹಳ ದೀರ್ಘಕಾಲ ಮಾತನಾಡಿ ಪ್ರಿಲಿಮಿನರಿ ಸಬ್‌ಮಿಷನ್ ಮಂಡಿಸಿದ್ದಾರೆ.

ಶ್ರೀ ಹೆಚ್ ಸಿ ಬಾಲಕೃಷ್ಣ: ಇಲ್ಲ ನಮಗೆ ಅವಕಾಶ ಕೊಡಲೇಬೇಕು.

(ಈ ಹಂತದಲ್ಲಿ ಜೆ.ಡಿ.(ಎಸ್.) ಸದಸ್ಯರು ಸದನದ ಬಾವಿಗೆ ಬಂದರು)

ಅಧ್ಯಕ್ಷರು:ತಾವು ದಯವಿಟ್ಟು ನಿಮ್ಮ ನಿಮ್ಮ ಸ್ಥಾನಗಳಿಗೆ ಹೋಗಿ.

ಶ್ರೀ ಎಸ್. ಸುರೇಶ್ ಕುಮಾರ್ : ಸ್ವಾಮಿ, ಪ್ರಿಲಿಮಿನರಿ ಸಬ್‌ಮಿಷನ್‌ಗೆ ಧರಣಿ ಮಾಡುವುದನ್ನು ಎಲ್ಲೂ ಕೂಡ ನಾನು ಕೇಳಿರಲಿಲ್ಲ. ಮಾನ್ಯ ಸಿದ್ದರಾಮಯ್ಯನವರೆ, ಪ್ರಿಲಿಮಿನರಿ ಸಬ್‌ಮಿಷನ್‌ಗೆ ಧರಣಿ ಮಾಡುವುದು ನಾನು ಎಲ್ಲೂ ಕೂಡ ಕಂಡಿರಲಿಲ್ಲ, ಕೇಳಿರಲಿಲ್ಲ.

(ಗೊಂದಲ)

ಅಧ್ಯಕ್ಷರು: ನೀವು ಹೇಳಿ.

ಶ್ರೀ ಎಸ್. ಸುರೇಶ್ ಕುಮಾರ್ : ನಾವು ಮಾತನಾಡುವುದಕ್ಕೆ ಶುರು ಮಾಡಿದಾಕ್ಷಣವೇ ಅವರು ಮಧ್ಯೆ ಬರುತ್ತಾರೆ.

ಅಧ್ಯಕ್ಷರು: ನಾನು ಬಹಳ ಸ್ಪಷ್ಟವಾಗಿ ಹೇಳಿದ್ದೇನೆ. ಒಬ್ಬರು point of order ಎತ್ತಿದಾಗ ರೂಲಿಂಗ್ ಕೊಟ್ಟಿದ್ದೇನೆ. ರೂಲಿಂಗ್ ಕೊಟ್ಟಮೇಲೂ ಮತ್ತೇ ಪ್ರಶ್ನೆ ಮಾಡುವುದು ನನಗೆ ಗೊತ್ತಿಲ್ಲ. ನೀವು ಎಲ್ಲಾ ಹಿರಿಯ ಸದಸ್ಯರು.ಈಗ ಚರ್ಚೆಗೆ ಅವಕಾಶವಿರುತ್ತದೆ. ಅವರು point of order ಎತ್ತಿದ್ದಾರೆ.

ಶ್ರೀ ಎಸ್. ಸುರೇಶ್ ಕುಮಾರ್ : ಅವರೇನಾದರೂ ನಿಯಮ 60ರ ಅಡಿಯಲ್ಲಿ ಬರಲ್ಲ ಎನ್ನುವುದಿದ್ದರೆ ಕೊಡಿ. ಪ್ರಿಲಿಮಿನರಿ ಸಬ್‌ಮಿಷನ್ ಅವರು ಹೇಳಿದರೂ ಕೂಡ, ನಿಯಮ 60ರ ಅಡಿಯಲ್ಲಿ ಬರುವುದಿಲ್ಲ. ಇದು

adjournment motion ತೆಗೆದುಕೊಳ್ಳುವುದು ಬೇಡ ಎಂದು ಮಾತನಾಡುವುದಿದ್ದರೆ ತಾವು allow ಮಾಡಿ.

ಅಧ್ಯಕ್ಷರು: ತಾವು ದಯವಿಟ್ಟು ತಮ್ಮ ಸ್ಥಾನಕ್ಕೆ ಹೋಗಿ, ಚರ್ಚೆ ಮಾಡೋಣ.

(ಗೊಂದಲ)

ಅಧ್ಯಕ್ಷರು: ನಿಮಿಷ್ಟಕ್ಕೆ ಮಾತನಾಡುವುದಾದರೆ ನಾನು ಏನೂ ಮಾತನಾಡುವುದಿಲ್ಲ. ಬೇಕಾದರೆ ದಾಖಲೆ ತೆಗೆದು ನೋಡಿ.

ಶ್ರೀ ಟಿ ಬಿ ಜಯಚಂದ್ರ: ನಮ್ಮ ನಾಯಕರು ಮಾತನಾಡಿದ ಮೇಲೆ ನಾನು ಮಾತನಾಡಬೇಕೆಂಬುದು ನನ್ನ ಅಪೇಕ್ಷೆ. ತಾವು ರೇವಣ್ಣನವರನ್ನು ಕರೆದಿರಿ. ಆಗ ನನಗೆ ಅನಿವಾರ್ಯವಾಗಿ point of order ಎತ್ತಬೇಕಾಯಿತು. ಅವರು ಏನು ಹೇಳುತ್ತಾರೆಂದರೆ, motion move ಮಾಡುತ್ತಿಲ್ಲ ನಾವು ಸಬ್‌ಮಿಷನ್ ಮಾಡುತ್ತೇವೆ ಎನ್ನುವ ಮಾತನ್ನು ಹೇಳುತ್ತಿದ್ದಾರೆ.

ಅಧ್ಯಕ್ಷರು: ಅದು ಹೇಳಲಿಲ್ಲ. ಬರಿ ಮೋಷನ್ ಮೇಲೆ ಮಾತನಾಡುತ್ತೇವೆಂದರೆ ಮೂರು ಜನಕ್ಕೆ ಅವಕಾಶ ಕೊಡಬಹುದು. ಆದರೆ ನೀವು ಎತ್ತಿದ ಪಾಯಿಂಟ್, ಮತ್ತೆ ದಾಖಲೆ ತೆಗೆಯಬೇಕು. Please, ಈಗ ತಪ್ಪು ಸಂದೇಶ ಹೋಗುವುದು ಬೇಡ. You have raised a point of order. ಎರಡನ್ನು ತೆಗೆದುಕೊಳ್ಳುವುದಕ್ಕೆ ಅವಕಾಶವಿಲ್ಲ. I have given ruling.

SRI T B JAYACHANDRA: No. No. Point of order means, I will tell. Rule 62., clearly says….,

ಅಧ್ಯಕ್ಷರು: ಸರಿ, ನಾನು ರೂಲ್ 62ನ್ನು ನೋಡಿಯೇ ಹೇಳಿದ್ದು.

ಶ್ರೀ ಟಿ ಬಿ ಜಯಚಂದ್ರ: ರೂಲ್ 62 ನಲ್ಲಿ "The right to move the Motion for adjournment of the House for the purpose of discussing a definite matter of urgent public importance shall be subject to the following restrictions, namely:

i) not more than one such motion shall be made at the same sitting:

ii) not more than one matter shall be discussed on the same motion:

iii) the motion shall be restricted to a specific matter of recent occurrence:

iv) the motion shall not raise a question of privilege:"

I have no objection in adding words to the motion already moved.

ಅಧ್ಯಕ್ಷರು: ನೋಡಿ ತಾವು ಹಿರಿಯ ಸದಸ್ಯರು ಇದ್ದೀರಿ. You have raised a point of order. It is on record. ನೋಡಿ, ನಾನು ಹೇಳುವುದನ್ನು ದಯಮಾಡಿ ಸ್ವಲ್ಪ ಕೇಳಿ. You have stated very clearly. In one sitting two motions cannot be taken ಎನ್ನುವುದು ಬಹಳ ಸ್ಪಷ್ಟವಾಗಿ ಹೇಳಿದ್ದೀರಿ. You have raised a point of order and I have given the ruling ಅಷ್ಟೆ.

(ಗೊಂದಲ)

ಅಧ್ಯಕ್ಷರು: ಅದೇ ಮೋಷನ್ ಮೇಲೆ ಆದರೆ ಕೊಡಬಹುದು. No, no it cannot be. ಇಲ್ಲ ಇಲ್ಲ. ನಾನು ತೀರ್ಪು ಕೊಟ್ಟಮೇಲೆ ಚರ್ಚೆಗೆ ಅವಕಾಶ ಕೊಡುತ್ತೇನೆ. ದಯವಿಟ್ಟು ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ ಸಹಕರಿಸಿ.

(ಗೊಂದಲ)

ಅಧ್ಯಕ್ಷರು: ನೋಡಿ ನೀವುಈ ತರಹ allegation ಮಾಡಿದರೆ this is not fair. ಅವರು ಮಾತು ಕೇಳುತ್ತೀರಿ ಎಂದರೆ, what is this? No, no This is very serious. ನೀವು ಇಲ್ಲಿ, can you talk like this? ಇಲ್ಲಿ ನಿಂತು ಕೊಂಡು ಏನು ಬೇಕಾದರೂ ಮಾತನಾಡಬಹುದೇ? ಅವರ ಮಾತು ಕೇಳುತ್ತೀರಿ ಎಂದರೆ, what is this?

(ಗೊಂದಲ)

ಶ್ರೀ ಎಸ್. ಸುರೇಶ್ ಕುಮಾರ್ : ಬಾಲಕೃಷ್ಣರವರೆ, ವೆಲ್‌ನಲ್ಲಿ ನಿಂತುಕೊಂಡು ಮಾತನಾಡಬಾರದು.

(ಗೊಂದಲ)

MR. SPEAKER: What is this? How can he say? ಯಾರೋ ಮಾತು ಕೇಳಿಕೊಂಡು ಮಾತನಾಡುತ್ತರೆಂದು he is making direct allegation againt the chair, ವೆಲ್‌ನಲ್ಲಿ ನಿಂತುಕೊಂಡು.

(ಗೊಂದಲ)

ಶ್ರೀ ಸಿದ್ದರಾಮಯ್ಯ: ನಾನು request ಮಾಡುತ್ತೇನೆ. ಅವರು ಹೇಳಬಾರದು.

ಅಧ್ಯಕ್ಷರು: ಅವರ ಮಾತು ಕೇಳುತ್ತೇವೆಂದರೆ, what is this? ಅದು ವೆಲ್‌ನೊಳಗೆ ನಿಂತು ಕೊಂಡು? No. No. ಎಲ್ಲಾ ಸೀನಿಯರ್ ಮೆಂಬರ್ಸ್ ಇದ್ದಾರೆ. How can they talk? ಈಗ ಕಾನೂನು ಸಚಿವರು interpret ಮಾಡುವುದಕ್ಕೆ ಅವಕಾಶ ಇಲ್ಲವೆಂದರೆ, ಅವರು ಮಾತು ಕೇಳುತ್ತೇನೆ ಎಂದರೆ, what is this? ನನಗೆ ಅರ್ಥವಾಗುತ್ತಿಲ್ಲ.

(ಗೊಂದಲ)

ಶ್ರೀ ಎಂ ಶ್ರೀನಿವಾಸ: ಅದಕ್ಕೆ ಕರ್ನಾಟಕದ ಜನ ಇವರನ್ನು ಮೂಲೆಗೆ ಕೂರಿಸಿರುವುದು.

ಶ್ರೀ ಸಿದ್ದರಾಮಯ್ಯ: ರೂಲ್ 62 ರಲ್ಲಿ "ಒಂದು ಉಪವೇಶನದಲ್ಲಿ ಒಂದಕ್ಕಿಂತ ಹೆಚ್ಚು ನಿಲುವಳಿ ಸೂಚನೆಯನ್ನು ಕೊಡತಕ್ಕದಲ್ಲ. ಆಮೇಲೆ ಒಂದು ನಿಲುವಳಿ ಸೂಚನೆಯಲ್ಲಿ ಒಂದಕ್ಕಿಂತ ಹೆಚ್ಚು ವಿಷಯ ಚರ್ಚಿಸಕೊಡದು. ನಿಲುವಳಿ ಸೂಚನೆಯು ಇತ್ತೀಚೆಗೆ ನಡೆದ ನಿರ್ದಿಷ್ಟ ವಿಷಯಕ್ಕಷ್ಟೆ ಸೀಮಿತವಾಗಿರಬೇಕು." ಈ ಮೂರು ಕಂಡೀಷನ್ಸ್ ಇವೆ, to fulfill the Rule 62. ಅವರು ಏನು ಹೇಳುತ್ತಾರೆಂದರೆ, ನಾವು ಬೇರೆ ವಿಚಾರ ಕೊಟ್ಟಿಲ್ಲ. ನಾವು ಕೂಡ ಲೋಕಾಯುಕ್ತರ ವಿಚಾರಕ್ಕೆ ಸಂಬಂಧಪಟ್ಟಂತೆ ಹೇಳುತ್ತೇವೆ.

ಅಧ್ಯಕ್ಷರು: ಅವರು ಹೇಳಿದ್ದಕ್ಕೆ ನಾನು ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದು.

ಶ್ರೀ ಸಿದ್ದರಾಮಯ್ಯ: ಒಂದು ನಿಮಿಷ. I will leave it to you.

ಶ್ರೀ ಎಂ ಶ್ರೀನಿವಾಸ: ಸಿದ್ದರಾಮಯ್ಯನವರೆ, ನೀವೇನು ಅವರ ಪರವಾಗಿ ವಕಲಾತ್ತು ಹಾಕುತ್ತೀರಿ?

ಶ್ರೀ ಸಿದ್ದರಾಮಯ್ಯ: ಪ್ರಿಲಿಮಿನರಿ ಸಬ್‌ಮಿಷನ್‌ನಲ್ಲಿ ನಾವು ಒಂದೆರಡು ನಿಮಿಷ ಮಾತನಾಡುತ್ತೇವೆ. ನಾವು ಜೊತೆಯಲ್ಲಿ ಕೊಟ್ಟುಬಿಟ್ಟಿದ್ದೇವೆ. ನಮ್ಮದು ಬಂದಿದೆ, ಅದ್ದರಿಂದ ನಮಗೂ ಅವಕಾಶ ಕೊಡಿ ಎಂದು ಕೇಳುತ್ತಿದ್ದಾರೆ.

ಅಧ್ಯಕ್ಷರು: ಈಗ point of order raise ಮಾಡುವವರು ನೀವೆ, ನೀವ್ಯಾಕೆ point of order raise ಮಾಡಿದಿರಿ?

ಶ್ರೀ ಸಿದ್ದರಾಮಯ್ಯ: ದಯಮಾಡಿ, I request, ನೀವೇನು ರೂಲಿಂಗ್ ಕೊಟ್ಟಿದ್ದೀರಿ ಅದನ್ನು ವಾಪಸ್ ತೆಗೆದುಕೊಳ್ಳಬೇಕು. ಆಮೇಲೆ ಅವರಿಗೆ ಒಂದೆರಡು ನಿಮಿಷ ಅವಕಾಶ ಕೊಡಿ.

ಅಧ್ಯಕ್ಷರು: Point of order raise ಮಾಡಿದವರು ನೀವೆ.

ಶ್ರೀ ಟಿ ಬಿ ಜಯಚಂದ್ರ: ಅಧ್ಯಕ್ಷರೆ, they are supporting the Motion. ಒಬ್ಬರೇ ಹೇಳಬೇಕೆಂದೇನೂ ಇಲ್ಲ.

(ಗೊಂದಲ)

ಅಧ್ಯಕ್ಷರು: ಮಿನಿಮಮ್ ಮೂರು ಜನ ಮಾತನಾಡಬಹುದು. Three members can speak.

ಶ್ರೀ ಟಿ ಬಿ ಜಯಚಂದ್ರ: ಮಾತನಾಡಬಾರದು ಎಂದು ಎಲ್ಲಿದೆ?

ಶ್ರೀ ಎಸ್. ಸುರೇಶ್ ಕುಮಾರ್ : "Rule 64. (1) The Speaker, if he gives consent under rule 60 and holds that the matter proposed to be discussed is in order, shall after the questions and before the list of business is entered upon, call the member concerned who shall raise in his place and ask for

leave to move for the adjournment of the house." ಎಂದು ಇದೆ. ನೀವು ಪ್ರಿಲಿಮಿನರಿ ಸಬ್‌ಮಿಷನ್ ಕೂಡ ಎಲ್ಲಾ ಸಿಗ್ನೇಟರಿಸ್ ಮಾಡಿದ್ದೀರಿ, main submission ಕೂಡ ಎಲ್ಲರೂ ಮಾಡಿದ್ದೀರಿ, ಅದರ sanctity ಏನಿದೆ? ಸಿದ್ದರಾಮಯ್ಯನವರು ನಿಯಮ 60 ಅಡಿಯಲ್ಲಿ ತೆಗೆದುಕೊಳ್ಳಬೇಕೆಂದು ಹೇಳಿದ್ದಾರೆ. ಅದನ್ನು ತೆಗೆದುಕೊಂಡಾಗ ಎಲ್ಲರಿಗೂ ಕೂಡ ಅವಕಾಶ ಸಿಕ್ಕೇ ಸಿಗುತ್ತದೆ. ನಿಮ್ಮದೇನಾದರೂ ಬೇರೆ ಮೋಷನ್ ಇದ್ದರೆ ದಯವಿಟ್ಟು ನಿಯಮ 60 ಅಡಿಯಲ್ಲಿ ತೆಗೆದುಕೊಳ್ಳಬೇಡಿ ಎಂದು ಹೇಳಿದರೆ ಅವಕಾಶ ಕೊಡಿ. ಚರ್ಚೆ ಮಾಡುವುದಕ್ಕೆ ಅವಕಾಶ ಕೊಡುತ್ತಾರಲ್ಲವೇ? This is not right. ಸ್ವಾಮಿ, ಅವರಿಗೆ ಕೊಡುವುದು ಬೇರೆ ವಿಚಾರ. ಆದರೆ ಇದು ಹೊಸ ಸಂಪ್ರದಾಯ ಆಗುವುದು ಬೇಡ. ಎರಡು ಮೊಷನ್ಸ್ ಕೊಟ್ಟು, ಎರಡು ಮೋಷನ್ಸ್ ಮೇಲೂ ಪ್ರಿಲಿಮಿನರಿ ಸಬ್‌ಮಿಷನ್‌ಗೆ ಅವಕಾಶ ಕೊಟ್ಟರೆ ಹೇಗೆ?

ಶ್ರೀ ಹೆಚ್ ಸಿ ಬಾಲಕೃಷ್ಣ: ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಿ ಎಂದು ಕೇಳುತ್ತಿದ್ದೇವೆ.

ಅಧ್ಯಕ್ಷರು: ಹಾಗೆ ಕೇಳಲಿಲ್ಲ. He has raised a point of order and I have given the ruling.

ಶ್ರೀ ಸಿದ್ದರಾಮಯ್ಯ: ನಾನು ಮತ್ತೆ ನಿಮ್ಮಲ್ಲಿ ಮನವಿ ಮಾಡುತ್ತಿದ್ದೇನೆ. ಮಾನ್ಯ ಸಂಸದೀಯ ಸಚಿವರು Please read Rule 62. ಅದರಲ್ಲಿ ಏನು ಹೇಳುತ್ತಾರೆಂದರೆ, "Restrictions on right to move motion." ಮೂವ್ ಮಾಡಿದವರೇ ಮಾತನಾಡಬೇಕು, ಬೇರೆ ಯಾರು ಮಾತನಾಡಬಾರದು ಎಂದು ಇದೆಯೆ? consent ಕೊಟ್ಟ ಮೇಲೆ the mover will be called under Rule 64. Rule 62 is restriction, ಯಾರು ಏನು ಮಾತನಾಡಬೇಕು ಎನ್ನುವುದರ ಬಗ್ಗೆ ಇದೆ. ಆದ್ದರಿಂದ ಒಬ್ಬರೇ ಮಾತನಾಡಬೇಕು ಬೇರೆ ಯಾರೂ ಮಾತನಾಡಬಾರದು ಎಂದು ಹೇಳುವ ಆಗಿಲ್ಲ. Signatories ಎಲ್ಲ ಮಾತನಾಡಬಹುದು. The question is, since both the motions are once and the same. . .

ಅಧ್ಯಕ್ಷರು: ನಾನು ಆ ರೀತಿಯಾಗಿ ಹೇಳಿಲ್ಲ.

SRI SIDDARAMAIAH: Both the motions are one and the same…

ಅಧ್ಯಕ್ಷರು: ಅವರು point of order ಅನ್ನು raise ಮಾಡಿದ್ದರಿಂದ, I have no 'alternative.

(ಗೊಂದಲ)

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಸಿದ್ದರಾಮಯ್ಯನವರೆ, ಈಗ ಒಂದು ಕೆಲಸ ಮಾಡೋಣ. If there is a competition between JD(S) and Congress, ಆಯಿತು ಮಾಡಿ.

ಶ್ರೀ ಸಿದ್ದರಾಮಯ್ಯ: ಮಾಡಿ ಎಂದು ಹೇಳುವುದಲ್ಲ. ಅದನ್ನು ತಾವು ಒಪ್ಪಿಕೊಳ್ಳಿ.

ಶ್ರೀ ಎಸ್. ಸುರೇಶ್ ಕುಮಾರ್ : ಇದು ಕೇವಲ ಕಾಂಪಿಟೇಷನ್ ಅಷ್ಟೆ.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ತಮ್ಮ decision ದಯವಿಟ್ಟು withdraw ಮಾಡಿಕೊಂಡು ಚರ್ಚೆ ಮಾಡುವುದಕ್ಕೆ ಅವರಿಗೂ ಸಹ ಅವಕಾಶ ಕೊಡಿ.

ಅಧ್ಯಕ್ಷರು: ಮಾನ್ಯ ಜಯಚಂದ್ರರವರು ಪ್ರಸ್ತಾಪ ಮಾಡಿರುವ Point of order ಅನ್ನು ಮೊದಲು withdraw ಮಾಡಿಕೊಳ್ಳಿ ಎಂದು ಅವರಿಗೆ ತಾವು ಹೇಳಬೇಕು. ಮಾನ್ಯ ಜಯಚಂದ್ರರವರು point of order ಅನ್ನು raise ಮಾಡಿದ್ದಾರೆ. ಇದನ್ನು ಅವರು ಏಕೆ ರೈಸ್ ಮಾಡಿದರು? ಅವರು ರೈಸ್ ಮಾಡಿದ್ದರಿಂದ, I have no alternative but to give ruling. I give ruling on the basis of your submission and whatever written in the book. ಪುಸ್ತಕದಲ್ಲಿರುವುದನ್ನು ಬಿಟ್ಟು ನನ್ನ discretionary power ಅನ್ನು ಉಪಯೋಗ ಮಾಡಿಲ್ಲ, as per what is written in the rules…

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ಅವರಿಗೂ ಕೂಡ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಿ. ಏನು ಆಗುವುದಿಲ್ಲ.

ಶ್ರೀ ಟಿ ಬಿ ಜಯಚಂದ್ರ: ಮಾನ್ಯ ಆಧ್ಯಕ್ಷರೆ, ನಾನು ಒಂದು ವಿಷಯವನ್ನು ಹೇಳುವುದಕ್ಕೆ ಬಯಸುತ್ತೇನೆ.

ಅಧ್ಯಕ್ಷರು: ಇದು ಖಂಡಿತ bad precedent ಆಗುತ್ತದೆ.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ಅವರಿಗೂ ಕೂಡ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಿ, ಏನು ಆಗುವುದಿಲ್ಲ.

ಶ್ರೀ ಟಿ ಬಿ ಜಯಚಂದ್ರ: ಮಾನ್ಯ ಅಧ್ಯಕ್ಷರೆ, ನಾನು ಒಂದು ವಿಷಯವನ್ನು ಹೇಳುವುದಕ್ಕೆ ಬಯಸುತ್ತೇನೆ.

ಅಧ್ಯಕ್ಷರು: ಇದು ಖಂಡಿತ bad precedent ಆಗುತ್ತದೆ.

ಶ್ರೀ ಟಿ ಬಿ ಜಯಚಂದ್ರ: ಮಾನ್ಯ ಅಧ್ಯಕ್ಷರೆ, under Rule 134.......

MR. SPEAKER: That is different. ನನ್ನ ಪ್ರಶ್ನೆ ಏನೆಂದರೆ, ನೀವೇ Point of order ಅನ್ನು raise ಮಾಡಿ ಅದಕ್ಕೆ ರೂಲಿಂಗ್ ಕೊಟ್ಟಮೇಲೆ ಅದನ್ನು withdraw ಮಾಡಿ ಎಂದು ಹೇಳಿದರೆ ಹೇಗೆ?

ಶ್ರೀ ಟಿ ಬಿ ಜಯಚಂದ್ರ: ಹಾಗಾದರೆ ಸಭೆ ಹೇಗೆ ನಡೆಸಬೇಕು? That is also a responsible party. Actually we are helping you, helping the Chair.

ಶ್ರೀ ಆರ್ ಅಶೋಕ್: ಮಾನ್ಯ ಅಧ್ಯಕ್ಷರೆ, ಅವರು ಎರಡು ವಿಧದಲ್ಲಿ ಮಾತನಾಡುತ್ತಿದ್ದಾರೆ. ಇದು ಸರಿಯಲ್ಲ. ಅವರ ಮೊದಲ intention ಏನು ಎಂದರೆ, ಒಂದು ನಿಲುವಳಿ ಸೂಚನೆಯನ್ನು ಅಂಗೀಕಾರ ಮಾಡಬೇಕೆಂದು ಅವರು ಹೇಳಿದ್ದಾರೆ. ಅದನ್ನು ರೆಕಾರ್ಡ್ಸ್‌ನಲ್ಲಿದೆ ತೆಗೆಸಿ ನೋಡಿ. ಸ್ಪಷ್ಟವಾಗಿ ಒಂದು ಅಂಗೀಕಾರ ಮಾಡಿದ ಮೇಲೆ ಈಗ ಅವರಿಗೆ ಏನಾಯಿತೋ ಗೊತ್ತಿಲ್ಲ. ಅವರು ಈ ಕಡೆ ಬಂದ ತಕ್ಷಣ ಬದಲಾವಣೆ ಮಾಡಿಕೊಳ್ಳುತ್ತಿದ್ದಾರೆ. ಇದೊಂದು bad precedent ಆಗುತ್ತದೆ.

SRI T.B.JAYACHANDRA: I am again on appoint of Order.

ಶ್ರೀ ಆರ್ ಅಶೋಕ್: ಈ ರೀತಿ ಮಾಡಿದರೆ ಮತ್ತೆ ಬೇರೆ ಬೇರೆ ವಿಷಯಕ್ಕೆ ಅವಕಾಶ ಮಾಡಿಕೊಟ್ಟಂತಾಗುತ್ತದೆ.

SRI T B JAYACHANDRA: I am again on a point of order. I raise it under Section 134..

SRI B N BACHHE GOWDA: You cannot raise two point of orders on the same issue.

SRI T B JAYACHANDRA: On hundred issues I can raise. At every stage I can raise. A point of order is a weapon to set right the House and its proceedings. Point of Order ಅನ್ನು motionನಲ್ಲಿ ನಾನು ಏತಕ್ಕಾಗಿ raise ಎಂದರೆ..

Mr SPEAKER: Two motions can't be raised at one time ಎಂದು ತಾವೇ ಹೇಳಿರುವಂಥದ್ದು ದಾಖಲೆಯಲ್ಲಿದೆ.

ಶ್ರೀ ಟಿ ಬಿ ಜಯಚಂದ್ರ: ನಾನು ಹೇಳುವುದನ್ನು ದಯಮಾಡಿ ಕೇಳಿ.

ಅಧ್ಯಕ್ಷರು: ಹೇಳಿ.

SRI T B JAYACHANDRA: I am drawing your attention to Rule 134, 'if a regulation, rule, sub-rule, bye-law, etc., is modified in accordance with the amendment passed by the Houses the amended regulation, rule, sub-rule, bye-law, etc., shall be laid on the Table.'

ಅಧ್ಯಕ್ಷರು: ಮಾನ್ಯ ಜಯಚಂದ್ರರವರೆ, ತಾವು ಯಾವುದನ್ನೋ ಓದಿದರೆ ಹೇಗೆ?

SRI T B JAYACHANDRA: You have extraneous powers also.

ಅಧ್ಯಕ್ಷರು: subordinate Legislation ನಲ್ಲಿರುವುದನ್ನು ತಾವು ಹೇಳುತ್ತಿದ್ದೀರಿ. ಯಾವುದನ್ನೋ ಯಾವುದಕ್ಕೋ ಓದಿದರೆ I am very sorry. That amounts to subordinate legislation. ತಾವು ದಯಮಾಡಿ ಅದನ್ನು ನೋಡಿ. ತಾವು ಒಬ್ಬ ಸೀನಿಯರ್ ಸದಸ್ಯರು ಮತ್ತು

ವಕೀಲರಾಗಿರುವಂಥವರು ಈ ರೀತಿಯಾಗಿ ನಮಗೆ misinterpretation ಕೊಟ್ಟರೆ ಹೇಗೆ? That is purely on subordinate legislation. Subordinate legislation ಗೆ ಸಂಬಂಧಪಟ್ಟಿರುವುದನ್ನು ತಂದು ಇಲ್ಲಿ ಓದಿದರೆ ಹೇಗೆ? ದಯಮಾಡಿ ತಾವು ನೋಡಿ.

ಶ್ರೀ ಟಿ ಬಿ ಜಯಚಂದ್ರ: ತಮ್ಮ ಪರಮಾಧಿಕಾರವನ್ನು ..

MR. SPEAKER: That is different.

SRI SIDDARAMAIAH: It is are siduary power. It can be invoked at any point of time.

ಅಧ್ಯಕ್ಷರು: ಮತ್ತೆ ದಾರಿ ತಪ್ಪಿಸುತ್ತಿದ್ದಾರೆ. ಮಾನ್ಯ ವಿರೋಧಪಕ್ಷದ ನಾಯಕರೆ, ನಾನು ಹೇಳುವುದನ್ನು ಕೇಳಿ. ನೀವು ಈ ರೀತಿಯಾಗಿ..

SRI T B JAYACHANDRA: I will withdraw the point of order. Allow them to speak.

ಅಧ್ಯಕ್ಷರು: ನೀವು Rule 134 ನ್ನು withdraw ಮಾಡಿ.

SRI T B JAYACHANDRA: I will withdraw. Allow them to speak.

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಅಧ್ಯಕ್ಷರೆ, wordings ನೋಡಿ, ಅದರ content ನೋಡಿ, ನಿಮ್ಮ ಡಿಮ್ಯಾಂಡ್ ನೋಡಿ ಮತ್ತು ಅವರು ನೀಡಿರುವ ಡಿಮ್ಯಾಂಡ್ ನೋಡಿ. ಎರಡರಲ್ಲಿಯೂ ಕೂಡ ಸಂಪೂರ್ಣವಾಗಿ ವ್ಯತ್ಯಾಸ ಇದೆ. ಎರಡು ಡಮ್ಯಾಂಡ್ ಅನ್ನು ಓದುತ್ತೇನೆ. ಎರಡೂ ಕೂಡ ಸಂಪೂರ್ಣವಾಗಿ ವಿರೋಧ ಇದೆ. ಅಂದರೆ, ಎರಡೂ ಕೂಡ ಬೇರೆ ಬೇರೆ ವಿಚಾರಗಳಿವೆ.

ಶ್ರೀ ಆರ್ ಅಶೋಕ್: ಮಾನ್ಯ ಅಧ್ಯಕ್ಷರೆ, ಎರಡು ಪ್ರತಿಗಳು ನಮ್ಮ ಹತ್ತಿರ ಇದೆ. ಜೆಡಿ(ಎಸ್)ರವರು ಕಾರವಾರದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ.

ಅಧ್ಯಕ್ಷರು: ಆಯಿತು. ಈ ಚರ್ಚೆಯನ್ನು ಮುಕ್ತಾಯ ಮಾಡೋಣ. ಎರಡು ನಿಮಿಷದಲ್ಲಿ ಮಾತನಾಡಿ ಮುಗಿಸಿ.

(ಸದನದ ಬಾವಿಯಲ್ಲಿದ್ದ ಜೆಡಿ(ಎಸ್) ಸದಸ್ಯರು ಈ ಹಂತದಲ್ಲಿ ತಮ್ಮ ಸ್ಥಾನಗಳಿಗೆ ವಾಪಸ್ಸು ತೆರಳಿದರು)

ಶ್ರೀ ಹೆಚ್ ಡಿ ರೇವಣ್ಣ(ಹೊಳೆ ನರಸಿಪುರ): ಮಾನ್ಯ ಸಭಾಧ್ಯಕ್ಷರೆ, ಲೋಕಾಯುಕ್ತರಾದ ಶ್ರೀ ಸಂತೋಷ್ ಹೆಗ್ಡೆರವರ ರಾಜಿನಾಮೆ ವಿಷಯದ ಬಗ್ಗೆ ಮಾನ್ಯ ಸಿದ್ದರಾಮಯ್ಯನವರು ಕೊಟ್ಟಿದ್ದಾರೆ. ಅದೇ ವಿಷಯಕ್ಕೆ ಸಂಬಂಧಪಟ್ಟಂತೆ ನೀವೂ ಕೂಡ ಕೊಟ್ಟಿದ್ದೇವೆ. ನಾನು ಬೆಳಿಗ್ಗೆ 9 ಗಂಟೆಗೆ ಕೊಟ್ಟಿದ್ದೇನೆ. ಅಧಿಕೃತವಾಗಿ ಅವರದ್ದು ವಿರೋಧ ಪಕ್ಷವಾಗಿರುವುದರಿಂದ ಅವರಿಗೆ ಮೊದಲು ಅವಕಾಶ ಕೊಟ್ಟಿದ್ದೀರಿ.

ಅಧ್ಯಕ್ಷರು: ಮಾನ್ಯ ರೇವಣ್ಣರವರೆ, ಮತ್ತೆ ಹಿನ್ನೆಲೆ ಹೇಳುವುದಕ್ಕೆ ಹೋಗಬೇಡಿ. ರೂಲ್ 60ಕ್ಕೆ ಸಂಬಂಧಪಟ್ಟಂತೆ ಮಾತ್ರ ಮಾತನಾಡಿ. ನೀವೇನಾದರು ಮತ್ತೆ ಹಿನ್ನೆಲೆ ಹೇಳುವುದಕ್ಕೆ ಹೋದರೆ ನಾನು allow ಮಾಡುವುದಿಲ್ಲ.

ಶ್ರೀ ಹೆಚ್ ಡಿ ರೇವಣ್ಣ: ಎರಡೂ ಸೇರಿಸಿ ಮಾಡಿದರೆ ನಮ್ಮದೇನೂ ಅಭ್ಯಂತರವಿಲ್ಲ. ಲೋಕಾಯುಕ್ತರ ಬಗ್ಗೆ ಹಿಂದಿನ ಸರ್ಕಾರಗಳು ಏನು ಮಾಡಿತ್ತೆಂಬುದರ ಬಗ್ಗೆ ಮಾನ್ಯ ಕಾನೂನು ಸಚಿವರು ಪ್ರಸ್ತಾಪ ಮಾಡಿದ್ದಾರೆ. ಹಾಗೆಯೇ ಮಾನ್ಯ ರಾಮಕೃಷ್ಣ ಹೆಗಡೆಯವರ ಕಾಲದಲ್ಲಿ ಕೊಟ್ಟಂಥದ್ದನ್ನು ಯಾರು ವಾಪಸ್ಸು ತೆಗೆದುಕೊಂಡರೆಂಬ ಬಗ್ಗೆ ಕೂಡ ಮಾನ್ಯ ಕಾನೂನು ಸಚಿವರು ಹೇಳಿದರು. ಅವರು ಹೇಳಿದ್ದನ್ನು ನಾನು ಒಪ್ಪುತ್ತೇನೆ. ಇದನ್ನು ರೂಲ್ 60ಕ್ಕೆ ಕನ್ವರ್ಟ್ ಮಾಡಬೇಕೆಂದರ ಬಗ್ಗೆ ಏತಕ್ಕೆ ಹೇಳುತ್ತಿದ್ದೇನೆಂದರೆ, ಈ ರಾಜ್ಯದ ಮುಖ್ಯಮಂತ್ರಿಯವರ ಕೈಯಲ್ಲಿ ಅರಣ್ಯ ಇಲಾಖೆ ಮತ್ತು ಗಣಿಗಾರಿಕೆ ಇಲಾಖೆ ಇವೆ. ರಾಜೀನಾಮೆ ಕೊಡುವುದಕ್ಕೆ ಕಾರಣ ಏನೆಂಬುದರ ಬಗ್ಗೆ ಲೋಕಾಯುಕ್ತರು ಏನು ಹೇಳಿದ್ದಾರೆಂದರೆ, 2,500 ಟನ್ ಸಂಗ್ರಹ ಮಾಡಿದಂಥ ಅದಿರು ಕಳ್ಳತನವಾಗಿದೆ ಎಂದು ಸಂಗ್ರಹ ಮಾಡಿದಂಥ ಅಧಿಕಾರಿ ಹೇಳಿದ್ದಾರೆಂಬ ಉದ್ದೇಶದಿಂದ ಸಂಬಂಧಪಟ್ಟ ಅಧಿಕಾರಿಯನ್ನು ಸಸ್ಪೆಂಡ್ ಮಾಡುವುದಕ್ಕೆ ಹೊರಟ್ಟಿದ್ದಾರೆಂದು ಮಾನ್ಯ ಲೋಕಾಯುಕ್ತರು ತಮ್ಮ ಹೇಳಿಕೆಯಲ್ಲಿ ಕ್ಲಿಯರ್ ಆಗಿ ಹೇಳಿದ್ದಾರೆ. 250 ಕೋಟಿ ರೂಪಾಯಿ ಬೆಲೆ ಬಾಳುವ ಅದಿರು ಇವತ್ತಿನ

ದಿವಸ ಅಲ್ಲಿ ನಾಪತ್ತೆಯಾಗಿದೆ. ಲೋಕಾಯುಕ್ತರಿಗೆ ಅಧಿಕಾರ ಕೊಡಬಾರದೆಂದು ನಾವೇನೂ ಹೇಳುತ್ತಿಲ್ಲ. ಮಾನ್ಯ ಕುಮಾರಸ್ವಾಮಿಯವರ ಸರ್ಕಾರದಲ್ಲಿ ಮಾನ್ಯ ಯಡಿಯೂರಪ್ಪನವರು ಉಪ ಮುಖ್ಯಮಂತ್ರಿಯಾಗಿದ್ದರು. ಆ ಸಂದರ್ಭದಲ್ಲಿ ಲೋಕಾಯುಕ್ತರಿಗೆ ಅಧಿಕಾರ ಕೊಡಬೇಕೆಂದು ಮಾನ್ಯ ಕುಮಾರಸ್ವಾಮಿಯವರು ರಾಜ್ಯಪಾಲರಿಗೆ ಕಳುಹಿಸಿಕೊಟ್ಟಿದ್ದರು. ಜನಪ್ರಿಯ ಸರ್ಕಾರ ಬಂದ ಮೇಲೆ ಇದನ್ನು ಮಾಡಿ ಎಂದು ಆ ಸಂದರ್ಭದಲ್ಲಿ ರಾಜ್ಯಪಾಲರಿಗೆ ಕಳುಹಿಸಿದ 8 ದಿವಸಗಳ ನಂತರ ರಾಜ್ಯಪಾಲರು ಈ ರೀತಿಯಾಗಿ ಹೇಳಿ ಸರ್ಕಾರಕ್ಕೆ ವಾಪಸ್ಸು ಕಳುಹಿಸಿಕೊಟ್ಟಿದ್ದರು. ಈ ಸರ್ಕಾರ ಬಂದು ಎರಡು ವರ್ಷ ಅಯಿತು. ಈಗ ಮಾಡಬೇಡಿ ಎಂದು ನಾವೇನು ಹಿಡಿದುಕೊಂಡಿದ್ದೇವೆಯೇ? ಮಾನ್ಯ ರಾಮಕೃಷ್ಣ ಹೆಗಡೆಯವರ ಕಾಲದಲ್ಲಿ ವಾಪಸ್ಸು ತೆಗೆದುಕೊಂಡಿದ್ದರು. ಆದರೆ, ಮಾನ್ಯ ಕುಮಾರಸ್ವಾಮಿಯವರ ಕಾಲದಲ್ಲಿ ಕಳುಹಿಸಿದ ಮೇಲೇ ತಾವೇಕೆ ಮಾಡಲಿಲ್ಲ? ಜನಪ್ರಿಯ ಸರ್ಕಾರ ಬಂದ ಮೇಲೆ ಮಾಡಿ ಎಂದು ರಾಜ್ಯಪಾಲರು ಸೂಚನೆ ಕೊಟ್ಟ ಮೇಲೂ ಕೂಡ ನೀವು ಮಾಡಲಿಲ್ಲವೆಂದರೆ ಅರ್ಥ ಏನು? ಇಲ್ಲಿ ನಾನು ನೇರವಾಗಿ ಆಪಾದನೆ ಮಾಡುತ್ತಿರುವುದು ಏನೆಂದರೆ, ಮಾನ್ಯ ಮುಖ್ಯಮಂತ್ರಿಗಳ ಸಚಿವ ಸಂಪುಟದ ಸಹೋದ್ಯೋಗಿಗಳು 250 ಕೋಟಿ ರೂಪಾಯಿ ಅದಿರು ನಾಪತ್ತೆಯಾಗಿದೆ ಎಂದು ಮುಖ್ಯ ಕಾರ್ಯದರ್ಶಿಯವರಿಗೆ ಕೊಟ್ಟಿರುವ ಪತ್ರವನ್ನು ಸಭೆಯ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. "ದಿನಾಂಕ 8.06.2010 ಪ್ರಜಾವಾಣಿ ಪತ್ರಿಕೆಯಲ್ಲಿ ಬಂದಿರುವ ಪ್ರಕಾರ ಬೇಲೇಕೇರಿ ಬಂದರಿನಲ್ಲಿ ಅರಣ್ಯ ಇಲಾಖೆ ವಶಪಡಿಸಿಕೊಂಡಿದ್ದ ಕಬ್ಬಿಣದ ಅದಿರು ಕಳ್ಳತನವಾಗಿರುವ ಬಗ್ಗೆ ಪ್ರಕರಣ ದಾಖಲೆಯಾಗಿರುತ್ತದೆ. ದಿನಾಂಕ 8.06.2010ರಂದು ಕಾರವಾರ ಜಿಲ್ಲೆಯಲ್ಲಿ ಪ್ರವಾಸದಲ್ಲಿದ್ದಾಗ ಅರಣ್ಯ ಇಲಾಖೆಯ ಅಧಿಕಾರಿಗಳು ವಶಪಡಿಸಿಕೊಂಡಿದ್ದ 200 ಕೋಟಿ ರೂಪಾಯಿ ಮೌಲ್ಯದ 6 ಲಕ್ಷ ಮೆಟ್ರಿನ ಟನ್ ಅದಿರು ನಾಪತ್ತೆಯಾಗಿರುವ ಗಂಭೀರ ಪ್ರಕರಣಕ್ಕೆ ಸಂಬಂಧಿಸಿದಂತೆ ಚರ್ಚಿಸಿ ಮಾಹಿತಿ ಪಡೆಯಲು ಉಪ ಅರಣ್ಯ ಸಂರಕ್ಷಣಾಧಿಕಾರಿ, ಗೋಕುಲ್‌ರವರನ್ನು ಕರೆದಾಗ, ಸದರಿ ಅಧಿಕಾರಿ ಚರ್ಚೆಗೆ ಬಾರದೆ ಉದಾಸೀನ ವ್ಯಕ್ತಪಡಿಸಿ ಕರ್ತವ್ಯಚ್ಯುತಿ ಎಸಗಿರುತ್ತಾರೆ. ಇದರಿಂದ ಮೇಲ್ಕಂಡ ಪ್ರಕರಣದಲ್ಲಿ ಇವರೂ ಸಹ ಭಾಗಿಯಾಗಿರಬಹುದೆಂದು ಸಂಶಯ

ವ್ಯಕ್ತವಾಗುತ್ತದೆ. ಆದ್ದರಿಂದ, ಸದರಿ ಅಧಿಕಾರಿಯ ಮೇಲೆ ವಿಚಾರಣೆಯನ್ನು ಬಾಕಿ ಇಟ್ಟು ಕೂಡಲೇ ಅಮಾನತ್ತಿನಲ್ಲಿಡಲು ಕೋರಿದೆ. ಹಾಗೆಯೇ, ಕೈಗೊಂಡ ಕ್ರಮದ ಬಗ್ಗೆ ಕೂಡಲೇ ವಿವರವಾದ ವರದಿಯನ್ನು ಸಲ್ಲಿಸುವಂತೆ ಸೂಚಿಸಿದೆ ಎಂದು ಜಿ.ಕೃಷ್ಣ ಪಾಲೇಮಾರ್‌ರವರು ಸರ್ಕಾರದ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ, ಬೆಂಗಳೂರು. ಇವರಿಗೆ ಪತ್ರ ಬರೆದಿದ್ದಾರೆ. ಇದನ್ನು ತಮಗೆ ಕಳುಹಿಸಿಕೊಡುತ್ತೇನೆ.

ಶ್ರೀ ಹೆಚ್ ಡಿ ರೇವಣ್ಣ: ನಾನು ಹೇಳುತ್ತೇನೆ. ದಯಮಾಡಿ ಅವಕಾಶ ಕೊಡಿ.

ಅಧ್ಯಕ್ಷರು: ರೂಲ್ 60ರ ಅಡಿಯಲ್ಲಿ ಇದು ಹೇಗೆ ಬರುತ್ತದೆಂಬುದರ ಬಗ್ಗೆ ಮಾತ್ರ ಮಾತನಾಡಿ.

ಶ್ರೀ ಹೆಚ್ ಡಿ ರೇವಣ್ಣ: ಎರಡು ನಿಮಿಷ ಅವಕಾಶ ಕೊಡಿ ನಾನು ಹೇಳುತ್ತೇನೆ. ಈ ರೀತಿಯಾಗಿ ಪತ್ರ ಬರೆದಿರುವ ಮಾನ್ಯ ಸಚಿವರೇನು ಸದರಿ ಜಿಲ್ಲೆಯ ಉಸ್ತುವಾರಿ ಮಂತ್ರಿಗಳಾಗಿದ್ದಾರೆಯೇ? ಅವರು ಮಂಗಳೂರು ಜಿಲ್ಲೆಯ ಉಸ್ತುವಾರಿ ಮಂತ್ರಿಯಾಗಿದ್ದಾರೆ. ಆದರೆ, ಮಾನ್ಯ ಮಂತ್ರಿಗಳು ಇಲ್ಲಿಗೆ ಪ್ರವಾಸ ಬಂದು ಮುಖ್ಯಮಂತ್ರಿಯವರಿಗೆ ಸೇರಿರುವ ಗಣಿ ಇಲಾಖೆಯಲ್ಲಿ ಸುಮಾರು 200 ಕೋಟಿ ರೂಪಾಯಿ ನಾಪತ್ತೆಯಾಗಿದೆ ಎಂದು ನೇರವಾಗಿ ಅವರು ಹೇಳಿದ್ದಾರೆ. ಅಂದರೆ, ಇದು ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ಬಂದು ಇದಾಗಿದೆಯೋ ಅಥವಾ ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ಬಾರದೆ ಆಗಿದೆಯೋ ಎಂಬುದು ಗೊತ್ತಿಲ್ಲ. ಏಕೆಂದರೆ, ಅಲ್ಲಿ 2500 ಕೋಟಿ ರೂಪಾಯಿಯಷ್ಟು ಅದಿರು ಸಂಗ್ರಹವಾಗಿದೆ ಎಂದು ನಾನು ಹೇಳಿಲ್ಲ. ಸಂಬಂಧಪಟ್ಟಂಥ ಅಧಿಕಾರಿ ಹೇಳಿದ್ದಾರೆ. ಈ ಒಂದು ವಿಷಯದ ಹಿನ್ನೆಲೆಯಲ್ಲಿ ಲೋಕಾಯುಕ್ತರು ರಾಜೀನಾಮೆ ಕೊಡುವುದಕ್ಕೆ ಕಾರಣವಾಗಿದೆ ಎಂಬ ಭಾವನೆ ಇದೆ. ಏಕೆಂದರೆ, ಸುಮಾರು 250 ಕೋಟಿ ರೂಪಾಯಿ ಮೌಲ್ಯದ ರಾಜ್ಯದ ಸಂಪತ್ತು ಕಾಣೆಯಾಗಿದೆ. ಮಾನ್ಯ ಮುಖ್ಯಮಂತ್ರಿಯವರ ಕೈಯಲ್ಲಿ ಅರಣ್ಯ ಇಲಾಖೆ ಇರುವುದರಿಂದ ನೇರವಾಗಿ ಮಾನ್ಯ ಮುಖ್ಯಮಂತ್ರಿಯವರೆ ಇದಕ್ಕೆ ಹೊಣೆಗಾರರಾಗ ಬೇಕಾಗುತ್ತದೆ. ಅಲ್ಲಿ ಸುಮಾರು 7 ಚೆಕ್‌ಪೋಸ್ಟ್ಸ್ ಇದ್ದರೂ ಕೂಡ ಅಲ್ಲಿನ ಒಂದು ಚೆಕ್ ಪೋಸ್ಟ್‌ನಲ್ಲಿಯೂ ಕೂಡ ಎಂಟ್ರಿಯಾಗಿಲ್ಲವೆಂದು

ಮಾನ್ಯ ವಿರೋಧ ಪಕ್ಷದ ನಾಯಕರು ಪ್ರಸ್ತಾಪ ಮಾಡಿದ್ದಾರೆ. ಇದಕ್ಕೆ ಕಾರಣ ಏನು ಮತ್ತು ಇದರ ಉದ್ದೇಶವಾದರೂ ಏನೆಂಬುದರ ಬಗ್ಗೆ ಗೊತ್ತಾಗಬೇಕು. ಏಕೆಂದರೆ, ಮಾನ್ಯ ಮುಖ್ಯಮಂತ್ರಿಯವರು ಈ ಬಗ್ಗೆ ಸಂಬಂಧಪಟ್ಟವರಿಗೆ ಏನಾದರು ಡೈರೆಕ್ಷನ್ ಕೊಟ್ಟಿದ್ರಾ ಅಥವಾ ಕೊಟ್ಟಿರಲಿಲ್ಲವೆ ಎಂಬ ಬಗ್ಗೆ ಚರ್ಚೆ ಆಗಬೇಕಾಗಿದೆ. ಆದ್ದರಿಂದ ಇವತ್ತು ಲೋಕಾಯುಕ್ತಕ್ಕೆ ಅಧಿಕಾರವನ್ನು ಕೊಟ್ಟುಬಿಟ್ಟರೆ ಎಲ್ಲಿ ಮುಖ್ಯಮಂತ್ರಿಗಳು ಸಿಕ್ಕಿಹಾಕಿಕೊಳ್ಳುತ್ತಾರೋ? ಎಲ್ಲಿ ಮಂತ್ರಿಗಳು ಸಿಕ್ಕಿಹಾಕಿಕೊಳ್ಳುತ್ತಾರೋ ಎನ್ನುವ ಒಂದು ಕಾರಣಕ್ಕೋಸ್ಕರ ಲೋಕಾಯುಕ್ತಕ್ಕೆ ಇವತ್ತು ಈ ಸರ್ಕಾರ ಅಧಿಕಾರವನ್ನು ಕೊಡುತ್ತಿಲ್ಲ. ಮಾನ್ಯ ಸುರೇಶ್ ಕುಮಾರ್‌ರವರು, ಕಾನೂನು ಮಂತ್ರಿಗಳು ಹೇಳುತ್ತಾರೆ. ಲೋಕಾಯುಕ್ತರ ರಾಜೀನಾಮೆಯನ್ನು ನಾವು ಯಾರು ನಿರೀಕ್ಷಿಸರಲಿಲ್ಲವೆಂದು ಅವರೇ ಹೇಳುತ್ತಾರೆ. ಈ ಕಡೆ ಲೋಕಾಯುಕ್ತರು ಹೋಗಲಿ ಎಂದು ಮುಖ್ಯಮಂತ್ರಿಗಳು ಹೇಳುತ್ತಾರೆ.

ಅಧ್ಯಕ್ಷರು: Detailed discussion ಈಗ ಬೇಡ, ಅದಕ್ಕೆ ಅವಕಾಶವಿಲ್ಲ.

(ಗೊಂದಲ)

ಶ್ರೀ ಹೆಚ್ ಡಿ ರೇವಣ್ಣ: ಮಾನ್ಯ ಅಧ್ಯಕ್ಷರೆ, ನೀವು ರೂಲ್ 60 ನಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಡಬೇಕು. ನೀವು ಬೇಕಾದರೆ ರೂಲ್ 69 ಗೆ convert ಮಾಡಿ. ಇದನ್ನು ಇವತ್ತೇ ತೆಗೆದುಕೊಳ್ಳಬೇಕು. ಇದು ಅತಿ ಗಂಭೀರವಾದದ್ದು 2500 ಕೋಟಿ ರೂ.ಗಳದ್ದು. ಇದು ಅಲ್ಲದೆ ಇನ್ನು ಈ ರಾಜ್ಯದಲ್ಲಿ ಹಲವಾರು ಪ್ರಕರಣಗಳು ಇದೆ, ಅದನ್ನು ಚರ್ಚೆ ಮಾಡಬೇಕಾಗುತ್ತದೆ. ಏಕೆಂದರೆ ಮುಖ್ಯಮಂತ್ರಿಗಳು ಹೇಳಿದರು; ಒಂದು ವಾರ ಇದನ್ನೇ ಚರ್ಚೆ ಮಾಡೋಣ, ಬೇರೆ ಏನೂ ವಿಷಯ ಬೇಡವೇಂದು ಹೇಳಿದ್ದಾರೆ. ಆದ್ದರಿಂದ ನಾವು ಸ್ವಾಗತ ಮಾಡುತ್ತೇವೆ. ದಯಮಾಡಿ ರೂಲ್ 60 ನಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಟಿ ಬಿ ಜಯಚಂದ್ರ: ಮಾನ್ಯ ಅಧ್ಯಕ್ಷರೆ, ತಾವು ರೂಲಿಂಗ್ ಕೊಡುವುದಕ್ಕೆ ಮುಂಚೆ ಒಂದು ವಿಚಾರವನ್ನು ನಾನು ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ತಾವು ಪದೇ ಪದೇ ಕೇಳುತ್ತಿದ್ದೀರಿ ರೂಲ್ 69 ನಲ್ಲಿ ಸೀಮಿತವಾಗಿ suggestion ಕೊಡಿ ಎನ್ನತಕ್ಕಂಥ ಮಾತು. ದಯಮಾಡಿ ಒಂದೇ ಒಂದು ಹೇಳತಕ್ಕಂಥದ್ದು ಎಂದರೆ, ಈ Motion ಅನ್ನು ನಾವು ಏನು move ಮಾಡಿದ್ದೇವೆ ಅದನ್ನು ಯಾವ ಕಾರಣಕ್ಕೋಸ್ಕರ Adjournment Motion ಮೇಲೆ ತೆಗೆದುಕೊಳ್ಳಬೇಕು ಎನ್ನುವುದಕ್ಕೆ ಒಂದು ಕಾರಣವಿದೆ. ಇವತ್ತು ನಮ್ಮ ವಿಧಾನಸಭೆಯಲ್ಲಿ ನಡೆಯುತ್ತಿರುವಂಥ ಚರ್ಚೆಯನ್ನು ಇಡೀ ರಾಜ್ಯದ ಜನರೆಲ್ಲಾ ದೇಶದ ಜನ ಮತ್ತು judiciary ಯವರೂ ಕೂಡ ಇದನ್ನು ವಾಚ್ ಮಾಡತಕ್ಕಂಥ ಒಂದು ಸಂಧರ್ಭ. ಇದಕ್ಕೆ ಕಾರಣವೇನೆಂದರೆ, Supremem Court ನ Justice ಆಗಿರತಕ್ಕಂಥವರು, ಲೋಕಾಯುಕ್ತರಾಗಿ 4 ವರ್ಷ ಕೆಲಸವನ್ನು ಮಾಡಿ ಈಗ ಏಕಾಏಕಿ ಅಸಹಕಾರ ಮನೋಭಾವದಿಂದ. . .

ಅಧ್ಯಕ್ಷರು: ಈಗ ಆ ವಿಚಾರ ಬೇಡ. Whatever he may be. Why should you say?

ಶ್ರೀ ಟಿ ಬಿ ಜಯಚಂದ್ರ: ಅವರ ಇವತ್ತು ರಾಜೀನಾಮೆಯನ್ನು ನೀಡಿದ್ದಾರೆಂದರೆ, ..

ಅಧ್ಯಕ್ಷರು: ಹಾಗಾದರೆ ಇಲ್ಲಿ ಕುಳಿತವರೆಲ್ಲರೂ ಅವರಿಗಿಂತ ಕಡಿಮೆಯೇ? ನಿಮ್ಮನ್ನು ಪ್ರಶ್ನೆ ಮಾಡಬೇಕಾಗುತ್ತದೆ. Can you say like that? No ಅದು ಸರಿ ಅಲ್ಲ. Rules quote ಮಾಡಿ. ಆದರೆ ಅವರು ಅಲ್ಲಿ Judge ಆದವರು, ಇಲ್ಲಿ Judge ಆದವರು ಎಂದು ಹೇಳುವುದು ಬೇಡ ಹಾಗಾದರೆ ಇಲ್ಲಿ ಕುಳಿತಿರುವವರೆಲ್ಲರೂ ಅವರಿಗಿಂತ ಕಡಿಮೆಯೆ?

SRI T B JAYACHANDRA: 'The motion shall be restricted to a specific matter of recent occurrence'.

MR. SPEAKER: Yes.

ಶ್ರೀ ಟಿ.ಬಿ.ಜಯಚಂದ್ರ: ಅದು ಮೊನ್ನೆ ಮೊನ್ನೆ ಆಗಿರತಕ್ಕಂಥದ್ದು.

SRI T B JAYACHANDRA: 'The motion shall not revive discussion on a matter which has been discussed in the same session,' It is a recent occurrence. ಈ occurrence ಏಕೆ important ಎಂದರೆ, ಇಡೀ ದೇಶದ ಯಾವುದೇ ರಾಜ್ಯದಲ್ಲಿಯೂ

MR. SPEAKER: Nobody has disputed. ಈಗ . . .

ಶ್ರೀ ಟಿ.ಬಿ.ಜಯಚಂದ್ರ: Adjournment Motion ರೂಲ್ 69 ನಲ್ಲಿ ತೆಗೆದುಕೊಂಡಾಗ ಹೆಚ್ಚಿನ ಘನತೆ ಬರುತ್ತದೆ. ತಮ್ಮ ಕುರ್ಚಿಗೆ ಮಹತ್ವ ಬರುತ್ತದೆ. ಆ ಪ್ರಕಾರ ರೂಲ್ 60 ನಲ್ಲಿ ತೆಗೆದುಕೊಂಡಾಗ ಹೆಚ್ಚು ಘನತೆ ಬರುತ್ತದೆ ಎನ್ನುವ ದೃಷ್ಟಿಯಿಂದ ನಾವು ಯಾವುದೇ ವಿಷಯವನ್ನು ಚರ್ಚೆ ಮಾಡಬೇಕಾದಾಗ ನಮ್ಮ ರೂಲ್ಸ್ ಬಹಳ important. ಏಕೆಂದರೆ ಇದು proceedings ನಲ್ಲಿ ಹೋಗುತ್ತದೆ. ಯಾವುದೇ ದೇಶ ಮತ್ತು ರಾಜ್ಯದಲ್ಲಿಯೂ ಕೂಡ ಇಂಥದ್ದನ್ನು quote ಮಾಡಬಹುದು. ಕರ್ನಾಟಕದ ವಿಧಾನ ಸಭೆ ಶ್ರೀಮಾನ್ ಬೋಪಯ್ಯನವರು ಸ್ಪೀಕರ್ ಆಗಿದ್ದಾಗ ಇಂತಹ ಒಂದು ವಿಚಾರ ಬಂದಾಗ ಇದಕ್ಕೆ ಅವಕಾಶವನ್ನು ಕೊಟ್ಟಿದ್ದಾರೆ Adjournment Motion ಮೇಲೆ ಎನ್ನತಕ್ಕಂಥ ಒಂದು ಅವಕಾಶವಾಗುತ್ತದೆ. ದಯಮಾಡಿ ಮುಖ್ಯಮಂತ್ರಿಗಳೂ ಕೂಡ ಒಪ್ಪಬೇಕು. ಇದು ಮಹತ್ವವಾಗಿರತಕ್ಕಂಥ ವಿಚಾರ. ಏಕೆಂದರೆ ಇದರಲ್ಲಿ ನಾನಾ ವಿಧವಾದಂಥ ವಿಚಾರಗಳು ಬಂದಿದೆ. ಆ ವಿಚಾರಗಳಿಗೆ ಬೆಳಕನ್ನು ಚೆಲ್ಲಬೇಕಾದಾಗ ನಮ್ಮ proceedings ನಲ್ಲಿ ಹೋಗಬೇಕಾದಾಗ ಇಡೀ ದೇಶದ ಜನರನ್ನು ಮುಟ್ಟ ಬೇಕಾದಾಗ ಮುಖ್ಯಮಂತ್ರಿಗಳ ಸಂದೇಶ ಏನು ಎನ್ನುವುದು ಕೂಡ ಹೋಗಬೇಕಾಗುತ್ತದೆ. ಆ ಕಾರಣಕ್ಕೋಸ್ಕರ ರೂಲ್ 69 ನಲ್ಲಿ ಮಾಡುವುದರಿಂದ ಹೆಚ್ಚಿನ ಘನತೆ ಬರುತ್ತದೆ. ಕರ್ನಾಟಕದ ವಿಧಾನಸಭೆಗೆ ಹೆಚ್ಚಿನ ಮಹತ್ವ ಬರುತ್ತದೆ ಎನ್ನತಕ್ಕಂಥ ಮಾತನ್ನು ಹೇಳಿ ದಯಮಾಡಿ ರೂಲ್ 62 ನಲ್ಲಿ

ಶ್ರೀ ಎಸ್. ಸುರೇಶ್ ಕುಮಾರ್: ನೀವು ರೂಲ್ 69 ಎಂದೇ ಹೇಳುತ್ತಿದ್ದೀರಿ.

ಶ್ರೀ ಟಿ. ಬಿ. ಜಯಚಂದ್ರ: ನೋಡಿ ನೀವು ಆ ರೀತಿ ರೂಢಿ ಮಾಡಿಸಿ ಬಿಟ್ಟಿದ್ದೀರಿ. ನೀವು ರೂಲ್ 62 ನಲ್ಲಿಯೇ ಅವಕಾಶವನ್ನು ಮಾಡಿಕೊಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್: ಮಾನ್ಯ ಅಧ್ಯಕ್ಷರೆ, ಮಾನ್ಯ ಜಯಚಂದ್ರರವರ ಮನಸ್ಸಿನಲ್ಲಿ ಏನಿತ್ತು ಆ ಸುಪ್ತವಾದ ಪ್ರಜ್ಞೆ ಮತ್ತೆ ಮತ್ತೆ ಪ್ರಕಟವಾಗಿದೆ. ರೂಲ್ 69 ನಲ್ಲಿ ಬರಬೇಕೆಂದು ಮತ್ತೆ ಮತ್ತೆ ಒತ್ತಾಯ ಮಾಡಿ ಹೇಳಿದ್ದಾರೆ. ವಿರೋಧ ಪಕ್ಷದ ನಾಯಕರು ಒಂದು ಮಹತ್ವವಾದ ವಿಚಾರವನ್ನು ಇಲ್ಲಿ ಮಂಡಿಸಿದ್ದಾರೆ. ಮಹತ್ವವಾಗಿರುವಂಥದ್ದು ಯಾವ ರೀತಿ ಇರಬೇಕು ಎನ್ನುವುದು ಕೂಡ ಮುಂದೆಯೂ ಇದೆ ಎನ್ನುವುದನ್ನು ಇಲ್ಲಿ ಮಂಡಿಸಿದ್ದಾರೆ. ಮಾನ್ಯ ಅಧ್ಯಕ್ಷರೆ, ಒಂದು ವಿಷಯವನ್ನು ನಿಮ್ಮ ಗಮನಕ್ಕೆ ತರುತ್ತೇನೆ. ಒಂದೇ ವಿಚಾರವಾದ ಮೇಲೆ ಎರಡು Motions ಮೇಲೆ preliminary submission ಮಾಡುವುದು ಇವತ್ತು ಹೊಸ ಸಂಪ್ರದಾಯವನ್ನು ಇವತ್ತು ನಾವು ಹಾಕಿದ್ದೇವೆ. ಇವತ್ತು ಮಾನ್ಯ ಸಿದ್ದರಾಮಯ್ಯನವರು ಸುಮಾರು ಹೊತ್ತು ಮಾತನಾಡಿದರು. ಪ್ರಾಯಶಃ main argument ನಲ್ಲಿ ಹೇಳಬೇಕಾಗಿರುವುದನ್ನು preliminary argumentನಲ್ಲಿ ಹೇಳಿದ್ದಾರೆ. ಆದರೆ ನಿಮ್ಮ ಹತ್ತಿರ ಇನ್ನೂ ಸರಕು ಇರಬಹುದು. ಆದರೆ ಕುಳಿತವರಿಗೆ ಅನಿಸಿದ್ದು ನೀವು ಎಲ್ಲವನ್ನು ಕೂಡ ಹೇಳಿದ್ದೀರಾ? ಇಷ್ಟೆಲ್ಲಾ ಹೇಳಿದ್ದರೂ ಕೂಡ ರೂಲ್ 60 ನಲ್ಲಿ ಏಕೆ ಬರುತ್ತದೆ ಎನ್ನುವುದನ್ನು ಬಿಟ್ಟು ಎಲ್ಲವನ್ನು ಹೇಳಿದರು. ಅದಕ್ಕೆ ಕೂಡ ಉಪ ನಾಯಕರಾದ ಮಾನ್ಯ ಜಯಚಂದ್ರರವರು ಕೂಡ ಹೋದರು. ರೂಲ್ 60 ಅಡಿಯಲ್ಲಿ ಏಕೆ ಬರುತ್ತದೆ ರೂಲ್ 60 ಅಡಿಯಲ್ಲಿ ಏಕೆ ತೆಗೆದುಕೊಳ್ಳಬೇಕೆಂದು ಹೇಳಿದರು. ಅವರು ಅನೇಕ ವಿಚಾರಗಳನ್ನು ಹೇಳುವ ಆ ಒಂದು ಭರದಲ್ಲಿ ಮುಖ್ಯವಾದ ಒಂದು ವಿಚಾರವನ್ನು ಮರೆತ್ತಿದ್ದಾರೆ. ಈಗ ರೂಲ್ 60 ಅಡಿಯಲ್ಲಿ ಬರಬೇಕಾದರೆ ಈ Motion ಒಂದೇ ವಿಷಯಕ್ಕೆ ಸಂಬಂಧಿಸಿದ್ದು ಇರಬೇಕು. ಮಾನ್ಯ ಸಿದ್ದರಾಮಯ್ಯನವರು ಕೊಟ್ಟಿರತಕ್ಕಂಥ ಈ ಒಂದು Motion ನಲ್ಲಿ ಕರ್ನಾಟಕದ ನೈಸರ್ಗಿಕ ಸಂಪತ್ತು ಸಂಪತ್ತು ಸತತವಾಗಿ ಲೂಟಿ ಹೊಡೆಯುತ್ತಿರುವುದರ ಬಗ್ಗೆ ತಮ್ಮ ಆತಂಕವನ್ನು ವ್ಯಕ್ತಪಡಿಸಿ ಅದರ ಬಗ್ಗೆ

ಚರ್ಚೆ ಮಾಡಬೇಕೆಂದು ಹೇಳಿದ್ದಾರೆ. ಬೇಲೇಕೇರಿ ಬಂದರಿನಲ್ಲಿ ಅಕ್ರಮವಾಗಿ permit ಇಲ್ಲದೆ ವಿದೇಶಕ್ಕೆ ಗಣಿ ಮಾಲೀಕರ ಅದಿರು ಹೋಯಿತು ಅದರ ಬಗ್ಗೆ 50 ಲಕ್ಷಮೆಟ್ರಿಕ್ ಟನ್ ರಾಜ್ಯದಲ್ಲಿ ಗಣಿಗಾರಿಕೆ ನಡೆದು 2500 ಕೋಟಿ ರೂ.ಗಳಿಗೂ ಹೆಚ್ಚು ಹಣ ರಾಜ್ಯದ ಭೊಕ್ಕಸಕ್ಕೆ ನಷ್ಟ ಉಂಟಾಗಿದೆ. ಎರಡನೆಯ ವಿಷಯ ನೆರೆಯ ಸಂತ್ರಸ್ತರಿಗೆ ಪರಿಹಾರವನ್ನು ಕೊಡುವುದರಲ್ಲಿ ತಾರತಮ್ಯ ಮತ್ತು ದುರ್ವ್ಯವಹಾರವನ್ನು ಎಸಗಿರುವ ಬಗ್ಗೆಯೂ ಸಹ ಲೋಕಾಯುಕ್ತರು ತನಿಖೆ ನಡೆಸಿ ಸರ್ಕಾರಕ್ಕೆ ವರದಿಯನ್ನು ನೀಡಿದಾಗಿಯೂ ಸಹ ನಿರ್ಲಕ್ಷ್ಯ ತೋರಿದೆ. It is a compound motion. ಒಂದು ನಿಮಿಷ. You just allow me to talk.

ಶ್ರೀ ಸಿದ್ದರಾಮಯ್ಯ: ಏಕೆ ರಾಜೀನಾಮೆಯನ್ನು ಕೊಟ್ಟಿದ್ದಾರೆಂದು ಹೇಳಿದರೆ, ಇವರು ಇದೊಂದು ಮ್ಯಾಟರ್.. ಇದು ಹೇಗಾಗುತ್ತದೆ?

ಅಧ್ಯಕ್ಷರು: ಅವರು ಮಾತನಾಡಲಿ.

(ಗೊಂದಲ)

ಶ್ರೀ ಎಸ್. ಸುರೇಶ್ ಕುಮಾರ್ : ನಾನು ನಿಂತುಕೊಂಡು ಮಾತನಾಡುವುದಕ್ಕೆ ಅವಕಾಶ ಕೊಡದೆ ಇಷ್ಟು ಅಸಹನೆ ಇರಬಾರದು. ನೀವು ಹೇಳಿರುವುದೇ correct ಆಗಿದೆ ಎನ್ನುವುದು ಇರಬಾರದು.

ಶ್ರೀ ಸಿದ್ದರಾಮಯ್ಯ: ನಾನು ಹೇಳಿರುವುದು ನನಗೆ correct. ನೀವು ಹೇಳುವುದು ನಿಮಗೆ correct ಆಗಿದೆ. ನೀವು ಹೇಳುವುದು correct ಇರಬಹುದು. Ultimately, he will decide.

ಶ್ರೀ ಎಸ್. ಸುರೇಶ್ ಕುಮಾರ್ : ಇವರು ಒಂದು compound motion ನ್ನು ಕೊಟ್ಟಿದ್ದಾರೆ. ಮತ್ತೆ ಮತ್ತೆ ಸಿದ್ದರಾಮಯ್ಯನವರು ಹೇಳುತ್ತಿದ್ದರು. ಇದೊಂದು ಸಂವಿಧಾನಾತ್ಮಕವಾದ ಸಂಸ್ಥೆ. ಸಂವಿಧಾನ collapse ಆಗಿ ಹೋಗಿ ಬಿಟ್ಟಿದೆ ಎಂದು ಹೇಳಿದರು. ನಾನು ಅವರ ಗಮನಕ್ಕೆ ತರುತ್ತೇನೆ. It is not a constitutional body. It is a statutory body. ನಮ್ಮ ಒಂದು ಸದನದಲ್ಲಿ ಒಂದು legislation ಮಾಡಿ ಇದರ ಮುಖಾಂತರ ಹೊರಹೊಮ್ಮಿರುವ ಒಂದು

ಸಂಸ್ಥೆ. ಅದಕ್ಕೋಸ್ಕರ ಅದೊಂದು ಸಂವಿಧಾನಾತ್ಮಕ ಎಂದು ಕೊಟ್ಟು ತಮ್ಮ ವಾದಕ್ಕೆ ಪುಷ್ಟಿ ಕೊಡುವಂತದ್ದು ಒಂದು ಒಳ್ಳೆಯ ವಾದದ ಸರಣಿಯಲ್ಲ. ಹೀಗೆ ಇರುವಾಗ ಸರಕಾರಕ್ಕೂ ಕೂಡ ಒಂದು ಆಸೆ ಇದೆ, ಇದರ ಬಗ್ಗೆ ಚರ್ಚೆಯಾಗಬೇಕು. ನಾನು ಆಗಲೇ ಹೇಳಿದಂತೆ ಮೊದಲು ಲೋಕಾಯುಕ್ತ ಯಾರು ತಂದರು? ಅದರ ಸ್ವರೂಪ ಏನಿತ್ತು? ಅದು ಆದ ನಂತರ ಒಂದೇ ವರ್ಷದಲ್ಲಿ ordinance ಮುಖಾಂತರ suo-motu ತಂದು ಅದನ್ನು ಏಕೆ ತೆಗೆದರು? ಅದನ್ನು ಯಾರು ತೆಗೆದರು? ಅದರ ಬಗ್ಗೆಯೂ ಇವತ್ತು ವಿಸ್ತೃತವಾಗಿ ಚರ್ಚೆಯಾಗಬೇಕಾಗಿದೆ. ಯಾರ್‍ಯಾರ ಕಾಲದಲ್ಲಿ ಲೋಕಾಯುಕ್ತರವರು punishment ಕೊಟ್ಟವರನ್ನು ಯಾರ್‍ಯಾರು Chief Secretary ಮಾಡಿದರು? ಯಾರ್‍ಯಾರನ್ನು Finance Secretary ಯನ್ನಾಗಿ ಮಾಡಿದರು? ಯಾವ ಯಾವ ಮುಖ್ಯಮಂತ್ರಿಗಳು Principal Secretary ಗಳನ್ನಾಗಿ ಮಾಡಿದರು? ಅದೂ ಕೂಡ ಇವತ್ತು ಚರ್ಚೆಯಾಗಬೇಕಾಗಿದೆ. ಇವತ್ತು ಯಾರ್‍ಯಾರು ಭಾಷಣಗಳನ್ನು ಮಾಡಿದ್ದಾರೆ. ಅವರೆಲ್ಲರೂ ಕೂಡ ಒಂದೇ ನಾಣ್ಯದ ಎರಡು ಮುಖಗಳು ಎನ್ನುವುದನ್ನು ತೋರಿಸಬೇಕಾಗಿದೆ. ದಯವಿಟ್ಟು ಚರ್ಚೆಗೆ ಅಲೋ ಮಾಡಿ. ವಿಸ್ತೃತವಾದ ಒಂದು ಚರ್ಚೆಯನ್ನು ಮಾಡಲಿ, ಸದನದಲ್ಲಿ ಎಲ್ಲರೂ ಕೂಡ ಚರ್ಚೆಯನ್ನು ಮಾಡಲಿ. ನಾವು ನಮ್ಮ ಮಾನ್ಯ ಮುಖ್ಯಮಂತ್ರಿಗಳೂ ಸಮರ್ಪಕವಾದ ಒಂದು ಉತ್ತರವನ್ನು ಕೊಡುತ್ತೇವೆ. ರೂಲ್ 69 ರಲ್ಲಿ ಇದನ್ನು ಚರ್ಚೆಗೆ ತೆಗೆದುಕೊಳ್ಳಬೇಕು.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ರೂಲ್ 60 ರಲ್ಲಿಯೇ ಏಕೆ ಚರ್ಚೆಗೆ ತೆಗೆದುಕೊಳ್ಳಬೇಕೆಂದರೆ ಬೇರೆ ನಿಯಮದಲ್ಲಿ ಚರ್ಚೆಗೆ ತೆಗೆದುಕೊಂಡರೆ ಇದರ ಮಹತ್ವ ಹೋಗಿ ಬಿಡುತ್ತದೆ. ಇದರ ಗಹನವಾದ ವಿಚಾರ ಏನಿದೆ ಅದರ ಮಹತ್ವ ಹೋಗಿ ಬಿಡುತ್ತದೆ. ಇದನ್ನು ಬೇರೆ ವಿಷಯಗಳಂತೆ treat ಮಾಡುವುದಕ್ಕಾಗುವುದಿಲ್ಲ. ಅದಕ್ಕಾಗಿಯೇ ಎಲ್ಲವನ್ನು ಬದಿಗೊತ್ತಿ ಇದರ ಬಗ್ಗೆ ಚರ್ಚೆ ಮಾಡಬೇಕೆಂದು ಹೇಳಿರುವಂಥದ್ದು. ಎಲ್ಲವನ್ನೂ ರೂಲ್ 69 ಗೆ convert ಮಾಡುವುದಕ್ಕಾಗುವುದಿಲ್ಲ. ಇದನ್ನು ತಾವು ರೂಲ್ 60 ಯಲ್ಲಿಯೇ ಚರ್ಚೆಗೆ ಅವಕಾಶವನ್ನು ಮಾಡಿ ಕೊಡಬೇಕು. ಅದಕ್ಕಾಗಿಯೇ ನಾನು ಸ್ವಲ್ಪ

ಹೆಚ್ಚಿಗೆ ಹೇಳಿರುವಂಥದ್ದು. ನೀವು convince ಆಗಲಿ ಎಂದು ಹೇಳಿರುತ್ತೇನೆ. ಅವರು ಯಾವತ್ತೂ convince ಆಗುವುದಿಲ್ಲ. Government is not goint to be convinced.

ಅಧ್ಯಕ್ಷರು: ಮಾನ್ಯ ವಿರೋಧ ಪಕ್ಷದ ನಾಯಕರಾದ ಸಿದ್ಧರಾಮಯ್ಯನವರು ಹಾಗೂ ಇತರರು ಈ ದಿನ ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮ 60 ಮೇಲೆ ನಿಲುವಳಿ ಸೂಚನೆಯನ್ನು ತಂದಿರುತ್ತಾರೆ. ಸದರಿ ನಿಯಮಾವಳಿಗಳ ನಿಯಮ 62ರ ಮೇರೆಗೆ ಸೂಚನೆಯು ನಿರ್ದಿಷ್ಟವಾದ ವಿಷಯದ ಮೇಲೆ ಸೀಮಿತವಾಗಿರಬೇಕು. ಆದರೆ ಮೇಲಿನ ಸೂಚನೆಗಳನ್ನು ಗಮನಿಸಿದಾಗ ಲೋಕಾಯುಕ್ತರ ರಾಜೀನಾಮೆ, ಗಣಿಗಾರಿಕೆಯಲ್ಲಿ ಅಕ್ರಮ ಮತ್ತು ನೆರೆಸಂತ್ರಸ್ತರಿಗೆ ಪರಿಹಾರದಲ್ಲಿ ತಾರತಮ್ಯ ಬಗ್ಗೆ ಲೋಕಾಯುಕ್ತರಿಂದ ತನಿಖೆ ಇತ್ಯಾದಿಗಳೂ ಸೇರಿದೆ. ಇಲ್ಲಿ ಪ್ರಸ್ತಾಪಿಸಿರುವ ವಿಷಯಗಳು ಆಡಳಿತಾತ್ಮಕ ವಿಷಯಗಳು ಕೂಡ ಆಗಿರುತ್ತವೆ. ಈಗ ಇವುಗಳು ಸದನದ ಮುಂದೆ ಬರಲಿರುವ ಬೇಡಿಕೆಗಳ ಮೇಲಿನ ಚರ್ಚೆಯ ಸಂದರ್ಭದಲ್ಲಿಯೂ ಪ್ರಸ್ತಾಪಿಸಲು ಸಾಕಷ್ಟು ಅವಕಾಶಗಳು ಇವೆ.

2 ಪಿ. ಎಂ.

ಅಲ್ಲದೆ ಮಾನ್ಯ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ಈ ವಿಷಯ ನಿಯಮಾವಳಿ 60ರ ವ್ಯಾಪ್ತಿಗೆ ಬರುವುದಿಲ್ಲವೆಂಬ ಅಂಶವನ್ನು ಸದನದ ಗಮನಕ್ಕೆ ತಂದಿರುತ್ತಾರೆ. ಆದರೂ ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಪ್ರಾರಂಭಿಕವಾಗಿ ಪ್ರಸ್ತಾಪಿಸಲು ಅನುಮತಿಯನ್ನು ನೀಡಿದೆ. ಈಗಾಗಲೇ ತಿಳಿಸಿದಂತೆ ಸೂಚನೆಯನ್ನು ನಿಲುವಳಿ ಸೂಚನೆಯಲ್ಲಿ ಪರಿಗಣಿಸಲು ಸಾಧ್ಯವಾಗದೆ ಇರುವುದರಿಂದ ನಿಲುವಳಿ ಸೂಚನೆಯನ್ನು ತಿರಸ್ಕರಿಸದೆ.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ ತಾಳಿ.

ಅಧ್ಯಕ್ಷರು: ಈ ವಿಷಯದ ಬಗ್ಗೆ ಪ್ರಾಮುಖ್ಯತೆಯನ್ನು ಪರಿಗಣಿಸಿ ನಿಯಮ 69ರ ಅಡಿಯಲ್ಲಿ ಈ ಕೂಡಲೆ ಚರ್ಚಿಸಲು ಅನುಮತಿಯನ್ನು ನೀಡಿರುತ್ತೇನೆ.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ಸ್ವಲ್ಪ ಕೇಳಿ, ತಾವು ರೆಕಾರ್ಡ್‌ನ್ನು ತೆಗೆದುನೋಡಿ. ನೀವು ಆಗಲೇ ಅವಕಾಶ ಕೊಟ್ಟುಬಿಟ್ಟಿದ್ದೀರಿ. ನೀವು ಹಿಂದೆಯೇ 60ರ ಅಡಿಯಲ್ಲಿ ಅವಕಾಶವನ್ನು ಕೊಟ್ಟಿದ್ದೀರಿ. No no, it is alredy on record. ಮಾನ್ಯ ಅಧ್ಯಕ್ಷರೆ, .

ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು): ನೀವು ಏತಕ್ಕಾಗಿ ಪ್ರಯತ್ನವನ್ನು ಪಡುತ್ತಿದ್ದೀರೆಂದು ನೀವೇ ಹೇಳಿ. I think I have convinced you. I think the Chair has been coninced ಎಂದು ನೀವೇ ಹೇಳಿದ್ದೀರಿ.

ಅಧ್ಯಕ್ಷರು: ಈಗ ನಾನು ರೂಲಿಂಗ್‌ನ್ನು ಕೊಟ್ಟಿದ್ದೇನೆ.

ಶ್ರೀ ಎಸ್ ಸುರೇಶ್‌ಕುಮಾರ್: Convince ಮಾಡುವುದಕ್ಕೋಸ್ಕರ ನೀವೇ ..

ಶ್ರೀ ಸಿದ್ದರಾಮಯ್ಯ: ಅವರು ಆಗಲೇ ಹೇಳಿದರು.

ಶ್ರೀ ಎಸ್ ಸುರೇಶ್‌ಕುಮಾರ್: ಇಲ್ಲಾ

ಶ್ರೀ ಸಿದ್ಧಾರಾಮಯ್ಯ: Point of order ಹೇಳಿದಾಗ ಅದನ್ನು ಅವರು ಹೇಳಿಬಿಟ್ಟರು.

ಅಧ್ಯಕ್ಷರು: ಇಲ್ಲಾ, ಸುಮ್ಮನೆ . ಈ ರೀತಿ ..

ಶ್ರೀ ಸಿದ್ದರಾಮಯ್ಯ: ತೆಗೆಯಿರಿ, ಅಲ್ಲಿ ನೋಡಿರಿ.

ಶ್ರೀ ಎಸ್ ಸುರೇಶ್‌ಕುಮಾರ್: ಇಲ್ಲದೆ ಇರುವಂತಹ ಸಾಕ್ಷಿಯನ್ನು ಸೃಷ್ಟಿಸುತ್ತಿದ್ದಾರೆ.

ಶ್ರೀ ಸಿದ್ದರಾಮಯ್ಯ: ತೆಗೆಯಿರಿ, ಇಲ್ಲಿ ನಮ್ಮ ಮುಂದೆ ಇದೆಯಲ್ಲಾ,.

ಶ್ರೀ ಎಸ್ ಸುರೇಶ್‌ಕುಮರ್: ಅಲ್ಲಾ ಸ್ವಾಮಿ, ನಾವು ಎಲ್ಲರೂ ಇಲ್ಲಿಯೇ ಕುಳಿತಿದ್ದೇವಲ್ಲ?

ಶ್ರೀ ಸಿದ್ದರಾಮಯ್ಯ: ನೀವು ಕುಳಿತು ಕೇಳಿಸಿಕೊಳ್ಳದೆ ಹೋದರೆ ನಾನು ಏನು ಮಾಡುವುದಕ್ಕಾಗುತ್ತದೆ? ನೀವು ಕೇಳಿಸಿಕೊಳ್ಳದೆ ಹೋದರೆ ನಾನು ಏನು ಮಾಡುವುದಕ್ಕಾಗುತ್ತದೆ?

ಶ್ರೀ ಎಸ್ ಸುರೇಶ್‌ಕುಮಾರ್: ನೀವು ಹೇಳಿಲ್ಲದೇ ಇರುವುದನ್ನು ಕೇಳಿಸಿಕೊಂಡಿಲ್ಲ ನಾನು.

ಶ್ರೀ ಸಿದ್ದರಾಮಯ್ಯ: ಅಲ್ಲಿ ನೋಡಿ ಇದೆಯಲ್ಲಾ.

ಶ್ರೀ ಎಸ್ ಸುರೇಶ್‌ಕುಮಾರ್: ನೀವು ಹೇಳಿಲ್ಲದಿರುವುದನ್ನು ನಾನು ಕೇಳಿಸಿಕೊಂಡಿಲ್ಲ.

ಶ್ರೀ ಸಿದ್ದರಾಮಯ್ಯ: ಅಂಗೈ ಹುಣ್ಣಿಗೆ ಕನ್ನಡಿಯನ್ನು ಏಕೆ ಹಿಡಿಯಬೇಕು?

ಶ್ರೀ ಎಸ್ ಸುರೇಶ್‌ಕುಮಾರ್: ಮಾನ್ಯ ಸಭಾಧ್ಯಕ್ಷರೆ, ದಯವಿಟ್ಟು 69ರ ಅಡಿಯಲ್ಲಿ ಚರ್ಚೆಯನ್ನು ಪ್ರಾರಂಭ ಮಾಡಿ.

ಅಧ್ಯಕ್ಷರು: ಈಗ ಚರ್ಚೆಯನ್ನು ಪ್ರಾರಂಭ ಮಾಡಿ.

ಶ್ರೀ ಸಿದ್ದರಾಮಯ್ಯ: ಅಲ್ಲಿ ಇದೆ, ಬೇಕಾದರೆ ನೋಡಿ.

ಅಧ್ಯಕ್ಷರು:ಈ ರೀತಿ ನೀವು ನೇರವಾಗಿ ಹೇಳುವುದಾದರೆ I am helpless. ನಾನು ನಿಮಗೆ ಪದೇ ಪದೇ ಬಹುಶಃ ಆಗಾಗ ಹೇಳುತ್ತಿದ್ದೆ. ರೂಲ್ 60ಗೆ ಸಂಬಂಧಪಟ್ಟ ಹಾಗೆ ಅದು ಹೇಗೆ ಬರುತ್ತದೆ ಅದರ ಬಗ್ಗೆ submit ಮಾಡಿ ಎನ್ನುವುದನ್ನು ಮಾತ್ರ ನಾನು ಹೇಳಿದ್ದೇನೆಯೆ ಹೊರತು ನೇರವಾಗಿ ಈ ರೀತಿ ತಾವು ಹೇಳುವುದಿದ್ದರೆ, ಈ never expected.

ಶ್ರೀ ಸಿದ್ದರಾಮಯ್ಯ: ಹಾಗಾದರೆ ನಾವು ರೂಲ್ 60ಯನ್ನು ಏತಕ್ಕಾಗಿ ಇಟ್ಟುಕೊಂಡಿದ್ದೇವೆ?

MR. SPEAKER: That is different.

SRI SIDDARAMAIAH: That is different ಎಂದರೆ, which is…

ಅಧ್ಯಕ್ಷರು: ನೋಡೋಣ.

SRI SIDDARAMAIAH: Which is relevant ಹಾಗಾದರೆ?

MR SPEAKER: As per my. . . .

SRI SIDDARAMAIAH: If it is not relevant, which is relevant ಹಾಗಾದರೆ?

MR SPEAKER: As per my conscience….

ಶ್ರೀ ಸಿದ್ದರಾಮಯ್ಯ: ನಮ್ಮದು ಕೇಳಬೇಕಾಗುತ್ತದೆ ಸ್ವಾಮಿ.

ಅಧ್ಯಕ್ಷರು: ಅದು ನನ್ನ conscience

ಶ್ರೀ ಸಿದ್ದರಾಮಯ್ಯ: ನಾವೆಲ್ಲರೂ ಸೇರಿ ರೂಲ್ ಮಾಡಿಕೊಂಡಿರುವುದು

MR. SPEAKER: What you have submitted I have heard.

SRI SIDDARAMAIAH: No it is not correct…

ಅಧ್ಯಕ್ಷರು: ತಾವು ಹೇಳಿರುವುದೆಲ್ಲವನ್ನು ನಾನು ಕೇಳಿದ್ದೇನೆ.

ಶ್ರೀ ಸಿದ್ದರಾಮಯ್ಯ: ನಿಮ್ಮ ಅಭಿಪ್ರಾಯದಂತೆ ಎಲ್ಲವನ್ನು ಬದಿಗೊತ್ತಿ ಮಾಡುವುದು ಬೇಡ ಎಂದು ಹೇಳಿದಿರಿ. we have agreed.

ಅಧ್ಯಕ್ಷರು:ಈಗ ತಾವು ಏನು ಹೇಳಿದ್ದೀರಿ?

ಶ್ರೀ ಸಿದ್ದರಾಮಯ್ಯ: ರೂಲ್ 60ರ ಅಡಿಯಲ್ಲಿ ತೆಗೆದುಕೊಳ್ಳುವುದಕ್ಕಾಗುವುದಿಲ್ಲವೆಂದು ಅಂದರೆ ಹೇಗೆ?....

ಅಧ್ಯಕ್ಷರು: ತಾವು ಹೇಳಿರುವುದನ್ನು ಕೇಳಿದ್ದೇನೆ. ಈಗ ಚರ್ಚೆಯನ್ನು ಪ್ರಾರಂಭಿಸಬೇಕು. ಮತ್ತೆಮತ್ತೆ ರೂಲಿಂಗ್ ಬಗ್ಗೆ ಚರ್ಚೆಯನ್ನು ಮಾಡುವುದು ಬೇಡ.

ಶ್ರೀ ಎಸ್. ಸುರೇಶ್ ಕುಮಾರ್ : ಈ ರೀತಿ ಮಾತನಾಡುವುದು ಬೇಡ.

ಶ್ರೀ ಸಿದ್ದರಾಮಯ್ಯ: ಇನ್ಯಾರು ಮಾತನಾಡಬೇಕು?

ಶ್ರೀ ಹೆಚ್ ಸಿ ಬಾಲಕೃಷ್ಣ: ಮಾನ್ಯ ಅಧ್ಯಕ್ಷರೆ, ನಾವು ಒಂದೇ ವಿಚಾರವನ್ನು ಕೊಟ್ಟಿದ್ದೇವೆ. ನಮಗೂ ಕೂಡ ಚರ್ಚೆಯನ್ನು ಮಾಡುವುದಕ್ಕೆ ಅವಕಾಶವನ್ನು ಕೊಡಿ.

(ಗೊಂದಲ)

ಶ್ರೀ ಎಸ್ ಸುರೇಶ್‌ಕುಮಾರ್: ತಾವು ರೂಲಿಂಗ್ ಬಗ್ಗೆ ನಡೆದುಕೊಳ್ಳಿ.

ಅಧ್ಯಕ್ಷರು: ನಿಮ್ಮ ಬಗ್ಗೆ ನಾನು ಹೇಳಬೇಕಾಗುತ್ತದೆ.

ಶ್ರೀ ಹೆಚ್ ಸಿ ಬಾಲಕೃಷ್ಣ: ನಾವು ಒಂದೇ ವಿಚಾರವನ್ನು ಕೊಟ್ಟಿರುವುದು.

ಶ್ರೀ ಎಸ್. ಸುರೇಶ್ ಕುಮಾರ್ : ನಿಮ್ಮ tone and tenor ಗೊತ್ತಾಗುವುದಿಲ್ಲವೇ? ಒಂದು ರೂಲಿಂಗ್‌ನ್ನು ಕೊಟ್ಟಮೇಲೆ ಚರ್ಚೆಯನ್ನು ಶುರು ಮಾಡಬೇಕು.

ಅಧ್ಯಕ್ಷರು: ಈಗ ಚರ್ಚೆಯನ್ನು ಪ್ರಾರಂಭ ಮಾಡಿ.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ತಾವು ರೂಲ್ 60 ಅಡಿಯಲ್ಲಿಯೇ ತೆಗೆದುಕೊಳ್ಳಬೇಕು. We are not agreeable.

(ಗೊಂದಲ)

ಅಧ್ಯಕ್ಷರು: ಈಗ ಸದನವನ್ನು ಮಧ್ಯಾಹ್ನ 3.00 ಗಂಟೆಗೆ ಸೇರುವಂತೆ ಮೂಂದೂಡಲಾಗಿದೆ.

(ಮಾನ್ಯ ವಿರೋಧಪಕ್ಷದ ನಾಯಕರು ಮತ್ತು ಸದಸ್ಯರು ಸದನದ ಬಾವಿಗೆ ಬರುತ್ತಿರುವಂತೆಯೇ ಮಾನ್ಯ ಸಭಾಧ್ಯಕ್ಷರು ಸದನವನ್ನು ಮಧ್ಯಾಹ್ನ 3.00 ಗಂಟೆಗೆ ಸೇರುವಂತೆ ಮುಂದೂಡಿದರು)

(ಸದನವು 2 ಗಂಟೆ 3 ನಿಮಿಷಕ್ಕೆ ಮುಕ್ತಾಯವಾಗಿ ಮಧ್ಯಾಹ್ನ 3.00 ಗಂಟೆಗೆ ಸಮಾವೇಶಗೊಳ್ಳಲು ನಿಃಶ್ಚಯಿಸಿತು.)

(ಸದನವು ಪುನಃ ಮಧ್ಯಾಹ್ನ 3 ಗಂಟೆ 24 ನಿಮಿಷಕ್ಕೆ ಆರಂಭಗೊಂಡಿತು. ಮಾನ್ಯ ಸಭಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.)

(ಕಾಂಗ್ರೆಸ್ ಹಾಗೂ ಜೆ.ಡಿ.(ಎಸ್) ಸದಸ್ಯರು ಸದನದ ಬಾವಿಯೊಳಗೆ ಧರಣಿ ಹೂಡಿದ್ದರು.)

ಅಧ್ಯಕ್ಷರು: ಎಲ್ಲಾ ಮಾನ್ಯ ಸದಸ್ಯರಲ್ಲಿ ವಿನಂತಿ, ದಯವಿಟ್ಟು ತಮ್ಮ ಸ್ಥಾನಗಳಿಗೆ ಹೋಗಿ ಸದನವನ್ನು ನಡೆಸಲು ಅವಕಾಶ ಕೊಡಿ. Wellನೊಳಗೆ ನಿಂತು ಸುಮ್ಮನೆ ಇಲ್ಲದ ಆಪಾದನೆ ಮಾಡಬೇಡಿ. ನಿಯಮ 60ರಡಿಯಲ್ಲಿ ತೆಗೆದುಕೊಳ್ಳುತ್ತೇನೆ ಎಂದು ಎಲ್ಲಿ ಹೇಳಿದ್ದೇನೆ? ಆ ರೀತಿ ರೆಕಾರ್ಡ್‌ನಲ್ಲಿ ಇದ್ದರೆ ತೋರಿಸಿ? ನಾನು proceedings ಅನ್ನೂ ತರಿಸಿದ್ದೇನೆ. ಆ ರೀತಿ ಹೇಳಿದ್ದು ಎಲ್ಲೂ ಇಲ್ಲ.

ಶ್ರೀ ಸಿದ್ದರಾಮಯ್ಯ: ನನಗೆ ಗೊತ್ತಿಲ್ಲ. ನಾನು ಕೇಳಿಸಿಕೊಂಡಿದ್ದು ಹಾಗೆ. ಅದು ರೆಕಾರ್ಡ್ ಆಗಿದೆಯೋ ಇಲ್ಲವೋ ಗೊತ್ತಿಲ್ಲ. ನೀವು ಏನು

ಹೇಳಿದ್ದೀರೆಂದರೆ, immediately after I completed my preliminary submission . . ..

ಅಧ್ಯಕ್ಷರು: No, no, ಚರ್ಚೆಗೆ ಅವಕಾಶ ಕೊಡುತ್ತೇನೆ ಎಂದು ಹೇಳಿದ್ದೆ.

ಶ್ರೀ ಸಿದ್ದರಾಮಯ್ಯ: ಹೌದು. What does it mean? What should I understand? ..

ಅಧ್ಯಕ್ಷರು: ಏನು meaning?

ಶ್ರೀ ಸಿದ್ದರಾಮಯ್ಯ: ಇದನ್ನು ನಿಯಮ 69 ಗೆ convert ಮಾಡಿದ್ದೇನೆ ಎಂದು ಹೇಳಿದಿರಾ?

ಅಧ್ಯಕ್ಷರು: ಯಾವುದು? ನೀವು ಮಾಡಿ, ಚರ್ಚೆಗೆ ಅವಕಾಶ ಮಾಡೋಣ.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ಹಾಗಾದರೆ ನಿಯಮ 60 ಇರುವುದು ಏಕೆ? Why rule 60 is there? ನಾನೂ ಎರಡು ವರ್ಷಗಳಿಂದ ನೋಡುತ್ತಿದ್ದೇನೆ. ನಾನು ಇಲ್ಲಿ ಬಂದ ಮೇಲೆ ಒಂದು ದಿನವಾದರೂ ನಿಯಮ 60ರಡಿಯಲ್ಲಿ ಚರ್ಚೆ ಮಾಡಿದ್ದೇವಾ? A matter like this…..

ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ನಾನು 1994 ನೇ ಇಸವಿಯಿಂದಲೂ ನೋಡುತ್ತಿದ್ದೇನೆ. ಒಂದು ದಿನವೂ ಚರ್ಚೆ ಆಗಿಲ್ಲ.

ಶ್ರೀ ಸಿದ್ದರಾಮಯ್ಯ: ಹಿಂದೆ ಚರ್ಚೆ ಆಗಿವೆ.

ಶ್ರೀ ಎಸ್ ಸುರೇಶ್‌ಕುಮಾರ್: ನಿಯಮ 60 ರಡಿಯಲ್ಲಿ ಒಂದೂ ಚರ್ಚೆ ಆಗಿಲ್ಲ.

ಶ್ರೀ ಸಿದ್ದರಾಮಯ್ಯ: Not only in this house ಪಾರ್ಲಿಮೆಂಟ್‌ನಲ್ಲಿ.

ಶ್ರೀ ಎಸ್ ಸುರೇಶ್‌ಕುಮಾರ್: ಪಾರ್ಲಿಮೆಂಟ್‌ನಲ್ಲಿ ಬೇಡ.

ಶ್ರೀ ಸಿದ್ದರಾಮಯ್ಯ: ಅದು ಏಕೆ ಬೇಡ:

ಶ್ರೀ ಎಸ್ ಸುರೇಶ್‌ಕುಮಾರ್: ನಮ್ಮ ಅಸೆಂಬ್ಲಿಯಲ್ಲಿ ನಿಯಮ 60ರಡಿಯಲ್ಲಿ 1994ನೇ ಇಸವಿಯಿಂದ ಒಂದೇ ಒಂದೂ ಚರ್ಚೆ ಆಗಿಲ್ಲ.

ಶ್ರೀ ಸಿದ್ದರಾಮಯ್ಯ: ಕೌಲ್ ಅಂಡ್ ಶಕ್ದರ್ ನಾವು ಇಲ್ಲಿ follow ಮಾಡುವುದಿಲ್ಲವೇ? ಪಾರ್ಲಿಮೆಂಟ್‌ದ್ದು ಬೇಡವೇಂದರೆ ಹೇಗೆ?

ಅಧ್ಯಕ್ಷರು: ನಾನು ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದೇನೆ.

ಶ್ರೀ ಸಿದ್ದರಾಮಯ್ಯ: ಎಷ್ಟು ಗಂಭೀರವಾದ ವಿಷಯವೆಂದರೆ, ಲೋಕಾಯುಕ್ತರು ರಾಜೀನಾಮೆ ಕೊಟ್ಟಿದ್ದಾರೆ. ಸಂವಿಧಾನದ ಬಿಕ್ಕಟ್ಟು ನಿರ್ಮಾಣವಾಗಿದೆ. I am appealing to you, please reconsider your decision, your ruling and please allow the discussion under rule 60.

ಅಧ್ಯಕ್ಷರು: ಈಗ ತಾವು ಏನು ಹೇಳಬೇಕೋ ಅದನ್ನು ಹೇಳಿದ್ದೀರಿ. After considering all the aspects of both the sides, I have given my decision in accordance with conscience and rules prevailing here.

ಶ್ರೀ ಸಿದ್ದರಾಮಯ್ಯ: ಈ ವಿಷಯಕ್ಕೆ ಗಂಭೀರತೆ ಬರಬೇಕಾದರೆ, ಇದಕ್ಕೆ ಗೌರವ ಬರಬೇಕಾದರೆ, ಈ ಸದನಕ್ಕೆ ಗಂಭೀರತೆ ಬರಬೇಕಾದರೆ, ನಿಯಮ 60ರಡಿಯಲ್ಲಿ ಚರ್ಚೆಗೆ ಅವಕಾಶ ಮಾಡಿಕೊಡಬೇಕು. That is my appeal to you.

ಶ್ರೀ ಎಸ್ ಸುರೇಶ್‌ಕುಮಾರ್: ಮಾನ್ಯ ಅಧ್ಯಕ್ಷರೆ, ಸಭೆಯ ಕಲಾಪಕ್ಕೆ ಗಂಭೀರತೆ ಬರಬೇಕೆಂದರೆ, ಸ್ಪೀಕರ್ ರೂಲಿಂಗ್ ಅನ್ನು ದಯವಿಟ್ಟು ಪ್ರಶ್ನೆ ಮಾಡುವುದಕ್ಕೆ ಹೋಗಬೇಡಿ.

ಶ್ರೀ ಸಿದ್ದರಾಮಯ್ಯ: ಇಲ್ಲಿ ಸ್ಪೀಕರ್ ರೂಲಿಂಗ್‌ಗಳು ಬದಲಾವಣೆ ಆಗಿರುವಂಥ ನಿದರ್ಶನಗಳು ಬೇಕಾದಷ್ಟು ಇವೆ.

ಶ್ರೀ ಬಡೆಂಪ್ಪ ಕಾಶೆಂಪೂರ್: ಮಾನ್ಯ ಅಧ್ಯಕ್ಷರೆ, ನಾವು ಮನವೊಲಿಸುತ್ತಿದ್ದೇವೆ. ಪ್ರಶ್ನೆ ಮಾಡುತ್ತಿಲ್ಲ.

ಶ್ರೀ ಟಿ ಬಿ ಜಯಚಂದ್ರ: ಮಾನ್ಯ ಅಧ್ಯಕ್ಷರೆ, ನಿಯಮ 60 ಹಾಗೂ 69 ಎರಡು ನಿಯಮಗಳಡಿಯಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶವಿದೆ. ಆದರೆ ಎರಡೂ ನಿಯಮಗಳಡಿಯಲ್ಲಿಯೂ ಚರ್ಚೆ ಮಾಡುವುದಕ್ಕೆ ಅವಕಾಶವಿದ್ದರೂ

ನಿಯಮ 60 ಏಕೆ? ನಿಯಮ 69 ಏಕೆ? Adjournment motion means…..

ಅಧ್ಯಕ್ಷರು: ಮಾನ್ಯ ಜಯಚಂದ್ರರವರೆ.. .

ಶ್ರೀ ಟಿ.ಬಿ.ಜಯಚಂದ್ರ: ಮಾನ್ಯ ಅಧ್ಯಕ್ಷರೆ, ನಾನು ಹೇಳಿಬಿಡುತ್ತೇನೆ. ನಾನು ಹೇಳುವುದನ್ನು ಕೇಳಿ. I am appealing to you.

ಅಧ್ಯಕ್ಷರು:ನಿಯಮ 60ರಡಿಯಲ್ಲಿ ಏಕೆ ಇದನ್ನು ತೆಗೆದುಕೊಳ್ಳಬೇಕೆಂದು you have submitted. 5-10 ನಿಮಿಷ ಅಲ್ಲದೆ, more than one hour it is submitted.

ಶ್ರೀ ಟಿ.ಬಿ.ಜಯಚಂದ್ರ: ಮಾನ್ಯ ಅಧ್ಯಕ್ಷರೆ, ಸಭೆ ನಡೆಯಬೇಕಾದಾಗ, ಸಭಾನಾಯಕರು ವಿರೋಧ ಪಕ್ಷದ ನಾಯಕರು, ತಮ್ಮ ಸಹಕಾರ ಇಲ್ಲದೇ ಸಭೆ ನಡೆಯುವುದಕ್ಕಾಗುವುದಿಲ್ಲ.

ಅಧ್ಯಕ್ಷರು: ತಮ್ಮ ಸಹಕಾರ ಇದ್ದರೆ ಸಭೆ ನಡೆಯುವುದು.

ಶ್ರೀ ಟಿ ಬಿ ಜಯಚಂದ್ರ: ತಮ್ಮ ಸಹಕಾರವನ್ನು ಏಕೆ ಕೇಳುತ್ತಿದ್ದೇನೆಂದರೆ, ಸಭೆ ನಡೆಯುವಂಥ ಸಂದರ್ಭದಲ್ಲಿ ಯಾವುದೇ formality ಮೇಲೆ ಹೋಗುವುದು ಬೇಡ, technicality ಮೇಲೆ ಹೋಗುವುದು ಬೇಡ.

ಅಧ್ಯಕ್ಷರು: ಹಾಗಾದರೆ ನಿಯಮಗಳೇ ಬೇಡವೆಂದು ಹೇಳುತ್ತೀರಾ?

ಶ್ರೀ ಟಿ ಬಿ ಜಯಚಂದ್ರ: ಅಲ್ಲ. ನಾನು ಮಾತನಾಡುವವರೆಗೆ ಸುಮ್ಮನೆ ಇದ್ದರೆ ಅನುಕೂಲ.

ಅಧ್ಯಕ್ಷರು: ನೀವು ಯಾವುದೇ formalities ಬೇಡವೇಂದರೆ ಏನರ್ಥ?

ಶ್ರೀ ಟಿ ಬಿ ಜಯಚಂದ್ರ: ನಾನು ಹೇಳುವುದನ್ನು ಸ್ವಲ್ಪ ಕೇಳಿ ಸ್ವಾಮಿ. ಅತ್ಯಂತ ಗಹನವಾಗಿರತಕ್ಕಂಥ ವಿಚಾರವೆಂದು ತಾವು ಅರ್ಥ ಮಾಡಿಕೊಳ್ಳಬೇಕು. ತಮಗೆ ಅರ್ಥವಾಗಿದೆ, ತಮಗೂ ಕೂಡ ಗೊತ್ತಿದೆ. ಆ ಪೀಠದಲ್ಲಿ ಕುಳಿತುಕೊಂಡು express ಮಾಡುವುದು ಕಷ್ಟವಿರಬಹುದು. ಇಲ್ಲಿ Adjournment motion ಎಂದರೆ, ಪ್ರಶ್ನೆಗಳನ್ನೂ ಸಹಿತ ಎಲ್ಲ ಮುಂದಕ್ಕೆ ಹಾಕಿ, ಎಲ್ಲವನ್ನೂ ಕೂಡ ಅದ್ಯತೆ ಮೇಲೆ ತೆಗೆದುಕೊಳ್ಳುವುದು ಅದರ ಗಹನತೆಗೆ

ಮೆಚ್ಚುಗೆ ಕೊಟ್ಟಂಥಾಗುತ್ತದೆ. Adjournment motion ಮೇಲೆ ಯಾವುದೇ ಒಂದು ವಿಚಾರ ಚರ್ಚೆಗೆ ಬಂದಾಗ ಆ ಚರ್ಚೆಗೆ ಬಹುಶಃ ತಮ್ಮ ನಿರ್ಣಯವೇನಿದೆ ಅದು ಈ ದೇಶದ ಯಾವ ರಾಜ್ಯದ ಲೈಬ್ರರಿಯಲ್ಲಿ ಬೇಕಾದರೆ ಇಂತಿಂಥ ಸಂದರ್ಭದಲ್ಲಿ ಅಧ್ಯಕ್ಷರು allow ಮಾಡಿದ್ದಾರೆ ಎಂಬುದು ಸಿಗುತ್ತದೆ. ಏಕೆ ಈ ವಿಚಾರ ಇಷ್ಟೊಂದು ಗಹನ ಏಂದರೆ, ಸುಪ್ರೀಂಕೋರ್ಟ್‌ನ ನ್ಯಾಯಾಧೀಶರಾಗಿರತಕ್ಕವರು, ಸರ್ಕಾರದ ಅಂಗವಾಗಿರತಕ್ಕವರು, ಸರ್ಕಾರ ಒಂದು ಕಣ್ಣಾಗಿರತಕ್ಕ ಲೋಕಾಯುಕ್ತರವರೇ ರಾಜೀನಾಮೆ ಕೊಟ್ಟಿರತಕ್ಕದ್ದು. ರಾಜೀನಾಮೆ ಕೊಟ್ಟು ಸರ್ಕಾರದ ವಿರುದ್ಧವಾಗಿ ಹೇಳಿಕೆ ಬರುತ್ತಿರುವುದನ್ನು ನೋಡಿದಾಗ ಇದು crises ಅಲ್ಲವೇ? ಇದನ್ನು ಯಾವ ರೀತಿಯಾಗಿ ಚರ್ಚೆ ಮಾಡಬೇಕು? ನಾನು ಇವತ್ತು ಮಾನ್ಯ ಮುಖ್ಯಮಂತ್ರಿಯವರಲ್ಲಿ ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ, ಇದು ಅತ್ಯಂತ ಗಹನವಾಗಿರತಕ್ಕ ವಿಚಾರ. ಇದು ಕೇವಲ ನಮಗೆ ಅಥವಾ ಅವರಿಗೆ ಎನ್ನತಕ್ಕದ್ದಲ್ಲ. ರಾಜ್ಯದ ಹಿತದೃಷ್ಟಿಯಿಂದ, ನಮ್ಮ ಬೊಕ್ಕಸದ ದೃಷ್ಟಿಯಿಂದ, ಕರ್ನಾಟಕ ರಾಜ್ಯದ ಸಂಪತ್ತಿನ ದೃಷ್ಟಿಯಿಂದ ಆಗಬೇಕಾಗುತ್ತದೆ. ಈ ರೀತಿಯಾಗಿ ನಿರಂತರವಾಗಿ uncontrolled measures ನಲ್ಲಿ ಹೋಗುವುದಾದರೆ ಖಂಡಿತವಾಗಿ ಇನ್ನು ಹತ್ತು ವರ್ಷಗಳಲ್ಲಿ ಕರ್ನಾಟಕ ರಾಜ್ಯದಲ್ಲಿ ಯಾವುದೇ ಮೈನ್ಸ್ ಇರುವುದಿಲ್ಲ. ಕರ್ನಾಟಕದಲ್ಲಿ ಮೈನ್ಸ್ ಎಲ್ಲವೂ ಖಾಲಿ ಆಗುವ ಸಂದರ್ಭ ಇರುವಾಗ natural resource, it is the property of the state. ಅದಕ್ಕೆ ಧಕ್ಕೆ ಬಂದಂಥ ಸಂದರ್ಭದಲ್ಲಿ adjournment motionಗೆ ತಾವು ಏನು ನಿರ್ಣಯವನ್ನು ಕೊಟ್ಟಿದ್ದೀರಿ ಅದರ ಬಗ್ಗೆ ಮರುಪರಿಶೀಲನೆ ಮಾಡಬೇಕು. ಮಾನ್ಯ ಮುಖ್ಯಮಂತ್ರಿಯವರು ಸಹ ದಯಮಾಡಿ ಈ ವಿಚಾರದಲ್ಲಿ ಸಹಕಾರವನ್ನು ಕೊಡಬೇಕು. ಕಾರಣ ಏನೆಂದರೆ, ಮುಖ್ಯಮಂತ್ರಿಗಳು ಆಡಳಿತ ಮಾಡುತ್ತಿರುವ ಸಂದರ್ಭದಲ್ಲಿ ನಿಜವಾಗಿಯೂ ಅವರ ಗಮನಕ್ಕೂ ಬಾರದೆ ಇರುವ ಅನೇಕ ವಿಷಯಗಳಿವೆ. ಅವರಿಗೆ ಗೊತ್ತಿಲ್ಲದಿರುವ ವಿಚಾರಗಳಿದೆ. ಮುಖ್ಯಮಂತ್ರಿಗಳು ಕರ್ನಾಟಕ ರಾಜ್ಯಕ್ಕೆ ಮುಖ್ಯಮಂತ್ರಿಗಳಾಗಿರಬಹುದು. ಆದರೆ ಕೆಲವು ಸೀಮಿತವಾಗಿರುವ ಪ್ರದೇಶಗಳಿಗೆ

ಅವರು ಮುಖ್ಯಮಂತ್ರಿಗಳಾಗಿಲ್ಲ. ಅಲ್ಲಿ ಕಾನೂನುಗಳು ನಡೆಯುವುದಿಲ್ಲ. ಅಂಥ ಪರಿಸ್ಥಿತಿಯನ್ನು ಅವರಿಗೆ ಮನವರಿಕೆ ಮಾಡಿಕೊಡುವುದು ವಿರೋಧ ಪಕ್ಷದವರ ಕೆಲಸ, ನಮ್ಮ ಜವಾಬ್ದಾರಿಕೆ. ಇದರಿಂದ ಖಂಡಿತವಾಗಿ ಸರ್ಕಾರಕ್ಕೂ ಸಹಾಯವಾಗುತ್ತದೆ. ಸರ್ಕಾರಕ್ಕೆ ಯಾವ ರೀತಿಯಾಗಿ ಮಾಹಿತಿ ಬರಬೇಕು? ಅಧಿಕಾರಿಗಳಿಂದ ಬರಬೇಕು, ಇನ್ನೊಂದು ವಿರೋಧ ಪಕ್ಷದವರಿಂದ ಕೊಡತಕ್ಕದ್ದು. ಅಂಕಿ-ಅಂಶದ ಸಮೇತ ಈ ವಿಚಾರಕ್ಕೆ ಗಹನತೆ ಬರಲಿ ಅನ್ನುವ ಕಾರಣಕ್ಕೋಸ್ಕರ. ಮುಖ್ಯಮಂತ್ರಿಗಳನ್ನೂ ಸಹ ಕನ್‌ವಿನ್ಸ್ ಮಾಡಲು ನಾವು ತಯಾರಿದ್ದೇವೆ. ಇವತ್ತು ಲೋಕಾಯುಕ್ತರು ರಾಜೀನಾಮೆ ಕೊಟ್ಟಿರುವ ವಿಶೇಷ ಸಂದರ್ಭದ ಕಾರಣದಿಂದ, ಬಹುಶಃ ಈ ಪರಿಸ್ಥಿತಿ ಯಾವ ರಾಜ್ಯದಲ್ಲೂ ಬಂದಿಲ್ಲ. ಇಲ್ಲಿ ಮಾತ್ರ ಬಂದಿದೆ. ಆ ದೃಷ್ಟಿಯಿಂದ ದಯಮಾಡಿ ಇದನ್ನು ಮರುಪರಿಶೀಲನೆ ಮಾಡಬೇಕು. ಈ ವಿಚಾರಕ್ಕೆ ಹೆಚ್ಚಿನ ಗಹನತೆ ಬರುವ ರೀತಿಯಲ್ಲಿ ಚರ್ಚೆ ಆಗಬೇಕು. ತಾವು ಬೇಕಾದರೆ ಯಾವುದೇ T.V. ಚಾನೆಲ್‌ನಲ್ಲಿ ನೋಡಿ. ಈ ವಿಚಾರದಲ್ಲಿ ಇಡೀ ದೇಶದ ಜನರು ಚರ್ಚೆ ಏನಾಗುತ್ತದೆಯೆಂದು ಕಾಯುತ್ತಿದ್ದಾರೆ. ತಮ್ಮ ಪೀಠಕ್ಕೆ ಹೆಚ್ಚಿನ ಹೆಸರು ಬರಬೇಕಾದರೆ ನೀವು ನಿಯಮ 60ರ ಅಡಿಯಲ್ಲಿ ಚರ್ಚೆಗೆ ಅವಕಾಶ ಮಾಡಿಕೊಡಬೇಕು. ನೀವು ನ್ಯಾಯದ ತಕ್ಕಡಿಯ ಅಡಿಯಲ್ಲಿ ಕುಳಿತಿರತಕ್ಕವರು. ತಮ್ಮ ನಿರ್ಣಯವನ್ನು ಮರುಪರಿಶೀಲನೆ ಮಾಡುವುದರಿಂದ ರಾಜ್ಯಕ್ಕೆ ಲಾಭವಾಗುತ್ತದೆ; ಈ ಸಭೆಗೆ ಗೌರವ ಬರುತ್ತದೆ. ಇವತ್ತು ಮುಖ್ಯಮಂತ್ರಿಯವರನ್ನೂ ನಾನು ಮನವಿ ಮಾಡುತ್ತಿದ್ದೇನೆ. ಇದನ್ನು ಪ್ರತಿಷ್ಠೆ ಆಗಿ ತೆಗೆದುಕೊಳ್ಳತಕ್ಕದ್ದಲ್ಲ. ದಯಮಾಡಿ ಈ ಚರ್ಚೆಗೆ ಸಹಕಾರ ಕೊಡಿ. ಅವಕಾಶ ಕೊಡಿ. ತಮಗೆ ಹೆಚ್ಚಿನ ರೀತಿಯಲ್ಲಿ ಬೆಳಕನ್ನು ಚೆಲ್ಲತಕ್ಕ ಅವಕಾಶವನ್ನು ನಾವು ಮಾಡಿಕೊಡಲು ತಯಾರಿದ್ದೇವೆ. ದಾಖಲಾತಿಗಳನ್ನು ಸಹ ಕೊಡಲು ನಾವು ತಯಾರಾಗಿದ್ದೇವೆ. ನಾವು ಇಷ್ಟೊಂದು open mind ಆಗಿ ಸರ್ಕಾರಕ್ಕೆ ಮಾಹಿತಿಯನ್ನು ಕೊಡಲು ತಯಾರಾಗಿದ್ದಾಗ ಮುಖ್ಯಮಂತ್ರಿಗಳು ಇದನ್ನು ಒಪ್ಪುತ್ತಾರೆಂದು ನಾನು ಭಾವಿಸುತ್ತೇನೆ. ಆದ್ದರಿಂದ ಇದರ ಬಗ್ಗೆ ದಯಮಾಡಿ ಮರುಪರೀಶೀಲನೆ ಮಾಡಿ ಮುಖ್ಯಮಂತ್ರಿಗಳನ್ನು, ನಮ್ಮನ್ನು ಕರೆದು ಎರಡು

ನಿಮಿಷ ಮಾತನಾಡಿ, ಈ ರೀತಿಯಾಗಿ ಸಭೆ ನಡೆಸುವುದು ಸರಿಯಾಗುವುದಿಲ್ಲ. ನಾವು ಯಾವ ಕಾರಣಕ್ಕೋಸ್ಕರ ನಿಯಮ 60ರ ಅಡಿಯಲ್ಲಿ ತೆಗೆದುಕೊಳ್ಳಬೇಕೆಂದು ಪಟ್ಟು ಹಿಡಿದಿದ್ದೇವೆ ಎನ್ನುವುದನ್ನು ತಮಗೆ ಮನವರಿಕೆ ಮಾಡಿಕೊಡುತ್ತೇವೆ. ಇಲ್ಲಿ ಆಗದಿದ್ದರೂ ತಮ್ಮ ಕೊಠಡಿಯಲ್ಲಿ ಆದರೂ ತಮಗೆ ಮನವರಿಕೆ ಮಾಡುವುದಕ್ಕೆ ಪ್ರಯತ್ನ ಪಡುತ್ತೇವೆ. ದಯಮಾಡಿ ಈ ಬಿಕ್ಕಟ್ಟಿನ ಪರಿಸ್ಥಿತಿಯನ್ನು ತಾವು ಬಗೆಹರಿಸಬೇಕು. ಏಕೆಂದರೆ ಸಭೆ ಇನ್ನೂ ಪ್ರಾರಂಭದ ದಿನದಲ್ಲಿದೆ, ನಾವೂ ಇನ್ನೂ 30 ದಿವಸ ಸಭೆ ನಡೆಸಬೇಕಾಗಿರುತ್ತದೆ. ಇಂಥ ಸಮಸ್ಯೆಗಳು ಸಾಕಷ್ಟು ಬರುತ್ತವೆ. ಆದರೆ, ತಾವು ಅಧ್ಯಕ್ಷರಾಗಿರುವ ಸಂದರ್ಭದಲ್ಲಿ ಇಂಥ ಬಿಕ್ಕಟ್ಟನ್ನು ಮೊದಲನೆಯ ದಿವಸವೇ ಬಿಡಿಸುವ ರೀತಿಯಲ್ಲಿ ಔದಾರ್ಯವನ್ನು ತೋರಿಸಬೇಕು ಎನ್ನುವ ಮಾತನ್ನು ಹೇಳಲು ಇಷ್ಟಪಡುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಪ್ರತಿಪಕ್ಷದ ನಾಯಕರು, ಜೆ.ಡಿ.(ಎಸ್) ನ ನಾಯಕರೆಲ್ಲರೂ ಸುಮಾರು ಒಂದೂವರೆ ಗಂಟೆ ತಮ್ಮ ಮನವೊಲಿಸಲು ಎಲ್ಲವನ್ನು ವಿಷದವಾಗಿ ಹೇಳಿದ್ದಾರೆ. ನೀವು ಅದೆಲ್ಲವನ್ನೂ ಆಲಿಸಿದ್ದೀರಿ. ಚರ್ಚೆಗೆ ಅವಕಾಶವನ್ನೂ ಕೊಡಬೇಕು ಎಂಬುದು ಸರ್ಕಾರದ ನಿಲುವು. ಚರ್ಚೆ ಆಗಲಿ. ಅವರು ಏನೇನು ಅಂಶಗಳನ್ನು ಕೊಡುತ್ತಾರೋ ಅವೆಲ್ಲವನ್ನು ಕೊಡಲಿ. ರಾಜ್ಯದ ಜನತೆಗೆ ಏನೇನಾಗಿದೆ ಎಂಬುದು ಗೊತ್ತಾಗಬೇಕು. ನಾವೂ ಕೂಡ ಉತ್ತರ ಕೊಡುತ್ತೇವೆ. ಯಾರೂ ಕೂಡ ಚರ್ಚೆಯಿಂದ ಹಿಂದೇಟು ಹಾಕುತ್ತಿಲ್ಲ. ಈಗಾಗಲೇ ಚರ್ಚೆ ಪ್ರಾರಂಭವಾಗಿದ್ದರೆ ಅನೇಕ ವಿಚಾರಗಳು ಪ್ರಸ್ತಾಪವಾಗುತ್ತಿತ್ತು. ಈಗಾಗಲೇ ಪ್ರಿಲಿಮಿನರಿ ಸಬ್‌ಮಿಷನ್‌ನಲ್ಲಿ ಅನೇಕ ವಿಚಾರಗಳು ಬಂದುಬಿಟ್ಟಿವೆ. ಇನ್ನಷ್ಟು ಅಂಶಗಳು ಹೊರ ಹೊಮ್ಮುತ್ತಿತ್ತು. ಮಾನ್ಯ ಅಧ್ಯಕ್ಷರೆ, ತಮ್ಮ ಗಮನವನ್ನು ಇಲ್ಲಿ ಸೆಳೆಯುತ್ತೇನೆ. ಕೌಲ್ ಅಂಡ್ ಶಕ್ದರ್‌ನಲ್ಲಿ Rulings of the Speaker: it is the right of the Speaker to interpret the constitution and the rules so far as matters in or relating to the house are concerned and no one including the Government can enter into any argument or controversy with

the speaker over such interpretation. ನೀವು interpret ಮಾಡಿ ಇದು ನಿಯಮ 60 ಅಡಿಯಲ್ಲಿ ಬರುವುದಿಲ್ಲ, 69ರ ಅಡಿಯಲ್ಲಿ ಚರ್ಚೆಗೆ ಅವಕಾಶ ಕೊಡುತ್ತೇನೆಂದು ರೂಲಿಂಗ್ ಕೊಟ್ಟಿದ್ದೀರಿ. ನಾನು ತಮ್ಮ ಮೂಲಕ ಪ್ರತಿಪಕ್ಷದ ನಾಯಕರನ್ನು ಮತ್ತು ಎಲ್ಲಾ ಸದಸ್ಯರನ್ನು ಕೇಳಿಕೊಳ್ಳುವುದು, ದಯವಿಟ್ಟು ಅವರವರ ಸ್ಥಾನಕ್ಕೆ ಹೋಗಿ, ಚರ್ಚೆಯನ್ನು ಪ್ರಾರಂಭ ಮಾಡಲಿ. ನಾವು ನಿನ್ನೆಯೇ ಮಾತನಾಡಿದ್ದೇವೆ. ಎಷ್ಟು ದಿವಸ ಸದನವನ್ನು ನಡೆಸಿದ್ದೇವೆ ಎಂಬುದು important ಅಲ್ಲ, ಎಷ್ಟು ದಿವಸ ಅರ್ಥಪೂರ್ಣವಾಗಿ ನಡೆಸುತ್ತೇವೆ ಎಂಬುದು ಮುಖ್ಯ. ಆದ್ದರಿಂದ ದಯವಿಟ್ಟು ತಮ್ಮ ಸ್ಥಾನಗಳಿಗೆ ಹೋಗಿ ಚರ್ಚೆಯನ್ನು ಪ್ರಾರಂಭ ಮಾಡಲಿ ಎಂದು ತಮ್ಮ ಮೂಲಕ ಅವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ನಾನು ನಿಮ್ಮ ರೂಲಿಂಗ್‌ನ್ನು ಪ್ರಶ್ನೆ ಮಾಡುತ್ತಿಲ್ಲ. I am not questioning your ruling. My only appeal is, ನಮ್ಮ ನಡವಳಿಕೆಗಳಲ್ಲಿ ಇಲ್ಲಿ ಸದನದಲ್ಲಿ ಹೇಗೆ ನಡೆಸಬೇಕು ಎನ್ನುವುದರಲ್ಲಿ there is rule 60. I will read out rule 60 and also rule 69. Normally ಅನೇಕ ಸಲ ರೂಲ್ 60 ರಲ್ಲಿ adjournment motion ಬಂದಾಗ rule 69ಗೆ convert ಆಗಿದೆ, ನಾವೂ ಕೂಡ ಒಪ್ಪಿಕೊಂಡಿದ್ದೆವೆ, ಚರ್ಚೆ ಮಾಡಿದ್ದೇವೆ. ನೀವು ಕೂಡ ಅನೇಕ ಸಲ ಅದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ. ಇವತ್ತು ಕೂಡ ಅದನ್ನು ಹೇಳಿದ್ದೀರಿ. ಇದನ್ನು reconsider ಮಾಡಬೇಕೆಂದು ನಾನು ಏಕೆ ನಿಮ್ಮಲ್ಲಿ ಮನವಿ ಮಾಡುತ್ತಿದ್ದೇನೆಂದರೆ this is a very, very important matter. ಇವತ್ತು ಇಡೀ ರಾಜ್ಯದ ಗಮನವನ್ನು ಸೆಳೆದಿದೆ. ನಾವೇ ಮಾಡಿದಂಥ ಕಾನೂನಿನಿಂದ ಆ ಲೋಕಾಯುಕ್ತರವರ ಸ್ಥಾನ ನಿರ್ಮಾಣ ಆಗಿರತಕ್ಕದ್ದು. It is a statutory post, it is not Constitutional ಎಂದು ಇವರೂ ಹೇಳುತ್ತಾರೆ. No law can be passed in the legislature contravening the provisions of the Constitution.If it is passed, it will be unconstitutional.

Whatever law/statute is passed in this House, it is in accordance with the provisions of the Constitution only. You are well aware of it, I don't want to explain. It is a Constitutional post appointed by the Governor, not less than a person the Governor. ರಾಜ್ಯಪಾಲರಿಂದ ನೇಮಕವಾಗಿರತಕ್ಕ ಒಂದು ಸ್ಥಾನ, ಅವರು ಇವತ್ತು ರಾಜೀನಾಮೆಯನ್ನು ಕೊಟ್ಟಿದ್ದಾರೆ. ಅಲ್ಲಿ ಉಪ ಲೋಕಾಯುಕ್ತ ಇಲ್ಲ. ಇವರು ಭ್ರಷ್ಟಾಚಾರದ ವಿರುದ್ಧ ಯುದ್ಧ ಸಾರಿದ್ದರು ಎಂದು, ಅವರು ಇರಬೇಕೆಂದು ಇಡೀ ರಾಜ್ಯದ ಜನತೆ, ಮಾಧ್ಯಮಗಳು, ಸಾರ್ವಜನಿಕರು, ಬುದ್ಧಿಜೀವಿಗಳು, ಬರಹಗಾರರು, ರಾಜಕಾರಣಿಗಳು, ರಾಜಕೀಯ ಪಕ್ಷಗಳು ಎಲ್ಲರೂ ಹೇಳಿದ್ದಾರೆ. ಏಕೆ ಹೇಳಿದ್ದಾರೆ? Because it is such an important institution. ಜೊತೆಗೆ ರಾಜೀನಾಮೆ ಕೊಟ್ಟಿರುವ ಲೋಕಾಯುಕ್ತರು ಬಹಳ honest ಆಗಿದ್ದಂಥವರು, ಜೀವಭಯದ ಲೆಕ್ಕ ಇಲ್ಲದೆಯೆ ಭ್ರಷ್ಟರನ್ನು ಬಲಿ ಹಾಕುವ ಕೆಲಸವನ್ನು ಕಳೆದ ಮೂರ್ನಾಲ್ಕು ವರ್ಷಗಳಿಂದ ಮಾಡಿಕೊಂಡು ಬಂದಿದ್ದಾರೆ. ಇಂಥ ವ್ಯಕ್ತಿ ಮುಂದುವರೆಯಬೇಕು. ಐಎಎಸ್, ಐಪಿಎಸ್ ಅಧಿಕಾರಿಗಳು, ರಾಜಕಾರಣಿಗಳು, ಎಂ.ಎಲ್.ಎ., ಜಿಲ್ಲಾ ಪಂಚಾಯಿತಿಯ ಅಧ್ಯಕ್ಷರು ಇವರು ಯಾರಿಗೂ ಕೂಡ ಮುಲಾಜಿಲ್ಲದೆ ಬಲಿ ಹಾಕುವ ಕೆಲಸವನ್ನು ಮಾಡಿದ್ದಾರೆ. ಹಾಗಾಗಿ ಇವತ್ತು ಇಡೀ ರಾಜ್ಯದ ಜನರಿಗೆ ಇವರು ಇರಬೇಕು ಎನ್ನುವ ಭಾವನೆ ಬಂದಿದೆ. That is the sentiment of the people. ಹಾಗಾಗಿ ಇದಕ್ಕೆ ಹೆಚ್ಚು ಮಹತ್ವ ಬಂದಿದೆ. ಈ ಕಾರಣಕ್ಕೋಸ್ಕರ ನಾವು ಇದನ್ನು dilute ಮಾಡಬಾರದು. ನಿಯಮ 60 ರಲ್ಲಿ ಹೇಳತಕ್ಕ ಪದಗಳು 69 ರಲ್ಲಿ ಇರುವುದಿಲ್ಲ. ಅದಕ್ಕೆ adjournment motion ಎಂದು ಹೇಳುತ್ತಾರೆ, ಇದನ್ನು adjournment motion ಎಂದು ಹೇಳುವುದಿಲ್ಲ. Adjournment motion, why? ಬೇರೆ ಎಲ್ಲವನ್ನು ಬದಿಗಿಟ್ಟು ಇದಕ್ಕೆ importance ಕೊಡಬೇಕು ಎನ್ನುವ ಕಾರಣಕ್ಕೋಸ್ಕರ ನಾವು ನಿಯಮ 60ನ್ನು ಇಟ್ಟುಕೊಂಡಿರುವುದು. ಅಂತಹ rule

ಕೆಳಗಡೆ ನಾವು move ಮಾಡಿರುವಾಗ ಇದನ್ನು ಮಾಮೂಲಿಯಾಗಿ convert ಮಾಡಿ Rule 69ರ ಅಡಿಯಲ್ಲಿ ಚರ್ಚೆ ಮಾಡಲಿಕ್ಕೆ ಅವಕಾಶ ಕೊಟ್ಟಿದ್ದೇನೆ, you speak ಎಂದರೆ ಇದರ ಮಹತ್ವ ಹೊರಟು ಹೋಗುತ್ತದೆ. ನಾನು ಬೇಕಾದರೆ ಆ ರೂಲ್‌ಗಳನ್ನು ಓದಿ ಹೇಳುತ್ತೇನೆ, not that you have not reat it. But anyway ನಾನು ಅದನ್ನು ಓದಿ ಹೇಳುತ್ತೇನೆ. Rule 60ರಲ್ಲಿ ಏನು ಹೇಳುತ್ತಾರೆ? Rule 69ರಲ್ಲಿ ಏನು ಹೇಳುತ್ತಾರೆ? ಎನ್ನುವುದನ್ನು ಓದುತ್ತೇನೆ.

> "60. Subject to the provisions of these rules, a motion for an adjournment of the business of the house for the purpose of disucussing a definite matter of urgent public importance may be made with consent of the Hon'ble Speaker."

ಎಂದು ರೂಲ್ 60 ಹೇಳುತ್ತದೆ. What does Rule 69 say? It says:

> "69. Any member desirous of raising discussion on a matter of urgent public importance may give notice in writing to the Secretary ...."

Secretaryಗೆ notice ಕೊಡಬಹುದು. ಆದರೆ Rule 60ರ ಅಡಿ ಪ್ರಸ್ತಾಪಿಸಲು Assembly ಶುರುವಾಗುವುದಕ್ಕಿಂತ ಮುಂಚಿತವಾಗಿಯೇ notice ಕೊಡಬೇಕೆಂದು ಹೇಳುತ್ತಾರೆ. ಏಕೆಂದರೆ, it is so important. It is not like motion under Rule 69. It's a special one. It is an exceptional once. That's why ಅರ್ಧ ಗಂಟೆ ಮುಂಚಿತವಾಗಿ ಕೊಡಬೇಕೆಂದು ಹೇಳಿದ್ದಾರೆ. Rule 69ರ ಅಡಿ ಪ್ರಸ್ತಾಪಿಸುವುದಕ್ಕೂ ಹೀಗೆಯೇ ಹೇಳಬಹುದಾಗಿತ್ತಲ್ಲವೇ? We need not have two provisions in our business rules. So, that's why ನಾನು ನಿಮಗೆ ಮನವರಿಕೆ ಮಾಡುತ್ತಿರುವುದು ಏನೆಂದರೆ, ನಿಮ್ಮ ಕಾಲದಲ್ಲಿ ಇದು ಆಗಬಾರದು. It is not

like that, ಯಾವಾಗಲೂ ರೂಲ್ 60ರ ಅಡಿಯಲ್ಲಿ allow ಮಾಡಿ ಚರ್ಚೆಯೇ ಆಗಿಲ್ಲವೆಂಬುದಕ್ಕೆ ನಿರ್ದಶನಗಳಿಲ್ಲದಿಲ್ಲ. There are so many instances is this House only. ನನಗೆ ಗೊತ್ತಿರುವ ಮಟ್ಟಿಗೆ ಮಾನ್ಯ ಬಂಗಾರಪ್ಪನವರ ಕಾಲದಲ್ಲಿ, ಕಾಂಗ್ರೆಸ್ ಪಕ್ಷದವರಾಗಿದ್ದ ಮಾನ್ಯ ರಂಗನಾಥ್‌ರವರು, ಈಗಲೂ ಸಹ ಅವರು ಬದುಕಿದ್ದಾರೆ, ಬಜೆಟ್ ಲೀಕ್ ಆಗಿ ಬಿಟ್ಟಿತು ಎಂದು he raised an issue under adjournment motion. ಆಗ adjournment motion ಅನ್ನು ರೂಲ್ 60ರ ಅಡಿಯಲ್ಲಿ ಚರ್ಚಿಸಲು ಅವಕಾಶ ಮಾಡಿಕೊಟ್ಟಿದ್ದಾರೆ. ಮಾನ್ಯ S.M.Krishna ರವರು Speaker ಇರುವಾಗ ಈ ರೀತಿ ಚರ್ಚಿಸಲು ಅವಕಾಶ ಮಾಡಿಕೊಟ್ಟಿದ್ದರು. Phone tapping.. ಮೇಲೂ ಆಗಿದೆ ಅದಕ್ಕಿಂತ ಇದು ಮಹತ್ವದ ವಿಚಾರವಾಗಿದೆ. This is very, very important, It is concerned with the entire 6 crore people, entire governance of the Government. ಈ ತರಹ ಇರುವಾಗ, ಮಾನ್ಯ ಅಧ್ಯಕ್ಷರೆ, ನಾನು ನಿಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ದಯಮಾಡಿ ಅದನ್ನು re-consider ಮಾಡಬೇಕು. Rule 60ರ ಅಡಿಯಲ್ಲಿ ನೀವು ಚರ್ಚೆ ಮಾಡಲಿಕ್ಕೆ ಅವಕಾಶ ಮಾಡಿಕೊಡಬೇಕು. ಇದರ ಗಂಭೀರತೆ, ಇದರ ಗಹನತೆ, ಇದರ ಪ್ರಾಮುಖ್ಯತೆಯನ್ನು ಎತ್ತಿ ಹಿಡಿಯತಕ್ಕ ಕೆಲಸವನ್ನು ನಾವು ಈ ಸದನದಲ್ಲಿ ಮಾಡೋಣ. ಇದರಿಂದ ಕೆಟ್ಟ ಸಂಪ್ರದಾಯವೊಂದನ್ನು ಹಾಕುತ್ತಿದ್ದೇವೆಂದು ಯಾರು ಕೂಡ ಹೇಳುವುದಕ್ಕಾಗುವುದಿಲ್ಲ. It is under rule 60 only. ಇದು ಹೊಸ ಸಂಪ್ರದಾಯವೇನೂ ಇಲ್ಲ. ಅನೇಕ ಸಂಪ್ರದಾಯಗಳು ಮತ್ತು ಮೇಲ್ಪಂಕ್ತಿಗಳಿವೆ. ಇಂತಹ ವಿಚಾರದಲ್ಲಿ ನಾವು Rule 69ರ ಅಡಿಯಲ್ಲಿ ಚರ್ಚೆ ಮಾಡುವುದು ಬೇಡವೆಂಬುದು ನಮ್ಮ ಮನವಿ. ದಯಮಾಡಿ ನಿಮ್ಮ ತೀರ್ಮಾನವನ್ನು ಮರುಪರಿಶೀಲಿಸಬೇಕು. ಸರ್ಕಾರದವರೂ ಕೂಡ prestigeಗೆ ಅಂಟಿಕೊಳ್ಳುವುದಕ್ಕೆ ಹೋಗಬಾರದು.

ಶ್ರೀ ಎಸ್ ಸುರೇಶ್‌ಕುಮಾರ್: ನಾವು ಪ್ರತಿಷ್ಠೆಗೆ ಅಂಟಿಕೊಳ್ಳುತ್ತಿಲ್ಲ.

ಶ್ರೀ ಸಿದ್ದರಾಮಯ್ಯ: ಹಾಗಾದರೆ let's remove Rule 60.

ಶ್ರೀ ಎಸ್. ಸುರೇಶ್‌ಕುಮಾರ್: ನಾವು ಚರ್ಚೆ ನಡೆಯಲಿ ಎಂದು ಹೇಳುತ್ತಿದ್ದೇವೆ. ಚರ್ಚೆಗೆ ready ಇದ್ದೇವೆ.

(ಗೊಂದಲ)

SRI. SIDDARAMAIAH: Why not under Rule 60?

SRI. SIDDARAMAIAH: Because I moved the resolution under Rule 60.

SRI. SURESH KUMAR: Because I have interpreted, it. I have not agreed to it. I moved the motion under Rule 60, not under Rule 69. Therefore it is important. I wanted to say that; there are so many instance in this House.

SRI S. SURESH KUMAR: Sir, Rule 60ರ ಅಡಿಯಲ್ಲಿ ಪ್ರಸ್ತಾವನೆ move ಮಾಡಿದ್ದಾರೆ. Rule 60ರ ಅಡಿಯಲ್ಲೇ ಏಕೆ ಚರ್ಚೆ ನಡೆಯಬೇಕು ಎಂಬುದನ್ನೆಲ್ಲಾ ಹೇಳಿದ್ದಾರೆ. ಅದನ್ನೆಲ್ಲಾ ಕೇಳಿ, ಅದರ ಬಗ್ಗೆ ತಾವೊಂದು ruling ಕೊಟ್ಟಿದ್ದೀರಿ. ದಯವಿಟ್ಟು ನಾನೂ ಕೂಡ ಅವರಂತೆ ಮನವಿ ಮಾಡಿಕೊಳ್ಳುತ್ತೇನೆ. ಇದನ್ನು Rule 69ರ ಅಡಿಯಲ್ಲಿ ಚರ್ಚೆ ಮಾಡಲು ಅವಕಾಶ ಮಾಡಿಕೊಡಬೇಕು. ಅದರ ಮಹತ್ವ, ಅದರ ಗಂಭೀರತ್ವ, ಅದರ ಗಹನತೆ ಎಲ್ಲವೂ ಇದರಿಂದೇನೂ ಹೊರಟು ಹೋಗುವುದಿಲ್ಲ.

ಶ್ರೀ ಸಿದ್ದರಾಮಯ್ಯ: ನಾವು ಮನವಿ ಮಾಡಿದ್ದೇವೆ, Please re-consider your ruling. Please allow the discussion under Rule 60.

(ಗೊಂದಲ)

ಶ್ರೀ ಟಿ. ಬಿ. ಜಯಚಂದ್ರ: Rule 60ಕ್ಕೂ ಮತ್ತು 69ಕ್ಕೂ ವ್ಯತ್ಯಾಸಗಳಿವೆ.

ಶ್ರೀ ಎಸ್. ಸುರೇಶ್‌ಕುಮಾರ್: ನಾನು ನಿಮ್ಮನ್ನು ಅವೆರಡರ ನಡುವಿನ ವ್ಯತ್ಯಾಸ ಹೇಳಿ ಎಂದು ಕೇಳಲಿಲ್ಲ. ನಾನು why not under Rule 69 ಎಂದು

ಕೇಳಿದೆ. ಈಗಾಗಲೇ ಈ ಬಗ್ಗೆ ಮಾನ್ಯ Speaker ರವರು ruling ಕೊಟ್ಟಿರುವುದರಿಂದ ನೀವ್ಯಾಕೆ ಇದರ ಬಗ್ಗೆ ಚರ್ಚೆ ಪ್ರಾರಂಭಿಸಬಾರದು?

ಶ್ರೀ ಟಿ. ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, ಬೇರೆ ಬೇರೆ ವಿಚಾರಗಳ ಸಂದರ್ಭದಲ್ಲಿ ತಾವು ಕೊಟ್ಟಂತಹ ಆದೇಶವನ್ನು ನಾವು ಪಾಲಿಸಿಕೊಂಡು ಹೋಗಿದ್ದೇವೆ. Rule 69ರಲ್ಲಿ ಇಬ್ಬರು ಮಾತ್ರ signatories ಇದ್ದರೆ ಸಾಕು. ಆದರೆ Rule 60 ಅಡಿ ಪ್ರಸ್ತಾಪಿಸಲು 23 ಜನ signatories ಇರಬೇಕು. ತಾವು ಓದಿ ಹೇಳಿದ ಮೇಲೆ 23 ಜನ supportಗೆ ಎದ್ದು ನಿಲ್ಲಬೇಕಾಗುತ್ತದೆ ಇದರ ಅದರ ಮಹತ್ವ ಸಾರ್ವಜನಿಕವಾಗಿ ಇಡೀ ದೇಶದ ಅಥವಾ ರಾಜ್ಯದ ಜನ ಎದುರು ನೋಡುವಂತಹ ವಿಚಾರಗಳನ್ನು adjournment motion ಅಡಿಯಲ್ಲಿ ತೆಗೆದುಕೊಳ್ಳಬೇಕೆಂಬ ಉದ್ದೇಶಕ್ಕೋಸ್ಕರ ಈ provision ಮಾಡಲಾಗಿದೆ. ದಯಮಾಡಿ ತಾವು ಅದನ್ನು ಅರ್ಥ ಮಾಡಿಕೊಳ್ಳಿ. ಲೋಕಾಯುಕ್ತರು ರಾಜೀನಾಮೆ ಕೊಟ್ಟಿರುವುದು is it not important? ಯಾರೋ ಒಬ್ಬ ಅಧಿಕಾರಿ ವಿಷಯದಲ್ಲಿ ಈ ಮಾತನ್ನು ಹೇಳುವುದಕ್ಕಾಗುತ್ತದೆಯೇ? It is a staturoy body. Acutally he is the eye of the Government. ಅಂತಹವರೇ ರಾಜೀನಾಮೆ ಕೊಟ್ಟಿರುವಾಗ, ಸರ್ಕಾರದ ಅಸಹಕಾರ ಇದೆ ಎಂದು ಹೇಳಿರುವಾಗ, ಚರ್ಚೆಗೆ ಅವಕಾಶ ಮಾಡಿಕೊಡದಿದ್ದರೆ ಹೇಗೆ? ಈ ರೀತಿ ಯಾವ ರಾಜ್ಯದಲ್ಲೂ ಕೂಡ ಆಗಿಲ್ಲ. ಆದ್ದರಿಂದ ತಾವು ದಯಮಾಡಿ Rule 60ರ ಅಡಿಯಲ್ಲಿ ಚರ್ಚಿಸಲು ಅವಕಾಶ ಮಾಡಿಕೊಡಬೇಕು. Rule 60ರ ಅಡಿಯಲ್ಲಿ ಚರ್ಚಿಸಲು ಅವಕಾಶ ನೀಡಿದರೆ ಅದಕ್ಕೆ ಹೆಚ್ಚು ಮಹತ್ವ ಬರುತ್ತದೆ ಎಂಬ ಕಾರಣಕ್ಕಾಗಿ ನಾವು ವಾದವನ್ನು ಮಂಡಿಸುತ್ತಿದ್ದೇವೆ. ದಯಮಾಡಿ ತಮ್ಮ ಮನಸ್ಸನ್ನು ಸ್ವಲ್ಪ ಸಡಿಲಿಸಬೇಕು. ತಾವು ಕೊಠಡಿಗೆ ಬೇಕಾದರೆ ಕರೆಯಿರಿ. ವಿರೋಧ ಪಕ್ಷದ ಎಲ್ಲಾ ನಾಯಕರನ್ನು ಕರೆದು ಇದನ್ನು solve ಮಾಡುವುದಕ್ಕೆ ಏನಾದರೂ ಒಂದು ಪ್ರಯತ್ನ ಮಾಡುವುದು ಒಳ್ಳೆಯದು.

ಶ್ರೀ ಕೆ. ಎಂ. ಶಿವಲಿಂಗೇಗೌಡ: ಮಾನ್ಯ ಅಧ್ಯಕ್ಷರೆ, ನಿಯಮ 60ರ ಅಡಿಯಲ್ಲೇ ಏಕೆ ಚರ್ಚೆ ಮಾಡಬೇಕು ಎನ್ನುವ ವಿಚಾರವನ್ನು ಹೇಳುವುದಾದರೆ, ಲೋಕಾಯುಕ್ತರು 6 ಲಕ್ಷ ಟನ್ ಕಬ್ಬಿಣದ ಅದಿರನ್ನು ಬಂದರಿನಲ್ಲಿ ಹಿಡಿದಿಟ್ಟಿರುವಾಗ, ಆ 6 ಲಕ್ಷ ಟನ್ ನಾಪತ್ತೆಯಾಗಿದೆ ಎನ್ನುವುದಾದರೆ, ಅದು ಎಷ್ಟು ದಿವಸಗಳಲ್ಲಿ ನಾಪತ್ತೆಯಾಯಿತು? ಸರ್ಕಾರಕ್ಕೆ ಜೀವ ಇರಲಿಲ್ಲವೇ? ಇಲ್ಲಿ ಸರ್ಕಾರದ ಮೇಲೆ ನೇರವಾದ ಆಪಾದನೆಗೆ ಬಂದಿದೆ. ಆದ್ದರಿಂದ ಇಡೀ ಕರ್ನಾಟಕದ ಜನ

ಅಧ್ಯಕ್ಷರು: ಆ ವಿಚಾರ ಬೇರೆ. ನೀವು adjournment motion ಏಕೆ ತೆಗೆದುಕೊಳ್ಳಬೇಕೆಂಬುದರ ಬಗ್ಗೆ ಮಾತ್ರ ಹೇಳಿ.

ಶ್ರೀ ಕೆ. ಎಂ. ಶಿವಲಿಂಗೇಗೌಡ: Adjournment motion 60ರ ಅಡಿಯಲ್ಲೇ ಏಕೆ ಚರ್ಚೆ ಆಗಬೇಕೆಂದರೆ, ಸರ್ಕಾರದ ಮೇಲೆ ನೇರವಾದ ಆಪಾದನೆ ಇದೆ.

ಅಧ್ಯಕ್ಷರು: 60ರ ಅಡಿಯಲ್ಲಿ ಮೈನ್ಸ್ ಬಗ್ಗೆ ಚರ್ಚೆಗೆ ತೆಗೆದುಕೊಳ್ಳಬೇಕು ಇಲ್ಲವೇ ಅವರ ರಾಜೀನಾಮೆ ಬಗ್ಗೆ ಚರ್ಚೆಗೆ ತೆಗೆದುಕೊಳ್ಳಬೇಕು. Adjournment motion ಮಹತ್ವವನ್ನು ಅರ್ಥಮಾಡಿಕೊಂಡು ಮಾತನಾಡಿ.

ಶ್ರೀ ಕೆ. ಎಂ. ಶಿವಲಿಂಗೇಗೌಡ: 6 ಲಕ್ಷ ಟನ್ ಅನ್ನು ಹೊಡೆದುಕೊಂಡು ಹೋಗಬೇಕಾದರೆ ಎಷ್ಟು ದಿವಸಗಳು ಬೇಕಾಗುತ್ತವೆ? ಮನನೊಂದು ಲೋಕಾಯುಕ್ತರು ರಾಜೀನಾಮೆ ಕೊಟ್ಟಿದ್ದಾರೆ.

ಅಧ್ಯಕ್ಷರು: ನೀವು ರಾಜೀನಾಮೆ ಬಗ್ಗೆ ಮಾತ್ರ ಹೇಳಿ. ಅದನ್ನು ಬಿಟ್ಟು ನೀವು ಮೈನ್ಸ್ ಬಗ್ಗೆ ಏಕೆ ಮಾತನಾಡುತ್ತೀರಿ?

ಶ್ರೀ ಕೆ. ಎಂ. ಶಿವಲಿಂಗೇಗೌಡ: ಮಾನ್ಯ ಸಂಸದೀಯ ಸಚಿವರು ಬೇರೆ ವಿಷಯಗಳು ಇದರಲ್ಲಿ ಅಡಕವಾಗಿದೆ ಎಂದು ಹೇಳುತ್ತಾರೆ. ಎಲ್ಲಾ ವಿಚಾರಗಳು ಲೋಕಾಯುಕ್ತರು ರಾಜೀನಾಮೆ ಕೊಡುವುದರ ಬಗ್ಗೆಯೇ ಇವೆ.

ಅಧ್ಯಕ್ಷರು: ಮಾನ್ಯ ಶಿವಲಿಂಗೇಗೌಡರವರೆ, ರಾಜೀನಾಮೆ ವಿಷಯವನ್ನು ನಿಯಮ 60ರ ಅಡಿಯಲ್ಲೇ ಏಕೆ ಚರ್ಚೆ ಮಾಡಬೇಕು ಎಂಬುದಕ್ಕೆ ನನಗೆ convince ಮಾಡಿ. ಅದನ್ನು ಬಿಟ್ಟು ಮೈನ್ಸ್ ಬಗ್ಗೆ ಮಾತನಾಡಬೇಡಿ.

ಶ್ರೀ ಕೆ. ಎಂ. ಶಿವಲಿಂಗೇಗೌಡ: ಇಡೀ ಮಾಧ್ಯಮಗಳ ಮೂಲಕ ಇವತ್ತು ಇಡೀ ರಾಜ್ಯದ ಜನ ನೋಡುತ್ತಿದ್ದಾರೆ. ಸಂಸದೀಯ ವ್ಯವಸ್ಥೆಯಲ್ಲಿ ಅಧ್ಯಕ್ಷ ಪೀಠದಲ್ಲಿ ಕುಳಿತು ತಾವೇನು ತೀರ್ಮಾನ ಕೊಡುತ್ತೀರಿ ಎಂದು ಸವಿಸ್ತಾರವಾಗಿ ಜನ ನೋಡುತ್ತಿದ್ದಾರೆ. ಈ ವಿಚಾರದಲ್ಲಿ ಪ್ರತಿಷ್ಠೆ ತೆಗೆದುಕೊಳ್ಳುವುದು ಬೇಡ. ದಯಮಾಡಿ ರೂಲ್ 60ಕ್ಕೂ ಮತ್ತು 69ಕ್ಕೂ ವ್ಯತ್ಯಾಸ ಇರುವುದನ್ನು ಗಮನಿಸಬೇಕು. ಸಂಸದೀಯ ವ್ಯವಸ್ಥೆಯಲ್ಲಿ ಮತ್ತು ಕಾನೂನಿನ ಚೌಕಟ್ಟಿನಲ್ಲಿ 60ಕ್ಕೂ ಮತ್ತು 69ಕ್ಕೂ ವ್ಯತ್ಯಾಸಗಳಿವೆ. ಆದ್ದರಿಂದ ದಯಮಾಡಿ ರೂಲ್ 60ರ ಅಡಿಯಲ್ಲಿ ಚರ್ಚೆಗೆ ಅವಕಾಶ ಮಾಡಿಕೊಡಿ. ಈ ರಾಜ್ಯದ ಜನತೆಯ ಆಶಯವನ್ನು ಮತ್ತು ಈ ರಾಜ್ಯದ ಸಂಸದೀಯ ವ್ಯವಸ್ಥೆಯನ್ನು ದಯಮಾಡಿ ಮಾನ್ಯ ಸಭಾಧ್ಯಕ್ಷರು ಎತ್ತಿ ಹಿಡಿಯಬೇಕು. ಇಂತಹ ಸಂದರ್ಭದಲ್ಲಿ ಎತ್ತಿ ಹಿಡಿಯದೇ ಹೋದರೆ ಹೇಗೆ? ಲೋಕಾಯುಕ್ತರು ರಾಜೀನಾಮೆ ಕೊಟ್ಟಿರುವ ಬಗ್ಗೆ ಈ ರಾಜ್ಯದ ಮಕ್ಕಳು-ಮರಿಗಳು ಆಡಿಕೊಳ್ಳುತ್ತಿವೆ. ಲೋಕಾಯುಕ್ತ ಈ ಸದನವೇ ಮಾಡಿದಂತಹ ಒಂದು ಸಂಸ್ಥೆ. ಭ್ರಷ್ಟಾಚಾರ ನಿರ್ಮೂಲನಕ್ಕಾಗಿ ಜಾರಿ ತಂದಂತಹ ಸಂಸ್ಥೆಯ ಮುಖ್ಯಸ್ಥರು ಇವತ್ತು ರಾಜೀನಾಮೆ ಕೊಟ್ಟಿದ್ದಾರೆ. 'ನಾನು ಅಸಹಾಯಕ, ಇವತ್ತು ಸರ್ಕಾರ ನಮ್ಮ ಜೊತೆಯಲ್ಲಿ ಸ್ಪಂದಿಸುತ್ತಿಲ್ಲ, ಭ್ರಷ್ಟಚಾರಕ್ಕೆ ಇವತ್ತು ಉತ್ತೇಜನವನ್ನು ಕೊಡುತ್ತಿದೆ, ಭ್ರಷ್ಟಚಾರಕ್ಕೆ ಮೂಲವಾದಂತಹ ವ್ಯವಸ್ಥೆಯನ್ನು ಮಾಡಿಕೊಡುತ್ತಿದೆ, ಮುಖ್ಯಮಂತ್ರಿಗಳು ಇದಕ್ಕೆ ಪ್ರೇರಣೆಯನ್ನು ಕೊಡುತ್ತಿದ್ದಾರೆ" ಎನ್ನತಕ್ಕಂಥ ನೇರವಾದ ಆಪಾದನೆಯನ್ನು ಮಾಡಿ, ಅದರ ಮುಖ್ಯಸ್ಥರು ಇವತ್ತು ರಾಜೀನಾಮೆ ಕೊಟ್ಟು, ಕರ್ನಾಟಕ ರಾಜ್ಯದ ಜನತೆಗೆ ತಿಳಿ ಹೇಳಬೇಕಾದರೆ, ನೀವು ಇದು ಗಹನವಾದ ವಿಚಾರವಲ್ಲ ..

ಅಧ್ಯಕ್ಷರು: Please, ನೀವು ಕುಳಿತುಕೊಳ್ಳಿ.

ಶ್ರೀ ಕೆ. ಎಂ. ಶಿವಲಿಂಗೇಗೌಡ: ಇದು ಗಹನವಾದ ವಿಚಾರವಲ್ಲ ಎಂದು ನೀವು ತೀರ್ಪು ಕೊಡುವುದಾದರೆ, ಈ ರಾಜ್ಯದ ಜನತೆಗೆ ಏನು ಎನ್ನುವುದು ಗೊತ್ತಾಗುತ್ತದೆ. ದಯಮಾಡಿ ರೂಲ್ 60 ಅಡಿಯಲ್ಲಿ ಚರ್ಚೆಗೆ ಅವಕಾಶ ಕೊಟ್ಟು, ಇದರ ಮಹತ್ವವನ್ನು ಎತ್ತಿ ಹಿಡಿಯಿರಿ.

ಅಧ್ಯಕ್ಷರು: ಈಗಾಗಲೇ ನಾನು ಬೆಳಿಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ಕೊಟ್ಟಂತಹ adjournment motion ಏನಿತ್ತು, ಅದರ ಬಗ್ಗೆ ಬಹಳ ಸ್ಪಷ್ಟವಾಗಿ ಹೇಳಿದ್ದೇನೆ. ಕೇವಲ ಒಂದೇ ವಿಚಾರಕ್ಕೆ ಸೀಮಿತವಾಗಿರದೆ ಅನೇಕ ವಿಚಾರಗಳು ಅದರಲ್ಲಿ ಏಕಕಾಲದಲ್ಲಿ ಪ್ರಸ್ತಾಪವಾಗಿದೆ. Adjournment motion Rule 60ರಲ್ಲಿ ಬರಬೇಕಾದರೆ, ಯಾವುದೇ ನಿರ್ದಿಷ್ಟವಾದಂತಹ ವಿಚಾರ ಮಾತ್ರ ಅದರಲ್ಲಿ ಇರಬೇಕು. ತಾವು preliminary submission ಮಾಡಿದಾಗ ಐದು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದರಿಂದ, ಇದು ರೂಲ್ 60ರ ಅಡಿಯಲ್ಲಿ ಚರ್ಚಿಸಲು ಬರುವುದಿಲ್ಲ ಎನ್ನುವಂತಹ ತೀರ್ಮಾನವನ್ನು ನಾನು ಈಗಾಗಲೇ ಕೊಟ್ಟಿದ್ದೇನೆ. ಆದ್ದರಿಂದ ಮಾನ್ಯ ಸದಸ್ಯರೆಲ್ಲರೂ ಸಹಕರಿಸಬೇಕು. ಈಗಾಗಲೇ ತೀರ್ಮಾನ ಕೊಟ್ಟಂತೆ ನಿಯಮ 69ರ ಅಡಿಯಲ್ಲಿ ಚರ್ಚೆಯನ್ನು ಪ್ರಾರಂಭಿಸಲು ಸಹಕರಿಸಬೇಕೆಂದು ನಾನು ಎಲ್ಲರಲ್ಲಿ ವಿನಂತಿಯನ್ನು ಮಾಡುತ್ತೇನೆ. ತಾವು ದಯವಿಟ್ಟು ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ ಸಹಕರಿಸಿ.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ನೀವು ಇದರಲ್ಲಿ ನಾವು ಬೇರೆ ಬೇರೆ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದೇವೆ, ಒಂದೇ ವಿಚಾರ ಪ್ರಸ್ತಾಪ ಮಾಡಿಲ್ಲವೆಂದು ಹೇಳಿದಿರಿ. ಇದರಲ್ಲಿ ಬೇರೆ ಬೇರೆ matters ಎಲ್ಲಿದೆ? ನಾವು ಬೇರೆ ಬೇರೆ ವಿಚಾರಗಳನ್ನು ಎಲ್ಲಿ ತೆಗೆದುಕೊಂಡು ಬಂದಿದ್ದೇವೆ? ಏಕೆ ಅವರು ರಾಜೀನಾಮೆ ಕೊಟ್ಟರು ಎನ್ನುವುದಕ್ಕೆ ಕಾರಣಗಳು ಇರುವುದರಿಂದ ಅದನ್ನು ಹೇಳಿದ್ದೇವೆ. ಬೇರೆ ಬೇರೆ ವಿಚಾರಗಳಿಗೆ ಚರ್ಚೆ ಮಾಡಲಿಕ್ಕೆ ನಾವು ಹೋಗುತ್ತೇವೆಯೇ? Why he has resigned? You only ….

ಅಧ್ಯಕ್ಷರು: ನಿಮ್ಮ ಭಾಷಣದಲ್ಲೇ ಪ್ಯಾರಾ 5ನ್ನು ನೋಡಿ. 'ಹಾಗೆಯೇ

ಶ್ರೀ ಸಿದ್ದರಾಮಯ್ಯ: ನಾನು ಅದನ್ನು ಓದಿದ್ದೇನೆ ಸ್ವಾಮಿ.

ಅಧ್ಯಕ್ಷರು: ನೀವು ಬೇರೆ ಬೇರೆ ವಿಚಾರಗಳಿಗೆ ಹೋಗಿದ್ದೀರಿ.

ಶ್ರೀ ಸಿದ್ದರಾಮಯ್ಯ: ನಾನು ಅದನ್ನು ಓದಿದ್ದೇನೆ. ನಾವು ಪ್ರವಾಹ ವಿಚಾರದ ಕುರಿತು ಚರ್ಚೆ ಮಾಡಬೇಕೆಂದು ಅದರಲ್ಲಿ ಹೇಲಿದ್ದೇನೆಯೇ? ಅಥವಾ ಮತ್ತೆ ಬೇರೆ ಯಾವುದೇ ವಿಷಯದ ಬಗ್ಗೆ ಚರ್ಚೆ ಮಾಡಬೇಕೆಂದು

ಹೇಳಿದ್ದೇನೆಯೇ? ಇಲ್ಲ ಪ್ರವಾಹದ ಮೇಲೆ ಚರ್ಚೆ ಮಾಡಬೇಕು, ಇದರ ಮೇಲೂ ಚರ್ಚೆ ಮಾಡಬೇಕು ಎಂದು ಕೊಟ್ಟಿದ್ದೀನಾ?

ಶ್ರೀ ಎಸ್. ಸುರೇಶ್ ಕುಮಾರ್ : Speaker is not bound to give reasons for his decisions ಅಂತ ಒಂದು Ruling ಇದೆ. ದಯವಿಟ್ಟು ನೀವು ಕಾರಣವನ್ನು ಕೊಡುವ ಅಗತ್ಯವಿಲ್ಲ, ನೀವು ರೂಲಿಂಗ್ ಕೊಟ್ಟಿದ್ದೀರಿ, ಅದನ್ನು ಅನುಸರಿಸಲಿ.

ಶ್ರೀ ಸಿದ್ದರಾಮಯ್ಯ: 5 ವರ್ಷದಲ್ಲಿ reconsider ಮಾಡಿರುವುದು ಇಲ್ಲವೆಂಬುದನ್ನು ತೋರಿಸಿಬಿಡಲಿ, ಸ್ಪೀಕರ್ ರೂಲಿಂಗ್ ಕೊಟ್ಟ ಮೇಲೆ reconsider ಮಾಡಿರುವುದನ್ನು ತೋರಿಸುತ್ತೇನೆ.

ಅಧ್ಯಕ್ಷರು: Reconsider ಮಾಡಬಾರದೆಂದೇನೂ ಇಲ್ಲ. That is different.

ಶ್ರೀ ಸಿದ್ದರಾಮಯ್ಯ: ಮತ್ತೆ ಮಾಡಿ.

ಶ್ರೀ ಎಸ್. ಸುರೇಶ್ ಕುಮಾರ್ : Not at the gun point.

ಶ್ರೀ ಸಿದ್ದರಾಮಯ್ಯ: ಗನ್ ಪಾಯಿಂಟ್, ಗನ್ ಪಾಯಿಂಟ್ ಎಂದು ನೀವೇ ಹೇಳಿಬಿಟ್ಟರೆ ಹೇಗೆ? Request ಮಾಡುವುದು ಗನ್ ಪಾಯಿಂಟಾ? ಅನೇಕ ಸದಸ್ಯರನ್ನು expel ಮಾಡುತ್ತೇವೆ. Expel ಮಾಡಿದವರನ್ನೆಲ್ಲಾ ಒಳಗೆ ತೆಗೆದುಕೊಂಡಿಲ್ಲವೇ? ಇಲ್ಲಿ ಆ ರೀತಿಯ ರೂಲಿಂಗ್‌ಗಳು ಬದಲಾವಣೆಯಾಗಿಲ್ಲವೇ? There are so many precedents, in which the ruling of the Speaker has been reconsidered. ನಿಮ್ಮ decision Ok; ಅದಕ್ಕೆ ಗೌರವ ಕೊಡುತ್ತೇವೆ. ನಾನೇನು ಹೇಳುತ್ತೇನೆಂದರೆ ಈರೀತಿಯವು ಇದ್ದಾವೆ, ಇದು ಬಹಳ ಪ್ರಾಮುಖ್ಯವಾಗಿರುವುದರಿಂದ, ಬಹಳ ಮಹತ್ವದ ವಿಚಾರವಾಗಿರುವುದರಿಂದ ಇದನ್ನು ನಿಯಮ 69ರಡಿಯಲ್ಲಿ ಬೇಡ ನಿಯಮ 60ರಡಿಯಲ್ಲೇ ತೆಗೆದುಕೊಳ್ಳಬೇಕು, ದಯಮಾಡಿ ನಮಗೆ ನಿಯಮ 60ರಡಿಯಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಿ, ಅದರಲ್ಲಿ ಬೇರೆ ಬೇರೆ ಯಾವ ವಿಚಾರಗಳನ್ನು ಕೇಳಿಲ್ಲ, ಪ್ರವಾಹದ ಬಗ್ಗೆ ಚರ್ಚೆ ಮಾಡುವ ಬಗ್ಗೆ

ಎಂದು ಕೊಟ್ಟಿದ್ದೇವೆಯೇ? ಪ್ರವಾಹದ ಬಗ್ಗೆ ರಾಜ್ಯಪಾಲರಿಗೆ ವರದಿ ಕೊಟ್ಟಿದ್ದಾರೆ, ಅಲ್ಲಿ Belekeri port ನಲ್ಲಿ 5 ಲಕ್ಷ tones Iron Ore disappeared ಎಂದು ಕೊಟ್ಟಿದ್ದಾರೆ. They are all connected matters.

ಅಧ್ಯಕ್ಷರು: No, ಲೋಕಾಯುಕ್ತ ರಾಜೀನಾಮೆ ಒಂದೇ ವಿಷಯದ ಬಗ್ಗೆ ಕೇಳಬೇಕಾಗಿತ್ತು.

ಶ್ರೀ ಸಿದ್ದರಾಮಯ್ಯ: ರಾಜೀನಾಮೆಯನ್ನು ಈ ಕಾರಣಗಳಿಗೋಸ್ಕರ ಕೊಟ್ಟಿದ್ದಾರೆಂದು ಹೇಳಲಾಗಿದೆ, because of the no co-operation by the government. We are requesting you to please reconsider your ruling.

ಅಧ್ಯಕ್ಷರು: ಮಾನ್ಯ ಮುಖ್ಯಮಂತ್ರಿಗಳು ಮಾತನಾಡುವರು.

ಶ್ರೀ ಬಿ. ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ನಾನು ಕೂಡ ಪ್ರತಪಕ್ಷದಲ್ಲಿ ಕುಳಿತು ಅನೇಕ ವರ್ಷಗಳ ಕಾಲ ಕೆಲಸ ಮಾಡಿದ್ದೇನೆ, ಸಿದ್ದರಾಮಯ್ಯನವರು ಉಪ ಮುಖ್ಯಮಂತ್ರಿಗಳಾಗಿ ಮತ್ತು ಪ್ರತಿಪಕ್ಷದ ನಾಯಕರಾಗಿ ಕೆಲಸ ಮಾಡಿದ್ದಾರೆ. ಮಹತ್ತರವಾದ ವಿಷಯ ಬಂದಾಗ Preliminary submission ಸಂದರ್ಭದಲ್ಲಿ Rule 60 ಅಡಿಯಲ್ಲಿ ಚರ್ಚೆಯಾಗಬೇಕೆಂದು ಚರ್ಚೆ ಪ್ರಾರಂಭ ಮಾಡಿ, Preliminary Submission ಮಾಡಿದ ಮೇಲೆ ಆ ಕಡೆ ಇದ್ದಾಗ ತಮ್ಮ ಮನವೊಲಿಸಲು ಪ್ರಯತ್ನ ಮಾಡಿದ್ದೇವೆ.ನಂತರ ತಾವು ಈಗಾಗಲೇ ಒಂದು ruling ಕೊಟ್ಟು ನಿಯಮ 69ನಲ್ಲಿ ಚರ್ಚೆಗೆ ತೆಗೆದುಕೊಳ್ಳಿ ಎಂದು ಹೇಳಿದ್ದಿರಿ. ನನಗೆ ನೆನಪಿರುವ ಹಾಗೆ ಸಭಾಧ್ಯಕ್ಷರು ಕೊಟ್ಟ ತೀರ್ಪಿನ ವಿರುದ್ಧವಾಗಿ ನಡೆದುಕೊಂಡಿರುವುದು ಇದುವರೆಗೆ ರಾಜ್ಯ ಇತಿಹಾಸದಲ್ಲಿಲ್ಲ. ಒಂದು ರಾಷ್ಟ್ರೀಯ ಪಕ್ಷದ ಅನುಭವವಿರುವ ಹಿರಿಯ ಸದಸ್ಯರಿಗೆ ತಮ್ಮ ತೀರ್ಪನ್ನು ಮರುಪರೀಶೀಲನೆ ಮಾಡಿ ಎಂದು ಕೇಳುವ ಅಧಿಕಾರವಿದೆ, ಕೇಳುತ್ತಾರೆ. ತಪ್ಪು ಎಂದು ನಾನು ಹೇಳುವುದಿಲ್ಲ, ಅದು ಪ್ರತಿಪಕ್ಷದ ಕರ್ತವ್ಯವಾಗಿದೆ. ಇವೆಲ್ಲವನ್ನೂ ಕೇಳಿದ ಮೇಲೆ, ನಾನೇ ಬೆಳಿಗ್ಗೆ, ನೀವು ಲೋಕಾಯುಕ್ತರ ಬಗ್ಗೆ ಮೂರು ದಿವಸ ಚರ್ಚೆ ಮಾಡಿ

ಎಂದು ಹೇಳಿದೆ. ಸಮಯ ತಾನೇ ಬೇಕು? ಇದರಲ್ಲೇನಿದೆ ಎಂಬ ಸತ್ಯ ಹೊರಬರಬೇಕು ತಾನೇ? ಅಂತಿಮವಾಗಿ ನಾವು ನೀವು ಇಬ್ಬರೂ ಸೇರಿ ರಾಜ್ಯದ ಜನತೆಗೆ ವಾಸ್ತವಿಕ ಸತ್ಯಸಂಗತಿಯನ್ನು ತಿಳಿಸಿ, ಎಲ್ಲಾದರೂ ಕೊರತೆಗಳಿದ್ದರೆ ತಿದ್ದುಕೊಂಡು ಹೋಗೋಣ, ಪ್ರಜಾಪ್ರಭುತ್ವದಲ್ಲಿ ಯಾರೂ ದೊಡ್ಡವರಲ್ಲ, ಪ್ರಜಾತಂತ್ರ ವ್ಯವಸ್ಥೆಯಲ್ಲಿ ನಮ್ಮ ಮಾಲೀಕರು ಜನ, ಅವರ ಎಲ್ಲವನ್ನು ಗಮನಿಸುತ್ತಿದ್ದಾರೆ. ಅದಕ್ಕೋಸ್ಕರ ಸುದೀರ್ಘವಾದ ಚರ್ಚೆಯಾದರೆ, ಲೋಕಾಯುಕ್ತ ಯಾವಾಗ ಅಧಿಕಾರಕ್ಕೆ ಬಂತು ಯಾವಾಗ suo-motu ಅಧಿಕಾರವನ್ನು ಕೊಟ್ಟರು, ವಾಪಸ್ ತೆಗೆದುಕೊಂಡರು, ನಂತರ ಲೋಕಾಯುಕ್ತರು ಮಾಡಿದ ತೀರ್ಮಾನಗಳ ವಿರುದ್ಧ, ಯಾವ ಅಧಿಕಾರಿಗಳ ಮೇಲೆ ಕ್ರಮವನ್ನು ತೆಗೆದುಕೊಂಡರು, ಅಂಥವರನ್ನು ಹೇಗೆ ಅಧಿಕಾರಕ್ಕೆ ವಾಪಸ್ ತೆಗೆದುಕೊಂಡು ಬಂದರು, ಆ ತರಹ ಅಕ್ಷಮ್ಯ ಅಪರಾಧವನ್ನು ನಾವೇನೂ ಮಾಡಿಲ್ಲ. ಲೋಕಾಯುಕ್ತರು ಹೇಳಿದ ತೊಂಬತ್ತು ಭಾಗ ಕೆಲಸವನ್ನು ಮಾಡಿದ್ದೇವೆ, ಅನುಷ್ಠಾನಗೊಳಿಸಿದ್ದೇವೆ. ಉತ್ತರ ಕೊಡುವಾಗ ಮಾಹಿತಿ ಕೊಡುತ್ತೇನೆ. ಅದಕ್ಕೋಸ್ಕರ ನಿಮಗೇನು ಬೇಕು, ಸ್ವಾಮಿ? ಜನತೆಗೆ ನ್ಯಾಯ ಸಿಗಬೇಕು, ಚರ್ಚೆಗೆ ಅವಕಾಶವಾಗಬೇಕು, ವಾಸ್ತವಿಕ ಸ್ಥಿತಿಗೆ ಬಂದು ಅಂತಿಮವಾದ ಒಂದು ಸಂದೇಶವನ್ನು ಪ್ರತಿಪಕ್ಷವಾಗಿ ನೀವೇನು ತಿಳಿಸುತ್ತೀರಿ, ಆಡಳಿತ ಪಕ್ಷವಾಗಿ ನಾವೇನು ತಿಳಿಸಬೇಕೋ ತಿಳಿಸುತ್ತೇವೆ. ಹೀಗಿರುವಾಗ ಒಂದು ಸತ್ಸಂಪ್ರದಾಯವನ್ನು ಹಾಕಿಕೊಂಡು ಬಂದಿದ್ದೇವೆ. Parliamentary system ನಲ್ಲಿ ಏನು ತೀರ್ಮಾನಗಳಿವೆ ಎಲ್ಲವನ್ನೂ ನಮ್ಮ ಕಾನೂನು ಸಚಿವರು ಈಗಾಗಲೇ ಹೇಳಿದ್ದಾರೆ. ಸಿದ್ದರಾಮಯ್ಯನವರಿಗೆ ಹೇಳುತ್ತೇನೆ, ಹಠ ಮಾಡುತ್ತಿರುವವರು ನಾವಲ್ಲ ಸ್ವಾಮಿ, ನೀವು, ನಿಮ್ಮ ಉದ್ದೇಶವೇನೆಂಬುದು ನನಗೆ ಅರ್ಥವಾಗುತ್ತಿಲ್ಲ, ದಯಮಾಡಿ ಈ ಬಗ್ಗೆ 2 ದಿವಸ ಚರ್ಚೆ ಮಾಡಿ, ನಾನು ಚರ್ಚೆ ಮಾಡುವುದಕ್ಕೆ ಕುಳಿತಿದ್ದೇನೆ, ಈ ಕಡೆ ಆ ಕಡೆಯ ಎಲ್ಲಾ ಸದಸ್ಯರು ಕುಳಿತು ಚರ್ಚೆ ಮಾಡಿ, ಹೊಸ ಬೆಳಕನ್ನು ನೀವು ಚೆಲ್ಲಿ, ಏತಕ್ಕೆ ಲೋಕಾಯುಕ್ತರಿಗೆ ಈ ಪರಿಸ್ಥಿತಿ ಬಂತು, ಅದಕ್ಕೆ ಯಾರು ಕಾರಣರು, ಎಲ್ಲವನ್ನೂ ಚರ್ಚೆ ಮಾಡೋಣ. ನಾನು ಒಂದು ಮಾತನ್ನು ಹೇಳುತ್ತೇನೆ,

ಲೋಕಾಯುಕ್ತರ ಬಗ್ಗೆ ನನಗೆ ಅತ್ಯಂತ ಗೌರವವಿದೆ. ಬಹಳ ವರ್ಷಗಳಿಂದ ನಾನು ನೋಡಿದ್ದೇನೆ, ಒಂದು ದಿವಸ ಅದರ ಬಗ್ಗೆ ಒಂದು ಸಣ್ಣ ಒಡಕಿನ ನಾವು ಮಾತನ್ನು ಹೇಳಿಲ್ಲ, ಅವರು ಹೇಳಿದಂಥ ಎಲ್ಲಾ ತೀರ್ಪಿಗೆ ತಲೆಬಾಗಿದ್ದೇವೆ, ಆ ಎಲ್ಲಾ ಮಾಹಿತಿಯನ್ನು ಇಲ್ಲಿ ನಾನು ಕೊಡುತ್ತೇನೆ. ಅದಾದ ಮೇಲೆ 2 ತಿಂಗಳ ಹಿಂದೆ ಸ್ವತಃ ಲೋಕಾಯುಕ್ತರು ಕೃಷ್ಣಾದಲ್ಲಿ ಮುಖ್ಯ ಕಾರ್ಯದರ್ಶಿ ಮತ್ತು ನಮ್ಮನ್ನು ಕಂಡಾಗ ಅವರು ಏನೇನು ಕೇಳಿದ್ದರು, ಏನೇನು ಆಗಬೇಕೆಂದು ಹೇಳಿದ್ದರು, ಅವಕ್ಕೆ 48 ಗಂಟೆಯಲ್ಲಿ ಮಂಜೂರಾತಿಯನ್ನು ಕೊಟ್ಟು ಅದನ್ನು ಕಾರ್ಯರೂಪಕ್ಕೆ ತಂದು, ರಾಜ್ಯ ಹಿತದೃಷ್ಟಿಯಿಂದ ಅವರ ಕೆಲಸ ಸುಲಲಿತವಾಗಿ ನಡೆಯಬೇಕೆಂದು ಮಾಡಿದ್ದೇವೆ. ಈಗ ಚರ್ಚೆಯಾಗಬೇಕಾಗಿರುವುದು, ಅವ್ಯವಹಾರಗಳು, ಅಲ್ಲಿದ್ದಂಥ 5 ಲಕ್ಷಟನ್ ಕಬ್ಬಿಣದ ಅದಿರು ಪತ್ತೆ ಇಲ್ಲವೆನ್ನುವುದು ಸಣ್ಣ ವಿಷಯವಲ್ಲ, ಆಘಾತ ತರುವಂಥ ಸಂಗತಿ, ನೋವು ತರುವಂಥ ಸಂಗತಿ. ಇದಕ್ಕೆ ಪರಿಹಾರ ಹುಡುಕಬೇಕಾಗಿದೆ. ಎಲ್ಲಾಯಿತು, ಏಕಾಯಿತು ಯಾವ್ಯಾವ ವರ್ಷಗಳಲ್ಲಿ ಏನಾಯಿತು, ಎಲ್ಲಾ ವಿಷಯವನ್ನು ಚರ್ಚೆ ಮಾಡೋಣ, ಇನ್ನು ಮುಂದೆ ಇಂಥ ಒಂದು ಸಣ್ಣ ಘಟನೆಯಾಗದಂತೆ ನೋಡಿಕೊಳ್ಳೋಣ, ಇಲ್ಲಿ ಯಾರು ಅಕ್ಷಮ್ಯ ಅಪರಾಧ ಮಾಡಿದ್ದಾರೆ, ಅವರ ಮೇಲೆ ಯಾವ ರೀತಿ ಶಿಕ್ಷೆಯಾಗಬೇಕು ಆ ಬಗ್ಗೆ ನೀವು ಸಲಹೆ ಕೊಡಿ. ಅಂತಿಮ ನಾನಲ್ಲ, ಕುರ್ಚಿಗಾಗಿ ಎಲ್ಲಾ ರೀತಿ ಹೊಂದಾಣಿಕೆ ಮಾಡಿಕೊಳ್ಳಲು ನಾನು ಸಿದ್ಧನಿಲ್ಲ, ಸಮಸ್ಯೆಗೆ ಪರಿಹಾರ ಸಿಗಬೇಕು, ಅವನು ಎಷ್ಟೇ ದೊಡ್ಡವನಿದ್ದರೂ ತಪ್ಪಿತಸ್ಥರಿಗೆ ಶಿಕ್ಷೆಯಾಗಬೇಕು. ಸರ್ಕಾರದ ಸಂಪತ್ತನ್ನು ಲೂಟಿ ಮಾಡಲು ನಾನು ಇಲ್ಲಿ ಬಂದು ಕುಳಿತಿಲ್ಲ, ಯಾರು ಕಾನೂನು ಬಾಹಿರವಾಗಿ ಅವ್ಯವಹಾರ ಮಾಡಿದ್ದಾರೆ, ಅವರ ಮೇಲೆ ಏನು ಕ್ರಮ ತೆಗೆದುಕೊಳ್ಳುವ ಬಗ್ಗೆ ಸಲಹೆ ಕೊಡಿ. ಇಲ್ಲಿ ಕುಳಿತು ಚರ್ಚೆ ಮಾಡೋಣ. ಅದು ಬಿಟ್ಟು ಚರ್ಚೆಗೆ ಅವಕಾಶ ಕೊಡದೆ, ವಾಸ್ತವಿಕತೆಯನ್ನು ತಿಳಿದುಕೊಳ್ಳುವುದಕ್ಕೆ ಅವಕಾಶ ಕೊಡದೆ, ತಾವು ಹೀಗೆ ಆಗಬೇಕೆಂದು ಸ್ಪೀಕರ್ ಅವರಿಗೆ dictate ಮಾಡುವುದು, direct ಮಾಡುವುದು, ಇದುವರೆವಿಗೂ ನಾನೆಂದೂ ನೋಡಿಲ್ಲ ಸ್ವಾಮಿ, ನಾನು ಅಲ್ಲಿ ಕುಳಿತು ಕೆಲಸ ಮಾಡಿದ್ದೇನೆ, ರಿಕ್ವೆಸ್ಟ್ ಮಾಡಿಕೊಂಡಿದ್ದೀರಿ, ಆಯಿತು, ವಾದ

ಮಂಡನೆ ಮಾಡಿದ್ದಾರೆ, ಫೈನಲ್ ಆಗಿ ಹೇಳಿದ್ದಾರೆ, ಈ ಬಗ್ಗೆ 2 ದಿವಸ ಚರ್ಚೆಯಾಗಲಿ ಸ್ವಾಮಿ, ನಾವು ಸಿದ್ಧರಿದ್ಧೇವೆ. ಮೊದಲನೆ ದಿವಸ ನಾನು ಪ್ರತಿಪಕ್ಷದ ನಾಯಕರಲ್ಲಿ ವಿನಂತಿ ಮಾಡಿದ್ದೇನೆ, ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲೂ ನಾನು ವಿನಂತಿ ಮಾಡಿದ್ದೇನೆ, ಸುಲಲಿತವಾಗಿ ಚರ್ಚೆ ಮಾಡೋಣ ಅನೇಕ ವಿಷಯಗಳು ಹೊರಗೆ ಬರಲಿ, ಸತ್ಯ ಈಚೆಗೆ ಬರಲಿ. ಪ್ರತಿಪಕ್ಷದಲ್ಲಿ ನೀವು, ಸಿದ್ದರಾಮಣ್ಣ ಎಷ್ಟು ಬಲವಾಗಿರುತ್ತೀರಿ, ಎಷ್ಟು ಬೆಳಕನ್ನು ಚೆಲ್ಲುತ್ತೀರಿ, ಅಷ್ಟು ನಾವು ಗಟ್ಟಿ ಇರುತ್ತೇವೆ, ನಾವು ತಿದ್ದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ, ನೀವು ವೀಕ್ ಆಗಬೇಕೆಂದು ನಾನು ಅಪೇಕ್ಷೆ ಪಡುವುದಿಲ್ಲ. ನೀವು ಈ ರೀತ ವೀಕ್ ಆಗಬಾರದಿತ್ತು. ನೀವು ಸ್ಟ್ರಾಂಗ್ ಆಗಬೇಕೆನ್ನುವುದು ನನ್ನ ಅಪೇಕ್ಷೆ, ನಾನು ನಿಮ್ಮಲ್ಲಿ ವಿನಂತಿ ಮಾಡುತ್ತೇನೆ.

ಶ್ರೀ ಸಿದ್ದರಾಮಯ್ಯ: ರೂಲ್ 60ರಲ್ಲಿ ಚರ್ಚೆಯಾದರೆ, ನಿಯಮ 60 ರಡಿಯಲ್ಲಿ ಚರ್ಚೆಯಾದರೆ, What is that you are going to loose? Why can't you agree for the discussion under rule 60, if you are so interested and serious about the matter?

ಶ್ರೀ ಬಿ. ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು): ಸ್ವಾಮಿ, ವಿಷಯ ಚರ್ಚೆಯಾಗಬೇಕೆನ್ನುವುದೇ ನಿಮ್ಮ ಭಾವನೆ ಇದ್ದಿದ್ದರೆ ಇಷ್ಟುವರೆವಿಗೂ ಸಮಯವನ್ನು ವ್ಯರ್ಥ ಮಾಡುತ್ತಿರಲಿಲ್ಲ, 69ರಲ್ಲಿ ಚರ್ಚೆ ಆರಂಭ ಮಾಡುತ್ತಿದ್ದಿರಿ, ನಿಮ್ಮ ಹತ್ತಿರ ಏನೂ ಸರಕಿಲ್ಲ ಸ್ವಾಮಿ, ಸುಮ್ಮನೆ ಸರ್ಕಾರದ ಮೇಲೆ ಗೂಭೆ ಕೂರಿಸಿ ಆ ಲೋಕಾಯುಕ್ತರನ್ನು ಇಲ್ಲಿ ಎಳೆತರುವ ಪ್ರಯತ್ನ ಮಾಡುತ್ತಿದ್ದೀರೆಂದು ಹೇಳುವುದು ಅನಿವಾರ್ಯವಾಗಿದೆ, ಬೇರೆ ಏನೂ ಇಲ್ಲ, ನಿಮ್ಮ ಉದ್ದೇಶ ಪ್ರಾಮಾಣಿಕವಾಗಿದ್ದರೆ ಚರ್ಚೆಯನ್ನು ಶುರು ಮಾಡಿ, ನೀವು ಅಧಿಕಾರದಲ್ಲಿದ್ದಾಗ ಏನು ಮಾಡಿದ್ದೀರೆಂದು ಗೊತ್ತಿದೆ, ನೀವು ಏತಕ್ಕೆ ಲೋಕಾಯುಕ್ತಕ್ಕೆ ಅಧಿಕಾರವನ್ನು ಕೊಡಲಿಲ್ಲ? ನೋಡಿ, ನಾನು ಬಹಳ ಸಂಯಮದಿಂದ ಇದ್ದೇನೆ. ಇತಿಮಿತಿಯನ್ನು ದಾಟಲು ತಯಾರಿಲ್ಲ, ದಯಮಾಡಿ ನೀವು ಚರ್ಚೆಯನ್ನು ಪ್ರಾರಂಭ ಮಾಡಿ

(ಗೊಂದಲ)

ಶ್ರೀ ಸಿದ್ದರಾಮಯ್ಯ: ಈಗಾಗಲೇ ಲೋಕಾಯುಕ್ತದ ಮೇಲೆ ಗೂಬೆ ಕೂರಿಸಿದ್ದೀರಿ, ನಾವೇನು ಕೂರಿಸುವ ಅಗತ್ಯವಿಲ್ಲ, ನಾವೇನು ಹೊಸದಾಗಿ ಬಂದು ಗೂಬೆ ಕೂರಿಸುವ ಅಗತ್ಯವಿಲ್ಲ.

(ಗೊಂದಲ)

ಅಧ್ಯಕ್ಷರು: ಕೊನೆಯದಾಗಿ, ದಯವಿಟ್ಟು ತಮ್ಮ ಸ್ಥಾನಗಳಿಗೆ ಹೋಗಿ, 69ರ ಅಡಿಯಲ್ಲಿ ಚರ್ಚೆ ಮಾಡಿ, ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಿ, ಸದನ ನಡೆಸುವುದಕ್ಕೆ ಅವಕಾಶ ಕೊಡಿ ಎಂದು ಎಲ್ಲಾ ಸದಸ್ಯರಲ್ಲಿ ವಿನಂತಿ ಮಾಡುತ್ತೇನೆ, ದಯವಿಟ್ಟು ಸಹಕರಿಸಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ನಿಯಮ 60ರಡಿಯಲ್ಲಿ ಚರ್ಚೆ ಮಾಡಿದರೆ ಆಕಾಶ ಕಳಚಿಬಿದ್ದು ಹೋಗುವುದಿಲ್ಲ.

ಶ್ರೀ ಬಸವರಾಜ ಬೊಮ್ಮಾಯಿ: ನಿಯಮ 69ರಡಿಯಲ್ಲಿ ಚರ್ಚೆ ಮಾಡಿದರೆ ಏನಾಗುತ್ತದೆ.

ಶ್ರೀ ಸಿದ್ದರಾಮಯ್ಯ: ನಿಯಮ 60ರಡಿಯಲ್ಲಿ ಚರ್ಚೆ ಮಾಡಿದರೆ ಏನಾಗುತ್ತದೆ? Why rule 60 is there? Let us remove rule 60 then?

ಶ್ರೀ ಬಸವರಾಜ ಬೊಮ್ಮಾಯಿ: 69ರಡಿಯಲ್ಲೂ ಚರ್ಚೆಯಾಗುತ್ತದೆ ಸರ್ಕಾರ ಉತ್ತರ ಕೊಡುತ್ತದೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರು ತಮ್ಮ ತೀರ್ಪನ್ನು reconsider ಮಾಡುವುದಕ್ಕೆ ಮನವಿ ಮಾಡುತ್ತಿದ್ದೇನೆ.

(ಗೊಂದಲ)

ಅಧ್ಯಕ್ಷರು: ಮಾನ್ಯ ಗೌರವಾನ್ವಿತ ಸದಸ್ಯರಲ್ಲಿ ವಿನಂತಿ ಮಾಡುವುದೇನೆಂದರೆ, ಈಗಾಗಲೇ ತೀರ್ಮಾನ ಕೊಟ್ಟಾಗಿದೆ ರೂಲ್ 69ರಡಿಯಲ್ಲಿ ಇದನ್ನು ಚರ್ಚೆಗೆ ತೆಗೆದುಕೊಳ್ಳೋಣ, ಚರ್ಚೆ, ಮಾಡೋಣ, ದಯವಿಟ್ಟು ಸಹಕರಿಸಿ, ಸದನ ಸುಗಮವಾಗಿ ನಡೆಯಲಿ, ಅನೇಕ ಸದಸ್ಯರು

ಬಹಳಷ್ಟು ವಿಚಾರಗಳನ್ನು ಸದನದ ಮುಂದೆ ಪ್ರಸ್ತಾಪ ಮಾಡುವವರಿದ್ದಾರೆ, ಶೂನ್ಯವೇಳೆಯಲ್ಲಿ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡುತ್ತೇವೆಂದು ಆಗಲೇ ಕೊಟ್ಟಿದ್ದಾರೆ. ಗಮನ ಸೆಳೆಯುವ ಸೂಚನೆಗಳು ಸಾಕಷ್ಟು ಇವೆ.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ಇಲ್ಲಿ ನೋಡಿ, ಹಿಂದೆ ನಿಯಮ 69ರಲ್ಲಿ ಚರ್ಚೆಗಳಾಗಿರುವುದು ಇಲ್ಲಿ ಇವೆ. ರೂಲಿಂಗ್ ಅನ್ನು re-consider ಮಾಡಿರುವುದು ಇದೆ.

ಅಧ್ಯಕ್ಷರು: ಅದರ ಬಗ್ಗೆ ನಾನೇನೂ ಹೇಳುವುದಿಲ್ಲ.

ಶ್ರೀ ಬಸವರಾಜ ಬೊಮ್ಮಾಯಿ: Sir, you have considered everything and you have given your ruling. ಈ ಸದನದ ಸತ್ಸಂಪ್ರದಾಯದ ಪ್ರಕಾರ ರೂಲಿಂಗ್ ಅನ್ನು ಫಾಲೋ ಮಾಡೋಣ. ನಾವು ಯಾವ ಚರ್ಚೆಯನ್ನೂ ಮೊಟಕುಗೊಳಿಸುತ್ತಿಲ್ಲ. ಉದ್ದೇಶವೇನು? ಚರ್ಚೆಯಾಗಬೇಕು, ಉತ್ತರ ಸಿಗಬೇಕು, ರಾಜ್ಯದ ಜನತೆಗೆ ಸತ್ಯ ಗೊತ್ತಾಗಬೇಕು. ಅದು ನಿಯಮ 69ರಲ್ಲಿಯೇ ಆಗುತ್ತದೆ. ನಿಯಮ 60, 69 ಎಂದು ಹೇಳಿ ನಾವು ವಿಷಯವನ್ನು ಏಕೆ ಮರೆ ಮಾಚಿ ಹಾಕಬೇಕು? ಏಕೆ ಈ ಹಠ, to re-consider this?

ಶ್ರೀ ಸಿದ್ದರಾಮಯ್ಯ: ಕುಡಿಯುವ ನೀರಿನ scarcity ಬಗ್ಗೆ discussion was allowed under Rule 60.

ಶ್ರೀ ಬಸವರಾಜ ಬೊಮ್ಮಾಯಿ: ಹೌದು ಸರ್, ಬೇಕಾದಷ್ಟು ಇವೆ. ನಾವೇನು ಇಲ್ಲವೆಂದು ಡಿನ್ಯೈ ಮಾಡುತ್ತಿಲ್ಲ.

ಶ್ರೀ ಸಿದ್ದರಾಮಯ್ಯ: Then why you are insisting for Rule 69?

ಶ್ರೀ ಬಸವರಾಜ ಬೊಮ್ಮಾಯಿ: Hon'ble Speaker has already given the ruling.

ಅಧ್ಯಕ್ಷರು:ಚರ್ಚೆಗೆ ಸಮಯ ನಿಗಧಿ ಮಾಡುವುದಿಲ್ಲ. ಎರಡು ದಿವಸ ಬೇಕಾದರೂ ಚರ್ಚೆ ಮಾಡಿ.

ಶ್ರೀ ಸಿದ್ದರಾಮಯ್ಯ: ನಿಯಮ 60ರಲ್ಲಿ ಕುಡಿಯುವ ನೀರಿನ ಬಗ್ಗೆ ಮೂರು ದಿನ ಚರ್ಚೆ ನಡೆದಿದೆ.

ಅಧ್ಯಕ್ಷರು:ಇದರಲ್ಲಿಯೂ ಚರ್ಚೆ ಮಾಡಿ, ನಾನೇನು ಸಮಯ ನಿಗದಿ ಮಾಡುವುದಿಲ್ಲ.

ಶ್ರೀ ಸಿದ್ದರಾಮಯ್ಯ: ನಾನು ನಿಮ್ಮಲ್ಲಿ ರಿಕ್ವೆಸ್ಟ್ ಮಾಡುತ್ತೇನೆ, it is not going to be a bad precedent. It is not out of the rules of business. It is not out of our Constitution. This is within the rules. ನಾವು Motion ಕೊಟ್ಟಿರುವುದು not under Rules 69.

ಅಧ್ಯಕ್ಷರು: ನಾನು ಮತ್ತೆ ಮತ್ತೆ ವಿನಂತಿ ಮಾಡಿದ್ದೇನೆ, ದಯವಿಟ್ಟು ಸಹಕರಿಸಿ. ದಯವಿಟ್ಟು ತಮ್ಮ ಸ್ಥಾನಗಳಿಗೆ ಹೋಗಿ.

ಈಗ ಸದನವನ್ನು ಅರ್ಧ ಗಂಟೆ ಕಾಲ ಮುಂದೂಡಲಾಗಿದೆ.

(ಸದನವನ್ನು ಅರ್ಧ ಗಂಟೆಯ ನಂತರ ಸೇರುವಂತೆ ಮುಂದೂಡಲಾಯಿತು.)

(ಸದನವು ಪುನಃ ಸಂಜೆ 5 ಗಂಟೆ 44 ನಿಮಿಷಕ್ಕೆ ಪ್ರಾರಂಭವಾದಾಗ ಸನ್ಮಾನ್ಯ ಸಭಾಧ್ಯಕ್ಷರು ಅಧಕ್ಷ್ಯ ಪೀಠದಲ್ಲಿ ಉಪಸ್ಥಿತರಿದ್ದರು.)

(ಸದನ ಬಾವಿಯಲ್ಲಿ ಕಾಂಗ್ರೆಸ್ ಮತ್ತು ಜೆಡಿ(ಎಸ್) ಪಕ್ಷದ ಸದಸ್ಯರು ಧರಣಿಯಲ್ಲಿ ನಿರತರಾಗಿದ್ದರು.)

ಅಧ್ಯಕ್ಷರು: ಈಗ ಎಲ್ಲಾ ಮಾನ್ಯ ಸದಸ್ಯರಲ್ಲಿ ವಿನಂತಿ ಮಾಡಿಕೋಳ್ಳುವುದೇನೆಂದರೆ, ಇವತ್ತು ತಂದಿರುವ ನಿಲುವಳಿ ಸೂಚನೆಯನ್ನು ರೂಲ್ 60 ರಿಂದ ರೂಲ್ 69ಕ್ಕೆ ಬದಲಾವಣೆ ಮಾಡಿ ತೀರ್ಪನ್ನು ಕೊಟ್ಟಿದ್ದೇನೆ. ಆ ತೀರ್ಪನ್ನು ಪ್ರಶ್ನೆ ಮಾಡಿ ಈ ರೀತಿಯಾಗಿ ಧರಣಿ ಮಾಡುವುದು ಸರಿಯಲ್ಲವೆಂಬುದು ನನ್ನ ಭಾವನೆ. ವಿಧಾನ ಸಭೆಯಿಂದ ಜನತೆಗೆ ಒಳ್ಳೆಯ ಸಂದೇಶ ಹೋಗಬೇಕಾಗಿದೆ. ಅತ್ಯಂತ ಗಂಭೀರವಾದ ವಿಚಾರವೆಂದು ತಾವೇನು ಪರಿಗಣನೆ ಮಾಡಿದ್ದೀರಿ ಅದರ ಬಗ್ಗೆ ಚರ್ಚೆ ಮಾಡಲು ಎಲ್ಲರಿಗೂ ಅವಕಾಶ ಆಗುತ್ತದೆ. ರೂಲ್ 60ರ ಅಡಿಯಲ್ಲಿ ತೆಗೆದುಕೊಳ್ಳಬೇಕೆಂದು ತಾವು ಹೇಳುತ್ತಿದ್ದೀರಿ. ಆದರೆ, ಈ ರೂಲ್‌ಅನ್ನು ಸ್ಟ್ರೀಕ್ಟ್ ಆಗಿ ಅನುಸರಿಸಿದರೆ ಕೆಲವೇ

ಕೆಲವು ಸದಸ್ಯರು ಅಂದರೆ, ಯಾರು ಸಹಿ ಮಾಡಿದ್ದಾರೆಯೋ ಅವರುಗಳಿಗೆ ಮಾತ್ರ ಅವಕಾಶ ಆಗುತ್ತದೆ. ಆದರೆ, ರೂಲ್ 69ರ ಅಡಿಯಲ್ಲಿಯಾದರೆ ಎಲ್ಲರೂ ಮಾತನಾಡುವುದಕ್ಕೆ ಅವಕಾಶ ಅಗುತ್ತದೆ. ಹಾಗೆಯೇ ಎಲ್ಲಾ ವಿಚಾರವನ್ನು ಬೆಳಕಿಗೆ ತರುವಂಥ ಒಂದು ಒಳ್ಳೆಯ ಅವಕಾಶ ತಮಗೆಲ್ಲರಿಗೂ ಸಿಗುತ್ತದೆ. ಇದು ಅತ್ಯಂತ ಗಂಭೀರವಾದ ವಿಚಾರವಾಗಿದೆ. ಆದ್ದರಿಂದ, ಇದರ ಬಗ್ಗೆ ಚರ್ಚೆಯಾಗಬೇಕಾಗಿದೆ. ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ, ಇದು ಅತ್ಯಂತ ಗಂಬೀರವಾದಂಥ ವಿಚಾರವಾಗಿರುವುದರಿಂದ ತಮ್ಮ ಸ್ಥಾನಗಳಿಗೆ ಹೋಗಿ ಎಂದು ಮತ್ತೆ ಮತ್ತೆ ಕಳಕಳಿಯಾಗಿ ವಿನಂತಿ ಮಾಡಿಕೊಳ್ಳುತ್ತೇನೆ. ಇಲ್ಲಿರುವ ತಕ್ಕಡಿಯ ಗಾಂಭೀರ್ಯತೆ ಹೋಗಬಾರದೆಂಬ ದೃಷ್ಟಿಯಿಂದ ಮತ್ತು ಅದರ ಗಾಂಭೀರ್ಯತೆ ಹಾಗೆಯೇ ಉಳಿಯಬೇಕೆಂಬ ದೃಷ್ಟಿಯಿಂದ ತಮ್ಮಲ್ಲಿ ಮತ್ತೆ ಮತ್ತೆ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ದಯವಿಟ್ಟು ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ ಚರ್ಚೆಯನ್ನು ಪ್ರಾರಂಭ ಮಾಡೋಣ. ಈ ಒಂದು ಗಂಭೀರವಾದಂಥ ವಿಚಾರದ ಬಗ್ಗೆ ಒಳ್ಳೆಯ ಸಂದೇಶವನ್ನು ಜನತೆಗೆ ಕೊಡೋಣ.

ಶ್ರೀ ಬಂಡೆಪ್ಪ ಕಾಶೆಂಪೂರ್: ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ತಾವು ದೊಡ್ಡ ಮನಸ್ಸು ಮಾಡಿ, ಏಕೆಂದರೆ, ಇದು ರಾಜ್ಯದಲ್ಲಿನ ಅತ್ಯಂತ ಗಂಭೀರವಾದಂಥ ಸಮಸ್ಯೆಯಾಗಿದೆ ಎಲ್ಲರೂ ತಮ್ಮ ಮನಸ್ಸನ್ನು ಒಲಿಸುತ್ತಿದ್ದಾರೆ. ನೀವು ಜನತೆಗೊಂದು ಸಂದೇಶವನ್ನು ಕೊಡಿ.

ಅಧ್ಯಕ್ಷರು: ಒಳ್ಳೆಯ ಸಂದೇಶ ಈ ಸದನದಿಂದ ಹೋಗಬೇಕಾಗದರೆ, ತಾವೆಲ್ಲ ತಮ್ಮ ಸ್ಥಾನಗಳಿಗೆ ಹೋಗಿ ಚರ್ಚೆ ಪ್ರಾರಂಭ ಮಾಡಿದರೆ ಖಂಡಿತ ಆಗುತ್ತದೆ.

ಶ್ರೀ ಸಿ. ಸಿ. ಪಾಟೀಲ್: ಮಾನ್ಯ ಬಂಡೆಪ್ಪ ಕಾಶೆಂಪೂರ್‌ರವರೆ, ಒಳ್ಳೆಯ ಸಂದೇಶ ಕೊಡುವುದಕ್ಕೆ ನಿಮ್ಮ ನಾಯಕರೇ ಇಲ್ಲ.

ಶ್ರೀ ಬಂಡೆಪ್ಪ ಕಾಶೆಂಪೂರ್: ನಮ್ಮ ನಾಯಕರು ಬರುತ್ತಾರೆ.

ಶ್ರೀ ಸಿ. ಸಿ. ಪಾಟೀಲ್: ಅವರು ಹಾಸನ ರಾಜ್ಯಕ್ಕೆ ಏನಾದರೂ ಹೋಗಿದ್ದಾರೆಯೇ?

ಶ್ರೀ ಬಂಡೆಪ್ಪ ಕಾಶೆಂಪೂರ್: ನಾವೆಲ್ಲ ಇಲ್ಲಿದ್ದೇವೆ.

ಶ್ರೀ ಸಿ. ಸಿ. ಪಾಟೀಲ್: ಲೋಕಾಯುಕ್ತರಿಗೆ ಅಧಿಕಾರ ಕೊಡುವುದಕ್ಕೆ ಅವರಿಗೆ ಆಸಕ್ತಿ ಇಲ್ಲ.

ಶ್ರೀ ಬಂಡೆಪ್ಪ ಕಾಶೆಂಪೂರ್: ನಾವೆಲ್ಲ ಕೊಡುತ್ತೇವೆ.

ಅಧ್ಯಕ್ಷರು: ಎಲ್ಲಾ ಸದಸ್ಯರು ತಮ್ಮ ತಮ್ಮ ಸ್ಥಾನಗಳಿಗೆ ತೆರಳಿ ಚರ್ಚೆ ಮಾಡಬೇಕೆಂದು ಎಲ್ಲ ಸದಸ್ಯರಲ್ಲಿ ನಾನು ಮತ್ತೆ ಮತ್ತೆ ವಿನಂತಿ ಮಾಡಿಕೊಳ್ಳುತ್ತೇನೆ.

(ಈ ಹಂತದಲ್ಲಿ ಸದನ ಬಾವಿಯಲ್ಲಿ ಧರಣಿ ಮಾಡುತ್ತಿದ್ದ ಸದಸ್ಯರು ಮಾತನಾಡುತ್ತಿದ್ದರು.)

ಅಧ್ಯಕ್ಷರು: ಸದನದ ಬಾವಿಯಲ್ಲಿ ನಿಂತು ತಾವುಗಳು ಏನೇ ಮಾತನಾಡಿದರೂ ದಾಖಲೆಗೆ ಹೋಗುವುದಿಲ್ಲ. ಚರ್ಚೆ ಮಾಡುವುದಕ್ಕೆ ದಯವಿಟ್ಟು ಸಹಕಾರ ಕೊಡಿ. ಇಲ್ಲಿ ಬಹಳವಾಗಿ ಸ್ಪಷ್ಟವಾಗಿ ಕಾಣುವುದೇನೆಂದರೆ, ಸ್ಪೀಕರ್ ಕೊಟ್ಟಂಥ ರೂಲಿಂಗ್‌ನ ವಿರುದ್ಧವೇ ಈ ಒಂದು ಧರಣಿ ನಡೆಯುತ್ತದೆ. ಎಂಬ ಸಂದೇಶ ಹೋಗುತ್ತದೆ.

(ಈ ಹಂತದಲ್ಲಿ ಮಾನ್ಯ ಸಿದ್ದರಾಮಯ್ಯನವರು ತಮ್ಮ ಸ್ಥಾನಕ್ಕೆ ಹೋದರು)

ಶ್ರೀ ಸಿದ್ದರಾಮಯ್ಯ: ನಾವು ಅಲ್ಲಿ ನಿಂತು ಮಾತನಾಡಿದರೆ ರೆಕಾರ್ಡ್‌ಗೆ ಹೋಗುವುದಿಲ್ಲ. ಆದರೆ, ನೀವು ಮಾತನಾಡುವುದು ಮಾತ್ರ ರೆಕಾರ್ಡ್‌ಗೆ ಹೋಗುತ್ತದೆ. This is not correct. ಮಾನ್ಯ ಅಧ್ಯಕ್ಷರೆ, ನಿಮ್ಮ ರೂಲಿಂಗ್ ಅನ್ನು ಪ್ರಶ್ನೆ ಮಾಡುತ್ತಿಲ್ಲ. We are not against your ruling. ಸ್ಪೀಕರ್‌ಗಳು ಕೊಟ್ಟಿರುವಂಥ ರೂಲಿಂಗ್‌ಅನ್ನು ವಿರೋಧಪಕ್ಷದ ಮನವಿಯ ಮೇರೆಗೆ ಅಥವಾ ಕೆಲವು ಸದಸ್ಯರುಗಳ ಮನವಿ ಮೇರೆಗೆ ರೂಲಿಂಗ್‌ಗಳನ್ನು ಬದಲಾವಣೆ ಮಾಡಿರತಕ್ಕಂಥ ಅನೇಕ ನಿದರ್ಶನಗಳು ಈ ಸದನದಲ್ಲಿ ಆಗಿದೆ. ಮತ್ತೆ ಬೇರೆ ಬೇರೆ ಸದನಗಳಲ್ಲಿಯೂ ಕೂಡ ಆಗಿದೆ. ಮತ್ತೆ ಪಾರ್ಲಿಮೆಂಟ್‌ನಲ್ಲಿಯೂ ಕೂಡ ಆಗಿದೆ. ಆದ್ದರಿಂದ, ಇದರ ಬಗ್ಗೆ ನಾವು ತಮ್ಮಲ್ಲಿ ಮನವಿ ಮಾಡುತ್ತಿದ್ದೇವೆಯೇ ಹೊರತು we are not questioning your ruling, only appealing to reconsider your ruling, because it is serious matter,very

important matter. ಈಗ ಲೋಕಾಯುಕ್ತರು ರಾಜೀನಾಮೆ ಕೊಟ್ಟಿದ್ದಾರೆ ಮತ್ತೆ ಅಲ್ಲಿ ಉಪ ಲೋಕಾಯುಕ್ತರು ಇಲ್ಲ. ಇವತ್ತು ಲೋಕಾಯುಕ್ತರ ರಾಜೀನಾಮೆ accept ಆದರೆ ಇಡೀ ವ್ಯವಸ್ಥೆ ಅಂದರೆ, Lokayuktha Institution ನ ವ್ಯವಸ್ಥೆ ಕುಸಿದು ಹೋಗುತ್ತದೆ. ಆದ್ದರಿಂದ ಈ ವಿಚಾರವನ್ನು ರೂಲ್ 60ರ ಅಡಿಯಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಿ ಎಂದು ಕೇಳುತ್ತಿದ್ದೇವೆ.

ಅಧ್ಯಕ್ಷರು: ತಮ್ಮ ಸ್ಥಾನಗಳಿಗೆ ದಯಮಾಡಿ ಹೋಗಿ ಎಂದು ಕೊನೆಯದಾಗಿ ಬಾವಿಯಲ್ಲಿರುವ ಸದಸ್ಯರಲ್ಲಿ ವಿನಂತಿ ಮಾಡುತ್ತೇನೆ.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ದಯಮಾಡಿ ತಾವು ತಪ್ಪು ತಿಳಿದುಕೊಳ್ಳಬಾರದೆಂದು ನಾನು ನಿಮಗೆ ಹೇಳುತ್ತಿದ್ದೇನೆ. ತಾವು ಈ ಸರ್ಕಾರಕ್ಕೆ ಸ್ವಲ್ಪ ಕಿವಿ ಹಿಂಡಿ. Ball is in your court, Please reconsider your ruling, Please allow discussion under rule 60.

ಅಧ್ಯಕ್ಷರು: ನಾನು rule 60 is cogent ಎಂದು ಹೇಳಿರುತ್ತೇನೆ.

ಶ್ರೀ ಸಿದ್ದರಾಮಯ್ಯ: It is very important, very serious, concerning the people, concerning the state, ಲೋಕಾಯುಕ್ತರವರು ಭ್ರಷ್ಟಾಚಾರದ ವಿರುದ್ಧ ಹೋರಾಟ ಮಾಡತಕ್ಕಂಥವರು. ಭ್ರಷ್ಟಾಚಾರಕ್ಕೆ ಈ ಸರ್ಕಾರ ಕುಮ್ಮಕ್ಕು ಕೊಡುತ್ತಿದೆ, ಅವರು ಇವತ್ತು ರಾಜೀನಾಮೆಯನ್ನು ಕೊಟ್ಟಿದ್ದಾರೆ. ಯುದ್ಧವನ್ನು ಸಾರಿದ್ದಾರೆ ಎನ್ನತಕ್ಕಂಥದ್ದು, ನೇರವಾಗಿ ಮುಖ್ಯಮಂತ್ರಿಗಳ ಮೇಲೆ ಆಪಾದನೆಗಳು ಇದ್ದಾವೆ.

ಅಧ್ಯಕ್ಷರು: ಈಗ ಸದನವನ್ನು ನಾಳೆ ಬೆಳಗ್ಗೆ 11.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು 5 ಗಂಟೆ 51 ನಿಮಿಷಕ್ಕೆ ಮುಕ್ತಾಯಗೊಂಡು ದಿನಾಂಕ:30–6–2010 ರಂದು ಬುಧವಾರ ಬೆಳಗ್ಗೆ:11.00 ಗಂಟೆಗೆ ಪುನಃ ಸಮಾವೇಶಗೊಳ್ಳುವುದು.)

5. ಅನುಬಂಧ I

ಹೇಮಾವತಿ ಜಲಾಶಯದಿಂದ ಮಂಚನಬೆಲೆ ಜಲಾಶಯಕ್ಕೆ ನೀರು ಹರಿಸುವುದು